
# ರಂಗಸಂಪನ್ನರು



## ಡಾ|| ಬಿ. ವಿ. ವೈಕುಂಠರಾಜು

● ಸತೀಶ್ ಶಿಲೆ

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಡಾ|| ಬಿ. ವಿ. ವೈಕುಂಠರಾಜು

ಸತೀಶ್ ಶಿಲೆ

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

B. V. Vaikuntaraju : A Monograph in Kannada
by Satish Shile

Published by
R. S. Dalawai
Registrar, Karnataka Nataka Academy
Ravindra Kalakshetra, J.C. Road, Bangalore - 560 002

First Impression : March, 2004
Pages : 78 + 6 Photos
Cover Design : H. K. Dwarakanath (Dwaraki Rangayana)
© Author

Printed by
Lipi Mudrana, No. 1, Bugle Rock Road, Bangalore - 560 004
Ph : 080-26522061
Price : Rs. 40 /-

ಡಾ|| ಬಿ. ವಿ. ವೈಕುಂಠರಾಜು : ರಂಗಸಂಪನ್ನರ ಕಿರು ಜೀವನ ಚರಿತ್ರೆ

ಲೇಖಕರು : ಸತೀಶ್ ಶಿಲೆ

ಮುಖಪುಟ ವಿನ್ಯಾಸ : ಎಚ್. ಕೆ. ದ್ವಾರಕಾನಾಥ್ (ದ್ವಾರಕಿ ರಂಗಾಯಣ)

ಪ್ರಕಾಶಕರು : ಆರ್. ಎಸ್. ದಳವಾಯಿ
ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು - ೫೬೦ ೦೦೨

ಪ್ರಥಮ ಮುದ್ರಣ : ಮಾರ್ಚ್ ೨೦೦೪

ಪುಟ : ೭೮ + ೬

ಮುದ್ರಣ : ಲಿಪಿ ಮುದ್ರಣ,
ನಂ. ೧, ಬ್ಯೂಗಲ್ ರಾಕ್ ರಸ್ತೆ, ಬೆಂಗಳೂರು - ೪
೦೮೦-೨೬೫೨೨೦೬೧

ಬೆಲೆ : ರೂ. ೪೦/-

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ಭೂತಪೂರ್ವ ಅಧ್ಯಕ್ಷರಾಗಿದ್ದ ಪ್ರೊ : ಸಿ.ಜಿ. ಕೃಷ್ಣಸ್ವಾಮಿ ಅವರು ತಮ್ಮ ಅವಧಿಯಲ್ಲಿ ಪ್ರಾರಂಭಿಸಿದ ಅನೇಕ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು – 'ರಂಗಸಂಪನ್ನರು' ಪುಸ್ತಕ ಮಾಲಿಕೆಯ ಪ್ರಕಟಣೆ. ಇದರ ಮಹತ್ವದ ಉಪಯುಕ್ತತೆಯನ್ನು ಮನಗಂಡು 'ರಂಗಸಂಪನ್ನರು' ಮಾಲಿಕೆಯನ್ನು ಈ ಅಕಾಡೆಮಿಯೂ ಮುಂದುವರಿಸಿರುತ್ತಿದೆ. ಕರ್ನಾಟಕ ನಾಟಕ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾದ ಶ್ರೀ ಗಿರೀಶ್ ಕಾರ್ನಾಡರಿಂದ ಮೊದಲುಗೊಂಡು ಕಳೆದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಸಿ.ಜಿ. ಕೃಷ್ಣಸ್ವಾಮಿಯವರ ವರೆವಿಗೂ ಆಗಿ ಬಂದ ಎಲ್ಲ ಅಧ್ಯಕ್ಷರುಗಳ ಪರಿಚಯ ಕೃತಿಯನ್ನು (ಈಗಾಗಲೇ ಹಿಂದಿನ ಅಕಾಡೆಮಿ ಹೊರತಂದಿರುವ ನಾಟಕ ಅಕಾಡೆಮಿ ಅಧ್ಯಕ್ಷರುಗಳನ್ನು ಹೊರತುಪಡಿಸಿ) ನಾಡಿನ ಪ್ರಸಿದ್ಧ ರಂಗ ಚಿಂತಕರುಗಳ ಮೂಲಕ ಸಿದ್ಧಗೊಳಿಸಿ ಹೊರತರುವ ಕಾರ್ಯ ಈ ಪುಸ್ತಕ ಮಾಲಿಕೆಯಡಿ ಹಮ್ಮಿಕೊಂಡಿದ್ದೇವೆ. ಈ ಪ್ರಕಟಣಾ ಕಾರ್ಯದಲ್ಲಿ ನೆರವಾದ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತೆಗಳು.

ಡಾ. ಬಿ. ವಿ. ವೈಕುಂಠರಾಜು ಅವರು ಪ್ರಜಾವಾಣಿ ಕನ್ನಡ ದಿನಪತ್ರಿಕೆಯ ಸಾಪ್ತಾಹಿಕದ ಸಂಪಾದಕರಾಗಿದ್ದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಅನೇಕ ರಂಗ ಪ್ರಯೋಗಗಳ ವಿಮರ್ಶೆಯ ಮೂಲಕ ಎಲ್ಲ ನಾಟಕಾಸ್ತರ ಗಮನ ಸೆಳೆದಿದ್ದರು. ಹೀಗಾಗಿ ವೈಕುಂಠರಾಜು ಅವರು ಕರ್ನಾಟಕ ನಾಟಕ ಅಕಾಡೆಮಿಗೆ (1987 ರಿಂದ 1989) ಅಧ್ಯಕ್ಷರಾಗಿ ನೇಮಕಗೊಂಡಾಗ ಸಹಜವಾಗಿ ಎಲ್ಲರೂ ಕುತೂಹಲದಿಂದ ನಾಟಕ ಅಕಾಡೆಮಿಯತ್ತ ನೋಡುವಂತಾಗಿದ್ದಿತು. ತಮ್ಮ ಅವಧಿಯಲ್ಲಿ ಎಲ್ಲರ ನಿರೀಕ್ಷೆಯಂತೆ ನಾಟಕ ಅಕಾಡೆಮಿಯನ್ನು ರಂಗಭೂಮಿಯಲ್ಲಿ ತೊಡಗಿಸಿಕೊಂಡ ಎಲ್ಲರಿಗೂ ಎಟಕುವಂತೆ ಮಾಡಿದರು. ರಂಗಭೂಮಿ ವ್ಯಾಪ್ತಿಗೆ ಬರುವ ಪ್ರತಿಯೊಂದರಲ್ಲೂ, ಪ್ರತಿಯೊಬ್ಬರಲ್ಲೂ ಬೆರೆತುಕೊಳ್ಳುವ ಇವರ ಸ್ವಭಾವದಿಂದಾಗಿ ನಗರದ ರಂಗಕರ್ಮಿಗಳು ಆಗಾಗ ಅಕಾಡೆಮಿಯ ಮೆಟ್ಟಿಲೇರುವಂತೆ ಮಾಡಿದರು. ಮುಂದಿನ ದಿನಗಳಲ್ಲಿ ರಂಗಾಸಕ್ತರು ಮತ್ತು ಅಕಾಡೆಮಿಯ ನಡುವಿನ ನಂಟು ಹೆಚ್ಚು ನಿಕಟಗೊಂಡವು. ತಮ್ಮ 'ರಂಗಭೂಮಿ' ಕಾಲಂಗಳ ಮೂಲಕ ಆ ಮೊದಲು ಏನೆಲ್ಲಾ ಚಿಂತನೆಗಳನ್ನು ಮುಂದಿಟ್ಟಿದ್ದರೋ ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ನಡೆಸಿದರು. ಇವರ ನಂತರ ಬಂದ ನಾಟಕ ಅಕಾಡೆಮಿಗಳು ಇದೇ ನಿಲುವು ತೆಗೆದುಕೊಂಡು ಚಟುವಟಿಕೆ ನಡೆಸಿದರು. ಪ್ರಸ್ತುತ ಅಕಾಡೆಮಿಗೆ ಆ ನಿಟ್ಟಿನಲ್ಲಿ ಮುನ್ನಡೆಯಲು ಬಹಳ ಸಹಕಾರಿಯಾಗಿರುತ್ತದೆ.

ಅವರ ಕುರಿತು ಈ ಮಾಲಿಕೆಯಡಿಯಲ್ಲಿ ಒಂದು ಕೃತಿ ಹೊರತರಲು ಒಪ್ಪಿಗೆ ನೀಡಿದ ಶ್ರೀ ವೈಕುಂಠರಾಜು ಅವರಿಗೂ ಕೃತಿ ರಚಿಸಿಕೊಟ್ಟ ಯುವ ಬರಹಗಾರ ಶ್ರೀ ಜಿ. ಟಿ. ಸತೀಶ್ ಅವರಿಗೂ ಅಕಾಡೆಮಿಯ ಧನ್ಯವಾದಗಳು. ಶ್ರೀ ವೈಕುಂಠರಾಜುರವರ ಸ್ನೇಹ ಸಂಪರ್ಕ ಬಹಳ ಹಿಂದಿನಿಂದಲೂ ಇಟ್ಟುಕೊಂಡಿದ್ದ ಅಕಾಡೆಮಿಯ ಸದಸ್ಯರಾದ ಶ್ರೀ ಹೆಚ್. ಜಿ. ಸೋಮಶೇಖರ ರಾವ್ ಅವರು ಈ ಕೃತಿ ಹೊರಬರಲು ಬಹಳ ಸಹಾಯಕರಾಗಿದ್ದಾರೆ. ಈ ಮಾಲಿಕೆಯ ಪ್ರಕಟಣೆಯಲ್ಲಿ ಹೆಚ್ಚಿನ ಆಸ್ಥೆವಹಿಸಿದ ಅಕಾಡೆಮಿಯ ಸದಸ್ಯರಾದ ಗೆಳೆಯ ಶಶಿಧರ ಭಾರಿಘಾಟ್ ಅವರಿಗೆ ಬಹಳವಾಗಿ ಆಭಾರಿಯಾಗಿದ್ದೇನೆ. ನನ್ನ ಕೆಲಸವನ್ನು ಹಗುರಗೊಳಿಸಿದ್ದಕ್ಕಾಗಿ ಅವರಿಗೆ ವಿಶೇಷ ನಮನಗಳು. ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರಿಗೂ, ಅಕಾಡೆಮಿಯ ಎಲ್ಲ ಸದಸ್ಯರಿಗೂ, ಬಹಳ ಕಡಿಮೆ ಅವಧಿಯಲ್ಲಿಯೇ ಈ ಮಾಲಿಕೆಯ ಅನೇಕ ಕೃತಿಗಳು ಹೊರಬರಲು ನೆರವಾದದ್ದಕ್ಕಾಗಿ ಹೃತ್ಪೂರ್ವಕ ನಮನಗಳು. ಪ್ರಕಟಣೆ ಹೊರಬರಲು ಎಂದಿನಂತೆ ರಿಜಿಸ್ಟ್ರಾರ್ ಆದ ಆರ್. ಎಸ್. ದಳವಾಯಿ ಅವರು ಹಾಗೂ ಅಕಾಡೆಮಿಯ ಸಿಬ್ಬಂದಿ ವರ್ಗ ಬಹಳವಾಗಿ ಶ್ರಮಿಸಿರುತ್ತದೆ. ಅದಕ್ಕಾಗಿ ಅವರೆಲ್ಲರಿಗೂ ನನ್ನ ನಮನಗಳು.

ಈ ಕೃತಿಯ ಮುದ್ರಕರಾದ ಲಿಪಿ ಮುದ್ರಣ, ಬೆಂಗಳೂರು ಅವರಿಗೆ ಸಮಯದ ಒತ್ತಡದ ನಡುವೆಯೂ ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಹೊರಬರಲು ಶ್ರಮವಹಿಸಿದ್ದಕ್ಕಾಗಿ ಶ್ರೀ ಬಾಕಿನ ಅವರಿಗೆ ಧನ್ಯವಾದಗಳು.

*ಆರ್. ನಾಗೇಶ್*

# ಲೇಖಕರ ಮಾತು

ನನಗೆ, ವೈಕುಂಠರಾಜು ಅವರ ಪರಿಚಯ ಚಿಕ್ಕಂದಿನಿಂದಲೂ ಇದ್ದರೂ, ಅವರಿಗೆ ನನ್ನ ಪರಿಚಯವಾದದ್ದು ಇತ್ತೀಚೆಗೆ. ಮೈಸೂರಿನ ಮಾನಸ ಗಂಗೋತ್ರಿ ಪತ್ರಿಕೋದ್ಯಮ ವಿಭಾಗಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಬಂದಾಗ, ನಾನು ಪಕ್ಕದ ಇಂಗ್ಲೀಷ್ ವಿಭಾಗದಲ್ಲಿ ವಿದ್ಯಾರ್ಥಿ.

ಪತ್ರಿಕೋದ್ಯಮ ವಿಭಾಗದ ಮಿತ್ರರಾದ ನಾಗರಾಜ್ ಹೊನ್ನೂರು ಹಾಗೂ ನವೀನ್ ಜೋಸೆಫ್‌ರಿಂದ, ಅವರ ಪರಿಚಯವಾಯಿತು. ಗೆಸ್ಟ್ ಹೌಸ್‌ನಲ್ಲಿ ರಾತ್ರಿ ಹನ್ನೆರಡು, ಒಂದರ ತನಕ ಹರಟೆ. ಹಾಗೆ ಒಂದು ದಿನ ನನ್ನನ್ನು ಕರೆದು, 'ಅಕಾಡೆಮಿಯವರು, ನನ್ನ ಮೇಲೆ ಪುಸ್ತಕ ಬರೆಸುತ್ತಾರಂತೆ, ನೀನೇ ಬರಿ' ಅಂದರು. ಒಪ್ಪಿದೆ.

ಕೆಲವು ಅನಿವಾರ್ಯ ಕಾರಣಗಳು ಹಾಗೂ ಹೇರಳವಾಗಿದ್ದ ಸೋಮಾರತನದಿಂದ ಪುಸ್ತಕ ಮುಗಿಯಲು ತಡವಾಯಿತು. ಬರವಣಿಗೆ ಸಂದರ್ಭದಲ್ಲಿ ಸಹಕರಿಸಿದ ಹಿರಿಯ ವಿಮರ್ಶಕ ಪ್ರೊ.ಜಿ.ಎಚ್. ನಾಯಕ, ರಂಗ ಕರ್ಮಿ ನಾರಾಯಣ ರಾಯಚೂರ್, ದಾವಣಗೆರೆ ಹಾಲಪ್ಪನವರು, ಚಿತ್ರದುರ್ಗದ ವೆಂಕಣ್ಣಚಾರ್ ಇವರೆಲ್ಲರಿಗೂ ವಂದಿಸಲೇಬೇಕು. ಬರವಣಿಗೆಗೆ ಅವಕಾಶ ನೀಡಿದ ಅಕಾಡೆಮಿ ಅಧ್ಯಕ್ಷರಾದ ಆರ್. ನಾಗೇಶ್, ವೈಯಕ್ತಿಕ ಸಂಗತಿಗಳನ್ನು ಕಲೆಹಾಕಲು ಸಹಕರಿಸಿದ ವೈಕುಂಠರಾಜು ಅವರ ತಾಯಿ ಚೌಡಮ್ಮನವರು, ಅಣ್ಣ ಬಿ.ವಿ. ಲಿಂಗರಾಜು ಅವರಿಗೆ ನನ್ನ ಥ್ಯಾಂಕ್ಸ್.

ಪುಸ್ತಕದ ಹಿಂದೆ ನನ್ನ ದೊಡ್ಡ ಮಿತ್ರ ತಂಡವಿದೆ. ಹೈದರಾಬಾದಿನ ಸುನೀಲ್ ಭಾದ್ರಿ, ಹೊನ್ನೂರಿನ ನಾಗರಾಜ ಚೆನ್ನೈನ ನಂದೀಶ್, ಚಾಮರಾಜನಗರದ ವಿನಯ್, ಕೊಟ್ಟೂರಿನ ನಿರಂಜನ್, ಚಿತ್ರದುರ್ಗದ ಮಂಜುನಾಥಸ್ವಾಮಿ, ಶಶಿಧರ್, ನವೀನ್ ಜೋಸೆಫ್... ಹೀಗೆ ಪಟ್ಟಿ ಬೆಳೆಯುತ್ತದೆ.

ಇವರೆಲ್ಲರಿಗಿಂತ ಮುಖ್ಯವಾಗಿ ನನ್ನ ಬರವಣಿಗೆ ಬಗ್ಗೆ ವಿಶೇಷ ಆಸಕ್ತಿವಹಿಸಿ, ಕೇಳಿದ್ದನ್ನೆಲ್ಲ ಹೇಳಿದ, ಪುಸ್ತಕ ಒದಗಿಸಿದ ವೈಕುಂಠರಾಜು ಅವರಿಗೆ ನಾನು ಋಣಿ.

ಸತೀಶ್ ಶಿಲೆ, ಎಂ.ಎ., (ಇಂಗ್ಲೀಷ್)
ವಿಜಯ ಟೈಮ್ಸ್, ಚಿತ್ರದುರ್ಗ

## ಇವರು ವೈಕುಂಠರಾಜು...

ಅಲ್ಲಿ ಎಲ್ಲವೂ ಮೌನ. ಸುತ್ತ ನೆರೆದವರಿಗೆಲ್ಲ 'ಮಾತೇ' ಮರೆತುಹೋಗಿದೆಯೇನೋ ಎಂಬ ಭಾವ! ಹಾಸಿಗೆ ಮೇಲಿನ ಜೀವ ಅನಂತದೆಡೆಗೆ ದೃಷ್ಟಿ ಹಾಯಿಸಿ ಏನನ್ನೋ ತೀವ್ರ ಏಕಾಗ್ರತೆಯಿಂದ ವೀಕ್ಷಿಸುತ್ತಿರುವಂತೆ ತೋರುತ್ತಿತ್ತು. ಅವರದು ಒಂದರ್ಥದಲ್ಲಿ ಹೊಸ್ತಿಲ ಮೇಲಿನ ಬದುಕು. ಸಾವು – ಬದುಕುಗಳ ಮಧ್ಯ ಸ್ಥಿತಿ. ಎದುರಿಗಿರುವುದೆಲ್ಲಾ ಸ್ಪಷ್ಟವಾಗಿ ಕಾಣುತ್ತಿದ್ದರೂ ಅದಾವುದೂ ನೆನಪಿನ ಗಣಿಯಲ್ಲಿ ಶೇಖರಗೊಳ್ಳುತ್ತಿಲ್ಲ. ಮತ್ತೆ ಮತ್ತೆ ಬಂದು ಹೋಗುವ ಶ್ವೇತ ವಸ್ತ್ರದ ನರ್ಸ್‌ಗಳು ನಿಜವಾಗಿಯೂ ದೇವಲೋಕದ ಅಪ್ಸರೆಯರೇ? ಊಹ್ಞೂಂ. ಯಾವುದೂ ಅರ್ಥವಾಗುತ್ತಿಲ್ಲ.

ಮಾಡಬಹುದಾದ ಪ್ರಯತ್ನಗಳನ್ನೆಲ್ಲಾ ಮಾಡಿ, ವೈದ್ಯರು ಸೋತು, ಕನ್ನಡಕ ಕಳಚಿ ಮೇಜಿನ ಮೇಲಿಟ್ಟು ನಿಟ್ಟುಸಿರುಬಿಟ್ಟರು. ಅಪ್ಪನ ಕಣ್ಣುಗಳು ಅವರ ನಂತರ ಮತ್ತಾರಿಗಾದರೂ ಕಣ್ಣಾಗಲಿ ಎಂದು ಮಗ ಈಗಾಗಲೇ 'ಐ' ಬ್ಯಾಂಕ್‌ಗಳನ್ನು ಸಂಪರ್ಕಿಸುತ್ತಿದ್ದಾನೆ. ಅಂತಿಮ ದರ್ಶನಕ್ಕೇನೋ ಎಂಬಂತೆ ದೂರದೂರುಗಳಿಂದ ನೆಂಟರಿಷ್ಟರು, ಹಿತೈಷಿಗಳು ಬಂದು ಹೋಗುತ್ತಿದ್ದಾರೆ. ಈ ಮಧ್ಯೆ, ಆಸ್ಪತ್ರೆಯ ಖರ್ಚಿಗೆಂದು ಮಿತ್ರರು ನೀಡುತ್ತಿದ್ದ ಅಷ್ಟು – ಇಷ್ಟು ಹಣವನ್ನೆಲ್ಲಾ ಪಕ್ಕದಲ್ಲೇ ಇದ್ದ ವ್ಯಕ್ತಿಯೊಬ್ಬ ಜೇಬಿಗಿಳಿಸುತ್ತಿದ್ದಾನೆ. ಇದಾವುದೂ ಆ ಜೀವದ ಮೆದುಳಿಗೆ ಅರ್ಥವಾಗುತ್ತಿಲ್ಲ ! ಒಂದೇ ಮಾತಿನಲ್ಲಿ ಹೇಳುವುದಾದರೆ, ಅವರ ಮೆದುಳು ವಿಶ್ರಾಂತಿಯಲ್ಲಿತ್ತು !

ಅದು ವಾರ್ಡ್ ನಂ. 206. ಮಲ್ಲಿಗೆ ಆಸ್ಪತ್ರೆ , ಬೆಂಗಳೂರು !

ಅಲ್ಲಿ ಮಲಗಿರುವವರೇ ಬಿ.ವಿ. ವೈಕುಂಠರಾಜು.

ಹತ್ತಾರು ಕ್ಷೇತ್ರಗಳಲ್ಲಿ ಕಳೆದುಹೋಗಿದ್ದ ಮೆದುಳು ದೀರ್ಘಕಾಲದ ನಂತರ ಸ್ವಲ್ಪ ವಿಶ್ರಾಂತಿ ಬಯಸಿ ಹೀಗೆ ಯಾವ ಪ್ರಚೋದನೆಗೂ ಪ್ರತಿಕ್ರಿಯಿಸದೆ ಸುಮ್ಮನಾಗುತ್ತದೇನೋ? ರಂಗಭೂಮಿ, ಪತ್ರಿಕೋದ್ಯಮ, ಸೃಜನಶೀಲ ಸಾಹಿತ್ಯ, ಸೃಜನೇತರ ಬರಹಗಳಲ್ಲೇ ಬಹಳಷ್ಟು ಕಾಲ ಮುಳುಗಿಹೋಗಿದ್ದ ಮನಸ್ಸೊಂದು ಮೂರ್‍ನಾಲ್ಕು ದಿನಗಳ ಕಾಲ ಕೋಮಾ ಅನುಭವಿಸಿ ಆ ನಂತರ ಚೇತರಿಸಿಕೊಂಡಿತು. ಸಾವು ನಿಶ್ಚಿತ ಎಂದು ಭಾವಿಸಿದ್ದವರ ಕಣ್ಣುಗಳಲ್ಲೆಲ್ಲಾ ಅಚ್ಚರಿ !

"ಬದಲಾವಣೆ" ಇವರ ಬಯಕೆ. ಯಥಾಸ್ಥಿತಿಯನ್ನು ಬಹಳಕಾಲದ ಮಟ್ಟಿಗೆ ಸಹಿಸಲಾರರು. ಅದೇ ಕಾರಣ ಬೇರೆ ಬೇರೆ ವಿಚಾರಗಳಿಗೆ, ಹೊಸಸಂಗತಿಗಳಿಗೆ ಸದಾ ಸಿದ್ಧವಾಗುವ ಪತ್ರಿಕೋದ್ಯಮ ಇವರ ದಾರಿಯಾಯಿತು. ಭವನದಲ್ಲಿದ್ದುಕೊಂಡೇ

ಅನುಭಾವದ ರುಚಿ ತೋರಿಸುವ 'ರಂಗಭೂಮಿ'ಆಸಕ್ತಿಯ ಕ್ಷೇತ್ರವಾಯಿತು. ಮನಸ್ಸುಗಳ ಪಿಸುಮಾತಿಗೆ ಕಿವಿಗೊಡುವ ಇವರ ಉತ್ಸಾಹ ಕತೆ ಬರೆಸಿತು, ಕಾದಂಬರಿ ಬರೆಸಿತು.

ಈ ಮೇಲಿನ ಮೂರು ಕ್ಷೇತ್ರಗಳಿಗೂ ಇವರ ಕೊಡುಗೆ ಇದ್ದರೂ, ರಂಗಭೂಮಿಯ ಕಡೆಗೇ ಹೆಚ್ಚಿನ ಒಲವು. ರಂಗದ ಮೇಲಿದ್ದಾಗ ಯಾವ 'ಅಹಂ'ಗಳೂ ಕೆಲಸಕ್ಕೆ ಬರುವುದಿಲ್ಲ, ಪಾತ್ರ ಯಾವುದಾದರೇನು, ಎಲ್ಲರೂ ಕಲಾವಿದರಷ್ಟೆ ! ರಂಗಪ್ರಯೋಗ ಮತ್ತೊಂದು ಜಗತ್ತಿಗೆ ಕೊಂಡೊಯ್ಯುತ್ತಲೇ, ಸುತ್ತಲ ಜಗತ್ತಿನೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಜೊತೆಗೆ ಪ್ರತೀ ಪ್ರಯೋಗವೂ 'ವರ್ತಮಾನ'ದಲ್ಲಿರುತ್ತದೆ. ಕಾಳಿದಾಸ, ಶಕುಂತಲೆಯನ್ನು ಸೃಷ್ಟಿಸಿ ಶತಮಾನಗಳೇ ಉರುಳಿರಬಹುದು, ಆದರೆ , ಆ ನಾಟಕ ಇಂದು ಪ್ರಯೋಗವಾದರೆ, ಶಕುಂತಲೆ ಈ ಹೊತ್ತಿನವಳು. ನಾಳೆಯ ಪ್ರದರ್ಶನದಲ್ಲಿ ಅವಳು, ನಾಳೆಯ ಶಕುಂತಲ! ಈ ವೈವಿಧ್ಯ ರಂಗಭೂಮಿಗೆ ಮಾತ್ರ ಸಾಧ್ಯ. ರಂಗಭೂಮಿ, ಕಾಲದ ಬದಲಾವಣೆಗಳೊಂದಿಗೆ ಹೊಂದಿಕೊಂಡ ಕಾರಣವೇ . ಅದು ಇಂದಿಗೂ ಜೀವಂತವಾಗಿದೆ. ಈ ಎಲ್ಲಾ ಕಾರಣಗಳಿಗಾಗಿ ರಂಗಭೂಮಿ ಇವರ ಆಸಕ್ತಿಯ ಕ್ಷೇತ್ರ.

## ಹುಟ್ಟೂರು, ವಿದ್ಯಾಭ್ಯಾಸ

ವೈಕುಂಠರಾಜು ಹುಟ್ಟಿದ್ದು ಮೇ 15. 1937 ರಂದು. ತಂದೆ ವೆಂಕಟರಮಣಪ್ಪ , ತಾಯಿ ಚೌಡಮ್ಮ. ಇವರ ಊರು ಚಿತ್ರದುರ್ಗದಿಂದ ನಾಲ್ಕು ಮೈಲಿಗಳಷ್ಟು ದೂರದಲ್ಲಿರುವ ಗುಡ್ಡದ ರಂಗವ್ವನಹಳ್ಳಿ. ಹಲವು ಗುಡ್ಡಗಳ ಮಧ್ಯೆ ಇರುವುದರಿಂದ ಈ ಊರಿನ ಹೆಸರಿನೊಂದಿಗೆ "ಗುಡ್ಡ" ಸೇರಿಕೊಂಡಿದೆ. ಯಾವುದೋ ಒಂದು ಕಾಲದಲ್ಲಿ ಇದೇ ಊರಿನ ರಂಗವ್ವ ಎಂಬಾಕೆ ಚಿತ್ರದುರ್ಗದ ಅರಸರ ದಾಸಿಯಾಗಿದ್ದ ಕಾರಣದಿಂದ ಊರಿಗೆ ಆ ಹೆಸರು ಬಂದಿರಬಹುದೆಂದು ಕೆಲವರ ಲೆಕ್ಕಾಚಾರ.

ಇವರ ಹಿರಿಯರು ಇಂದಿನ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಸನಪ ಗ್ರಾಮದಿಂದ ವಲಸೆ ಬಂದವರು. ಅವರೆಲ್ಲ ಹಿಂದೆ ಸಣ್ಣಪುಟ್ಟ ಪ್ರಾಂತ್ಯಗಳನ್ನು ಆಳಿದವರು. ಕಾಲಕ್ರಮೇಣ ಅರಸುತನದ ಅವನತಿಯ ಪರಿಣಾಮವಾಗಿ ಇಲ್ಲಿಗೆ ನಡೆದು ಬಂದರು.

ತಂದೆ ವೆಂಕಟರಮಣಪ್ಪ , ಕಡುಕಷ್ಟದಲ್ಲಿ ಬೆಳೆದವರು. ಅವರು ತೀರಾ ಚಿಕ್ಕಂದಿನಲ್ಲೇ ತಂದೆ – ತಾಯಿಯರನ್ನು ಕಳೆದುಕೊಂಡರು. ತಂದೆಯ ಪ್ರೇಯಸಿ ಇವರನ್ನು ಮತ್ತು ಇವರ ಅಣ್ಣ ಚಿದಂಬರಪ್ಪನನ್ನು ಸಾಕುವ ಹೊಣೆ ಹೊತ್ತರು.

ಅಂದಿನ ದಿನಗಳಲ್ಲಿ ಆಕೆ ಎಷ್ಟೇ ಕಷ್ಟಪಟ್ಟರೂ ಈ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲಾಗಲಿಲ್ಲ. ವಿದ್ಯಾಭ್ಯಾಸ ಇಲ್ಲದಿದ್ದರೇನಂತೆ, ವೆಂಕಟರಮಣಪ್ಪ ಹಠ ಯೋಗಿ. ಎಂದಿಗೂ ಸ್ವಾಭಿಮಾನ ಬಿಟ್ಟು ಬದುಕಲಿಲ್ಲ. ಆಗ ಮೈಸೂರು ರಾಜ್ಯದ ಪ್ರಜಾಪ್ರತಿನಿಧಿ ಸಭೆಗೆ ಮತದಾರರಾಗಲು 25 ರೂ. ಗಳ ಕಂದಾಯ ನೀಡಬೇಕಿತ್ತು. ತಾನು ಮತದಾರನಾಗಲೇಬೇಕೆಂದು ಹಠತೊಟ್ಟು ತಮ್ಮ ಆಸೆ ಪೂರೈಸಿಕೊಂಡಿದ್ದರು.

ತಾಯಿ ಚೌಡಮ್ಮ, ಸುಶಿಕ್ಷಿತೆ. ಅಂದಿನ ದಿನಗಳಲ್ಲಿಯೇ ಚಿತ್ರದುರ್ಗದ ಸುತ್ತಮುತ್ತ 'ಉತ್ತಮ ಶಿಕ್ಷಕಿ' ಎಂದು ಹೆಸರು ಮಾಡಿದವರು. ರಾಜು ಅವರ ವಿದ್ಯಾಭ್ಯಾಸ ಮನೆಯಲ್ಲೇ ಆರಂಭವಾಯಿತು. ಇವರ ವ್ಯಕ್ತಿತ್ವ ರೂಪಿಸುವಲ್ಲಿ ತಾಯಿಯ ಪಾತ್ರ ದೊಡ್ಡದು.

ವೈಕುಂಠರಾಜು ಅವರ ಬಾಲ್ಯದಲ್ಲಿ ಹೆಚ್ಚಿನ ಪ್ರಭಾವ ಬೀರಿದ ಮತ್ತೋರ್ವರು ದೊಡ್ಡಪ್ಪ ಚಿದಂಬರಪ್ಪ. ದೊಡ್ಡಪ್ಪ ಕರ್ಮಯೋಗಿ. ಮಹಾಭಾರತ, ರಾಮಾಯಣದ ಕತೆಗಳನ್ನೆಲ್ಲಾ ಹೇಳಿದವರು ಇವರೇ. ಇದೇ ದೊಡ್ಡಪ್ಪ ಮುಂದೆ ರಾಜು ಅವರ 'ಲಿಪ್ತ' ಕತೆಗೆ ಸ್ಫೂರ್ತಿ.

ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರಿನಲ್ಲೇ ಆರಂಭವಾಯಿತು. ಶಾಲೆಯಲ್ಲಿ ಎಲ್ಲರಂತಲ್ಲ ವೈಕುಂಠರಾಜು. ಆಟಕ್ಕಿಂತ ಪಾಠದ ಕಡೆಗೇ ಹೆಚ್ಚಿನ ಗಮನ. ಚಿತ್ರದುರ್ಗದಿಂದ ಊರಿಗೆ ಬರುತ್ತಿದ್ದ ಮೇಷ್ಟ್ರು ಪ್ರತೀದಿನ ಪತ್ರಿಕೆ ತಂದು, ವೈಕುಂಠರಾಜು , ನಿನಗೆ ಪಾಠದ ಅಗತ್ಯವಿಲ್ಲ, ಹೊರಗೆ ಹೋಗಿ ದಿನಪತ್ರಿಕೆ ಓದಿಕೋ ಅಂತ ಅಚೆ ಹೊರಕಳುಹಿಸೋರು. ಆ ಹೊತ್ತಿಗಾಗಲೇ ಓದಿನ ಹುಚ್ಚು ಹತ್ತಿತ್ತು. ಅದೇ ಊರಿನಲ್ಲಿ ರಾಮಚಂದ್ರರೆಡ್ಡಿ ಎಂಬುವರು ಸ್ಥಾಪಿಸಿದ್ದ ವಯಸ್ಕರ ಶಿಕ್ಷಣ ಗ್ರಂಥಾಲಯ ಇವರ ಅಧ್ಯಯನ ಕೇಂದ್ರವಾಯ್ತು. ಹನ್ನೊಂದನೇ ವಯಸ್ಸಿನ ಹೊತ್ತಿಗಾಗಲೇ 200 ರಿಂದ 300 ಪುಸ್ತಕಗಳನ್ನು ಇವರು ಓದಿ ಮುಗಿಸಿದ್ದರು.

## ಯಕ್ಷನಗರಿ – ಚಿತ್ರದುರ್ಗ

ತಾಯಿ ಜಗಳೂರಿಗೆ ವರ್ಗವಾದ ಕಾರಣ, ಮುಂದಿನ ವ್ಯಾಸಾಂಗಕ್ಕಾಗಿ ಜಗಳೂರಿಗೆ ನಡೆಯಬೇಕಾಯಿತು. ಜಗಳೂರಿನ ನಂತರ ಇಂಟರ್ ಮೀಡಿಯಟ್‌ಗೆ ಚಿತ್ರದುರ್ಗಕ್ಕೇ ಬರಬೇಕಿತ್ತು. ಗುಡ್ಡದ ರಂಗವ್ವನಹಳ್ಳಿಯಲ್ಲಿ ರಾತ್ರಿಹೊತ್ತು ಹುಡುಗರಿಗೆ ಚಿತ್ರದುರ್ಗ ಯಕ್ಷನಗರಿ. ಚಿತ್ರದುರ್ಗದ ಬೀದಿ ದೀಪಗಳು ಮಿಣುಕು ಹುಳುಗಳಂತೆ ಕಾಣುವಾಗ ಅದೊಂದು ಮಾಯಾನಗರಿ !

ಶಾಲೆಯ ಅಧ್ಯಾಪಕರು, ದೇಶದೆಲ್ಲೆಡೆ ಹಬ್ಬಿದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಮಕ್ಕಳಿಗೆ ಹೇಳಿ ಹೋರಾಟದೆಡೆಗೆ ಹುರಿದುಂಬಿಸುತ್ತಿದ್ದರು. ಅದೇ ವೇಳೆ

ಚಿತ್ರದುರ್ಗದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹಗಳು, ಪ್ರತಿಭಟನಾ ಮೆರವಣಿಗೆಗಳೂ ಅವರ ಬೋಧನೆಯ ವಸ್ತುವಾಗುತ್ತಿದ್ದವು. ಆಗೆಲ್ಲಾ ವಿದ್ಯಾರ್ಥಿ ವೈಕುಂಠರಾಜುಗೆ 'ಚಿತ್ರದುರ್ಗ' ಎಂಬ ನಗರದ ಬಗ್ಗೆ ಅತೀವ ಕುತೂಹಲ. ಅದೇ ಕಾರಣ ತನ್ನಪ್ಪನನ್ನು ಚಿತ್ರದುರ್ಗಕ್ಕೆ ಕರೆದುಕೊಂಡು ಹೋಗಲು ಪೀಡಿಸಿದ್ದುಂಟು.

ಜಗಳೂರಿನಲ್ಲಿ ಹೈಸ್ಕೂಲ್ ವ್ಯಾಸಂಗ ಮುಗಿಸಿ ಇಂಟರ್‌ಮೀಡಿಯಟ್‌ಗೆ ಚಿತ್ರದುರ್ಗಕ್ಕೇ ಬರಬೇಕಾಯಿತು. ನಗರದಲ್ಲಿ ಆಗಾಗ ಪ್ರದರ್ಶನಗೊಳ್ಳುತ್ತಿದ್ದ ಗುಬ್ಬಿ ಕಂಪನಿ ನಾಟಕಗಳು, ಸುಬ್ಬಯ್ಯನಾಯ್ಡು ಅವರ ನಾಟಕಗಳು, ಗೋಕಾಕ್ ಕಂಪನಿಯ ಪ್ರಯೋಗಗಳು ಇವರನ್ನು ಆಕರ್ಷಿಸಿದವು. ಪ್ರಾಥಮಿಕ ವಿದ್ಯಾಭ್ಯಾಸದ ಹಂತದಲ್ಲೇ ಅಭಿನಯ ಇವರ ಹವ್ಯಾಸವಾಗಿತ್ತು. ಶಾಲೆಯ ನಾಟಕಗಳಲ್ಲಿ ಸ್ತ್ರೀ ಪಾತ್ರ ಇವರಿಗೇ ಮೀಸಲು. ಚಿತ್ರದುರ್ಗಕ್ಕೆ ಬಂದದ್ದು ಇವರ ಆಸಕ್ತಿಗೆ ಹೆಚ್ಚಿನ ಉತ್ಸಾಹ ತಂದಿತು. ಅಂದು ಇವರು ನೋಡಿದ ಕಂಪನಿ ನಾಟಕಗಳು ಮುಂದೆ ರಂಗ ವಿಮರ್ಶೆಯ ಸಂದರ್ಭದಲ್ಲಿ ತುಲನೆಗೆ ಸಹಕಾರಿವಾದುವು.

ಇಂಟರ್‌ಮೀಡಿಯಟ್ ಹಂತದಲ್ಲಿ ಓದು ಅತಿ ಹೆಚ್ಚಿನ ವೇಗದೊಂದಿಗೆ ಸಾಗಿತು. ಸಾರ್ವಜನಿಕ ಗ್ರಂಥಾಲಯ ಇವರ ಓದಿಗೆ ತಾಣವಾಯಿತು. ಗ್ರಂಥಾಲಯದಲ್ಲಿ ಗಂಟೆಗಟ್ಟಲೆ ಕೂತು ಓದುತ್ತಿದ್ದರು. ಹೆಚ್ಚಿನ ಓದು ಹಾಗೂ ಕ್ರೀಡೆಗಳಲ್ಲಿ ತೋರುತ್ತಿದ್ದ ನಿರಾಸಕ್ತಿಯ ಕಾರಣ 'ವೈಕುಂಠರಾಜು – ಬುದ್ಧಿವಂತ' ಎಂಬ ಮಾತು ಎಲ್ಲೆಡೆ ಹಬ್ಬಿತ್ತು. ಸಹಪಾಠಿಗಳು ಇವರತ್ತ ನೋಡುವ ಧಾಟಿಯೇ ಬದಲಾಯಿತು.

## ಮಾಯಾನಗರಿ – ಮೈಸೂರು :

ತಾಯಿ ಚೌಡಮ್ಮನವರಿಗೆ, ಮಕ್ಕಳ ವಿದ್ಯಾಭ್ಯಾಸದ ಕಡೆ ಕಾಳಜಿ ಹೆಚ್ಚು. ಇವರ ಅಣ್ಣ ಲಿಂಗರಾಜು ಆ ಹೊತ್ತಿಗಾಗಲೇ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಓದಲು ಹೋಗಿದ್ದರು. ಈಗ ವೈಕುಂಠರಾಜು ಅವರ ಸರದಿ. ಆಗಿನ ದಿನಗಳಲ್ಲಿ ಮೈಸೂರು ಎಂದರೆ 'ಮೆಟ್ರೋಪೋಲ್ ಹೋಟೆಲ್', ಒಂದು ರೂಪಾಯಿ ಕಾಫಿ ಮತ್ತು ನೂರು ವಿಸ್ಮಯಗಳ 'ಅರಮನೆ'.

ಮೆಟ್ರೊಪೋಲ್‌ನಲ್ಲಿ ಒಂದು ಕಪ್ ಕಾಫಿ ಒಂದು ರೂಪಾಯಿ ಎನ್ನುವುದನ್ನು ನಂಬಲು ಕಷ್ಟಪಡುವ ಕಾಲವದು. ಅದೇ ರೀತಿ, ಅರಮನೆ, ಅಷ್ಟು ದೊಡ್ಡದು, ಅದರಲ್ಲಿ ಅದೆಷ್ಟು ಕೋಣೆಗಳಿರಬಹುದು, ಅದೆಷ್ಟು ರಹಸ್ಯಗಳು ಅಡಗಿರಬಹುದು. ಇವೇ ವೈಕುಂಠರಾಜು ಅವರಿಗೆ ಮೈಸೂರಿಗೆ ಹೊರಡುವ ಮುನ್ನ ಕಾಡಿದ ಸಂಗತಿಗಳು.

## ಮಹಾರಾಜಾ ಕಾಲೇಜು...

ವೈಕುಂಠರಾಜು ಅವರು ಮಹಾರಾಜಾ ಕಾಲೇಜಿನಲ್ಲಿ ಕಳೆದ ದಿನಗಳು ಅವರ ಒಟ್ಟಾರೆ ವ್ಯಕ್ತಿತ್ವ ನಿರ್ಮಾಣದಲ್ಲಿ ಮಹತ್ವದ ದಿನಗಳು. ಇದೇ ಕಾಲೇಜಿನಲ್ಲಿ ಅವರು ಆನರ್ಸ್ ಮತ್ತು ಎಂ.ಎ. ಪದವಿಗಳನ್ನು ಪಡೆದರು.

ಆಗ ಮಹಾರಾಜಾ ಕಾಲೇಜು ವಿದ್ವನ್ಮಣಿಗಳ ಖನಿ. ಕುವೆಂಪುರವರು ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ ಕುಲಪತಿ ಪಟ್ಟಕ್ಕೇರಿದ್ದರು. ಇಂಗ್ಲಿಷ್ ವಿದ್ವಾಂಸ ಪ್ರೊ.ಸಿ.ಡಿ. ನರಸಿಂಹಯ್ಯ ಪ್ರಾಂಶುಪಾಲರು. ಕನ್ನಡ ವಿಭಾಗದ ಮುಖ್ಯಸ್ಥರು ಪ್ರೊ. ತೀ.ನಂ.ಶ್ರೀ. ಇವರೆಲ್ಲರಿಗಿಂತ ಅತೀ ಹೆಚ್ಚಿನ ಪ್ರಭಾವ ಬೀರಿದವರು ಪ್ರೊ. ಡಿ.ಎಲ್. ನರಸಿಂಹಚಾರ್.

ಮಹಾರಾಜಾ ಕಾಲೇಜಿನಲ್ಲಿ ಇವರ ಸಹಪಾಟಿಯಾಗಿದ್ದ ಪ್ರೊ.ಜಿ.ಎಚ್. ನಾಯಕ ಅಭಿಪ್ರಾಯ ಪಡುವಂತೆ, ವೈಕುಂಠರಾಜು ಸ್ನೇಹಿತರನ್ನು ಗಳಿಸುವಲ್ಲಿ ಸದಾ ಮುಂದು. ಮೊದಲ ಭೇಟಿಯಲ್ಲೇ ತೀರಾ ಉತ್ತಮ ಗೆಳೆಯನಾಗಬಲ್ಲ ಎನ್ನಿಸಿದರೆ ತಟ್ಟನೆ ಏಕವಚನಕ್ಕಿಳಿದು ಬಿಡುತ್ತಿದ್ದರು. ಕಾಲೇಜಿಗೆ ಸೇರಿದ ಕೆಲವೇ ದಿನಗಳಲ್ಲಿ ಇವರ ಸುತ್ತ ಸದಾ ಒಂದು ದಂಡು ನಿಲ್ಲಲು ಆರಂಭವಾಯಿತು. ಕ್ರಮೇಣ ಕಾಲೇಜಿನಲ್ಲಿ ಇವರ ಜನಪ್ರಿಯತೆ ಹಬ್ಬಿತು. ಹುಡುಗ–ಹುಡುಗಿಯರೆನ್ನದೆ ಎಲ್ಲರನ್ನೂ ಮಾತನಾಡಿಸಿಕೊಂಡು, ತಮಾಷೆ ಮಾಡಿಕೊಂಡು ಎಲ್ಲರೊಂದಿಗೆ ಹೊಂದಿಕೊಂಡು ನಡೆಯುತ್ತಿದ್ದ ವ್ಯಕ್ತಿತ್ವ ಅವರದು.

ಇನ್ನೂ ವಿಶಿಷ್ಟ ಅಂದರೆ, ವಿದ್ಯಾರ್ಥಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದು. ಕಾಲೇಜಿನ ಡಿಬೇಟಿಂಗ್ ಸೊಸೈಟಿಗೆ ಪ್ರತಿವರ್ಷ ಚುನಾವಣೆ ನಡೆಯುತ್ತಿತ್ತು. ಪ್ರೊ. ಎಸ್.ಎ. ನಿಕ್ಕಂ ಇದರ ಯೂನಿಯನ್ ಅಧ್ಯಕ್ಷರು. ವಿದ್ಯಾರ್ಥಿ ಮುಖಂಡ ಉಪಾಧ್ಯಕ್ಷ. ಹಾಗೆ ನೋಡಿದರೆ ವೈಕುಂಠರಾಜುಗೆ ಯಾವ ಜಾತಿ ಬೆಂಬಲವೂ ಇರಲಿಲ್ಲ. ಕಾಲೇಜಿನ ಚರ್ಚಾ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸುತ್ತಿದ್ದ ಖ್ಯಾತಿ ಇದ್ದೇ ಇತ್ತು. ಅಂದಿನ ಇಂಗ್ಲಿಷ್ ಭಾಷಾ ಚರ್ಚಾಪಟು ವಿ.ಕೆ. ನಟರಾಜಾ ಇವರ ಎದುರಾಳಿ. ಮೊದಲ ಬಾರಿ ವೈಕುಂಠರಾಜುರವರೇ ಆತನನ್ನು ಸೋಲಿಸಿದರು. ನಂತರದ ವರ್ಷ, ವೈಕುಂಠರಾಜು, ನಟರಾಜ್ ಜೊತೆ ಪಂದ್ಯ ಕಟ್ಟಿ ಈ ಬಾರಿ, ಬೇರೊಬ್ಬನನ್ನು ನಿನ್ನ ವಿರುದ್ಧ ಗೆಲ್ಲಿಸುತ್ತೇನೆಂದರು. ನಂತರ ಹಾಗೇ ಆಯಿತು. ಏನೇನೂ ಹೆಸರಿಲ್ಲದ ಸಹಪಾಠಿಯೊಬ್ಬನನ್ನು ನಟರಾಜ್ ವಿರುದ್ಧ ನಿಲ್ಲಿಸಿ ಗೆಲ್ಲಿಸಿದರು.

'ನೀರಾವರಿ ತಜ್ಞ' ಎಂದೇ ಖ್ಯಾತರಾಗಿರುವ ಎಚ್.ಎನ್. ನಂಜೇಗೌಡ, ವಿಧಾನ

ಪರಿಷತ್ ಸದಸ್ಯ ಕೆ.ಎಚ್. ಶ್ರೀನಿವಾಸ್, ದಿ. ಟಿ.ಎನ್. ನರಸಿಂಹಮೂರ್ತಿ, ವಿ.ಎಚ್. ಗೌಡ ಮುಂತಾದವರೆಲ್ಲ ಆಗ ಇದೇ ಕಾಲೇಜಿನ ವಿದ್ಯಾರ್ಥಿಗಳು. ಇವರೆಲ್ಲ ಮುಂದೆ ರಾಜಕಾರಣದಲ್ಲಿ ಯಶಸ್ವಿಯಾದರೂ ಕಾಲೇಜು ದಿನಗಳಲ್ಲಿ ವೈಕುಂಠರಾಜುರವರೇ ಯಶಸ್ವೀ ರಾಜಕಾರಣಿ! ಆ ದಿನಗಳಲ್ಲಿ ಈ ಮೇಲಿನ ಯಾರೂ ವೈಕುಂಠರಾಜುಗೆ ಪ್ರತಿಸ್ಪರ್ಧಿಗಳೇ ಅಲ್ಲ. ಜಿ.ಹೆಚ್. ನಾಯಕ್ ಹೇಳುವಂತೆ, ವೈಕುಂಠರಾಜುವಿನ ಅಂದಿನ ಛಾತಿ ಗಮನಿಸಿದರೆ, ಮುಂದೆ ಮುಲಾಜಿಲ್ಲದೆ ಮುಖ್ಯಮಂತ್ರಿಯಾಗುತ್ತಾರೆ ಎನ್ನಬಹುದಿತ್ತು. ಆದರೆ ಇವರಿಗೆ ಇತರರಂತೆ ಜಾತಿ ಬೆಂಬಲವಿರಲಿಲ್ಲ.

## ಪ್ರೊ. ಡಿ.ಎಲ್.ಎನ್.

ತಮ್ಮ ಕಾಲೇಜು ದಿನಗಳಲ್ಲಿ ಪಾಠಮಾಡಿದ ಅನೇಕರಲ್ಲಿ, ವೈಕುಂಠರಾಜು 'ಗುರು' ಎಂದು ಒಪ್ಪಿಕೊಂಡಿದ್ದು ಪ್ರೊ. ಡಿ.ಎಲ್.ಎನ್. ರನ್ನು ಮಾತ್ರ. ಡಿ.ಎಲ್.ಎನ್. ವಿದ್ವಾಂಸರು. ಸಂಶೋಧನೆಯಲ್ಲಿ ಬಹುದೊಡ್ಡ ಹೆಸರು. ಅವರು ಸಾಮಾನ್ಯವಾಗಿ ಯಾರನ್ನೂ ಹಚ್ಚಿಕೊಳ್ಳುತ್ತಿರಲಿಲ್ಲ. ಆದರೆ ವೈಕುಂಠರಾಜುರವರನ್ನು ಮಾತ್ರ ಸ್ವಂತ ಮಗನೇನೋ ಎಂಬಂತೆ ಕಾಣುತ್ತಿದ್ದರು.

ಚಾಮರಾಜಪುರಂನಲ್ಲಿ ಇವರು ವಾಸಿಸುತ್ತಿದ್ದ ಮನೆಗೆ ಪ್ರತಿದಿನವೂ ಗುರುಗಳು ಬರುತ್ತಿದ್ದರು. ತಿಂಡಿ ಅವರ ಮನೆಯಲ್ಲೇ ನಡೆಯಬೇಕು. ವೈಕುಂಠರಾಜು ಅವರು ಇಂದಿಗೂ ಅವರನ್ನು ನೆನೆಯುತ್ತಾ, "ನಾನು ಇಂದು ಏನಾದರೂ ಸ್ವಲ್ಪ ಕೆಲಸ ಮಾಡಿದ್ದರೆ, ಏನನ್ನಾದರೂ ಸಾಧಿಸಿದ್ದರೆ ಅದಕ್ಕೆ ನನ್ನ ಗುರುಗಳೇ ಕಾರಣ," ಎನ್ನುತ್ತಾರೆ.

ಪ್ರೊ. ಡಿ.ಎಲ್. ನರಸಿಂಹಾಚಾರ್, ಬೀದರ್‌ನಲ್ಲಿ ನಡೆದ ನಲವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು. ಈ ಶುಭ ಸಂದರ್ಭದಲ್ಲಿ ಡಿ.ಎಲ್.ಎನ್. ರನ್ನು ಸನ್ಮಾನಿಸಲು ವೈಕುಂಠರಾಜುರವರೇ ಕಾಲೇಜಿನಲ್ಲಿ ಸಮಾರಂಭ ಏರ್ಪಡಿಸಿದ್ದರು. ಅಂದಿನ ಸಮಾರಂಭದ ವೈಭವವನ್ನು ಎಂದೆಂದಿಗೂ ಮರೆಯಲಾಗದು ಎನ್ನುತ್ತಾರೆ ಅವರ ಅನೇಕ ಸಹಪಾಠಿಗಳು.

ಡಿ.ಎಲ್.ಎನ್. ಬೀದರ್‌ನ ಸಮ್ಮೇಳನ ಮುಗಿಸಿಕೊಂಡು ಬಂದು, ವೈಕುಂಠರಾಜುಗೆ ಹೇಳಿದರಂತೆ, 'ಒಂದು ವಾರ ಕಾಲ ವ್ಯರ್ಥ ಆಯಿತಲ್ಲೋ ವೈಕುಂಠರಾಜು' ಇಂತಹ ಘಟನೆಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುತ್ತಾರೆ.

1960 ರಲ್ಲಿ ವೈಕುಂಠರಾಜು ತಮ್ಮ ಎಂ.ಎ ಪರೀಕ್ಷೆಗಳ ನಂತರ ತುಮಕೂರಿನ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕಾರ್ಯ ಆರಂಭಿಸಲು ಗುರುಗಳಿಂದಲೇ ಖರ್ಚಿಗೆ

ಹಣ ಪಡೆದು ತೆರಳಿದ್ದರು. ಅಲ್ಲಿ ತಲುಪಿದ ನಂತರ ಎರಡು ದಿನಗಳ ಒಳಗೇ ಗುರುಗಳಿಂದ ಒಂದು ಪತ್ರ ಬಂತು. ಅದರ ಒಕ್ಕಣೆ ಹೀಗಿತ್ತು.

*"ನೀನು ತರಗತಿಗೆ ಹೋಗುವಾಗ ಚೆನ್ನಾಗಿ ಸಿದ್ಧತೆ ಮಾಡಿಕೊಂಡು ಹೋಗು. ನಿನಗೆ ತಿಳಿಯದ ವಿಷಯವೇನಾದರೂ ಬಂದರೆ, 'ನಾಳೆ ನೋಡಿಕೊಂಡು ಬರುತ್ತೇನೆ' ಎಂದು ವಿದ್ಯಾರ್ಥಿಗಳಿಗೆ ಹೇಳು. ಪುನಾ ತರಗತಿಗೆ ಹೋಗುವಾಗ ಅದನ್ನು ನೋಡಿಕೊಂಡು ಹೋಗು, ತರಗತಿಯಲ್ಲಿ ಕಾಡಹರಟೆಯಲ್ಲಿ ಕಾಲಹರಣ ಮಾಡಬೇಡ"*

ವೈಕುಂಠರಾಜು, ತಮ್ಮ ಅಧ್ಯಾಪನ ವೃತ್ತಿಯ ನಂತರವೂ ತಮ್ಮ ಪತ್ರಿಕಾ ಬರಹಗಳಲ್ಲಿ ವಿಷಯದ ಆಳಕ್ಕೆ ಗಾಳ ಹಾಕಿ ವಿಶ್ಲೇಷಿಸುವುದಕ್ಕೆ ಈ ಮೇಲಿನ ಗುರುಗಳ ಮಾತೇ ಪ್ರೇರಣೆ. ಡಿ.ಎಲ್.ಎನ್ ಮತ್ತು ವೈಕುಂಠರಾಜು ಎಷ್ಟು ಆತ್ಮೀಯರಾಗಿದ್ದರು ಎನ್ನುವುದಕ್ಕೆ ಸಣ್ಣದೊಂದು ನಿದರ್ಶನ ಹೇಳಬಹುದು.

ತ.ಸು. ಶಾಮರಾಯರು ಡಿ.ಎಲ್.ಎನ್ ರ ಸಹೋದ್ಯೋಗಿಗಳು. ಅವರಿಗೆ ಪಠ್ಯಕ್ಕೆ ಸಂಬಂಧಿಸಿದಂತೆ ಒಂದು ಸಮಸ್ಯೆ ಕಾಡುತ್ತಿತ್ತು. ಪ್ರೊ. ಡಿ.ಎಲ್.ಎನ್ ಮಾತ್ರ ಆ ಸಮಸ್ಯೆ ಬಿಡಿಸಬಲ್ಲವರು ಎಂದು ಅವರಿಗೆ ತಿಳಿದಿತ್ತು. ಡಿ.ಎಲ್.ಎನ್ ಡಿ.ಎಲ್.ಎನ್. ಅವರನುನ ನೇರವಾಗಿ ಭೇಟಿ ಮಾಡಲು ಸಂಕೋಚ! ಅದೇ ಕಾರಣ ತಮ್ಮ ವಿದ್ಯಾರ್ಥಿಯಾಗಿದ್ದ ವೈಕುಂಠರಾಜುನೇ ಇದಕ್ಕೆ ಸರಿ ಎಂದು ಅವರನ್ನು ಕರೆಯಿಸಿ ತಮ್ಮ ಸಮಸ್ಯೆಯನ್ನು ಅವರ ಮೂಲಕ ಡಿ.ಎಲ್.ಎನ್.ರಿಗೆ ರವಾನಿಸಿದರು.

## ಡಿ.ಎಲ್.ಎನ್ ಸಾವು ಮತ್ತು ಪು.ತಿ.ನ ಮಾತು :

ಡಿ.ಎಲ್.ಎನ್ ಪ್ರತಿದಿನ ಇವರ ರೂಂಗೆ ಬರುತ್ತಿದ್ದರು ಎಂದು ಮೊದಲೇ ಹೇಳಿದ್ದೇನೆ. ಅದೊಂದು ದಿನ ಅವರು ಬರುವುದು ತಡವಾಯಿತು. ರೂಂನಲ್ಲಿದ್ದ ಗೆಳೆಯರೆಲ್ಲ, ಈ ಹೊತ್ತು ಗುರುಗಳು ಬರಲಾರರು ಎಂದೇ ನಿರ್ಧರಿಸಿದರು. ಅದೇ ಕಾರಣ ವೈಕುಂಠರಾಜು ಹಾಯಾಗಿ ಕೆ.ಎಸ್.ನರಸಿಂಹಸ್ವಾಮಿಯವರ "ನೀರ ಸೇದೋ ಹೆಣ್ಣು ನಿಲ್ಲೆಂದು ಕೂಗಿದರೆ, ನಿಂತಾಳು ನನ್ನ ಕಂಡು, ಚೆಂದಮ್ಮ ಬಂದಾಳು ಬಿಂದಿಗೆಯ ತಂದಾಳು, ಸೇದಾಳು ಬಾಗಿ ತೂಗಿ" ಎಟಿದು ಹಾಡುತ್ತಿದ್ದರು. ಅದೇ ಹೊತ್ತಿಗೆ ಬಾಗಿಲಲ್ಲಿ ಇಣುಕಿದ ಡಿ.ಎಲ್.ಎನ್ 'ಮುಗಿಯಿತೋ ಹಾಡು' ಎಂದರು. ಆಗ ಹೇಗಾಗಿರಬೇಡ ಇವರ ಸ್ಥಿತಿ !

ಅಷ್ಟೇ ಅಲ್ಲದೆ, ಅದೇ ದಿನ ತರಗತಿಯಲ್ಲಿ ನೇಮಿಚಂದ್ರನ 'ಲೀಲಾವತಿ' ಪಾಠ. ಅದರಲ್ಲಿ ಯಾವುದೋ ಒಂದು ಪದ್ಯ ಇವರಿಗೆ ಅರ್ಥವಾಗಲಿಲ್ಲ ತಕ್ಷಣ ಎದ್ದು ಮತ್ತೊಮ್ಮೆ ಅರ್ಥ ಹೇಳಲು ಗುರುಗಳನ್ನು ಕೇಳಿಯೇ ಬಿಟ್ಟರು. ಇದಕ್ಕೆ ಪ್ರತಿಯಾಗಿ

ಗುರುಗಳು "ಇದೆಲ್ಲಾ ನಿನಗೆ ಎಲ್ಲಯ್ಯಾ ಅರ್ಥವಾಗುತ್ತೆ? ಪ್ರೇಮಗೀತೆಗಳಾದರೆ ಚೆನ್ನಾಗಿ ಅರ್ಥವಾಗುತ್ತೆ" ಎಂದು ಛೇಡಿಸಿದರು.

ಪ್ರೊ. ಡಿ.ಎಲ್.ಎನ್. ಜೊತೆ ಇಂತಹ ಸಂಬಂಧದ ಭಾಗ್ಯ ದೊರೆತದ್ದು ವೈಕುಂಠರಾಜುಗೆ ಮಾತ್ರ.

ಡಿ.ಎಲ್.ಎನ್ ತೀರಿಕೊಳ್ಳುವ ಹೊತ್ತಿಗೆ ವೈಕುಂಠರಾಜು 'ಪ್ರಜಾವಾಣಿ'ಯಲ್ಲಿ ಪತ್ರಕರ್ತರಾಗಿ ದುಡಿಯುತ್ತಿದ್ದರು. ರಾತ್ರಿ ಹೊತ್ತಿಗೆ ಗುರುಗಳ ಸಾವಿನ ಸುದ್ದಿ ತಲುಪಿತು. ರಾತ್ರೋರಾತ್ರಿ ಎನ್. ಬಸವಾರಾಧ್ಯರ ಜೊತೆ ಮೈಸೂರಿಗೆ ನಡೆದರು. ಗುರುಗಳ ಶವದ ಎದುರು ಇವರ ಅಳು ತಡೆಯಲಾಗಲಿಲ್ಲ. ಗಳಗಳನೆ ಅತ್ತರು. ಹಿರಿಯ ಕವಿ ಪು.ತಿ.ನರಸಿಂಹಾಚಾರ್ಯರು ಇವರನ್ನು ಸಮಾಧಾನಿಸಲು ಪ್ರಯತ್ನಪಟ್ಟರು. ಕೊನೆಗೆ ಅವರು, 'ನಿನ್ನ ವಿವೇಕ ಎಲ್ಲಿ ಹೋಗಿದೆ? ದುಃಖವನ್ನು ವಿವೇಕ ನಿಯಂತ್ರಿಸಬೇಕು. ಆದರೆ ನಿನ್ನ ದುಃಖ ವಿವೇಕವನ್ನು ನಿಯಂತ್ರಿಸುತ್ತಿದೆಯಲ್ಲಾ? ಎಂದರಂತೆ. ಪು.ತಿ.ನ ಅವರನ್ನು ಭೇಟಿಯಾದಾಗಲೆಲ್ಲ ಈ ಸಂದರ್ಭವನ್ನು ವೈಕುಂಠರಾಜುಗೆ ನೆನಪಿಸುತ್ತಿದ್ದರು.

## ಎಂ.ಎ. ಫೇಲ್ ಆದದ್ದು :

ಆಗ ಆನರ್ಸ್ ಮತ್ತು ಎಂ.ಎ. ತರಗತಿಗಳು ಮಹಾರಾಜಾ ಕಾಲೇಜಿನಲ್ಲೇ ನಡೆಯುತ್ತಿದ್ದವು. ವೈಕುಂಠರಾಜು ಆನರ್ಸ್ ತರುವಾಯ ಎಂ.ಎ ಗೆ ಸೇರಿಕೊಂಡರು. ಎಂ.ಎ ತರುವಾಯ ಅಧ್ಯಾಪಕನಾಗಬೇಕೆಂಬ ಅಭಿಲಾಷೆಯೇನೂ ಇರಲಿಲ್ಲ. ಆ ಹೊತ್ತಿಗಾಗಲೇ ಪತ್ರಿಕೋದ್ಯಮದೆಡೆಗೆ ಮನಸ್ಸು ವಾಲಿತ್ತು. ಪ್ರಾಥಮಿಕ ವಿದ್ಯಾಭ್ಯಾಸದ ಹಂತದಲ್ಲಿಯೇ ಚೆನ್ನಪ್ಪ ಎಂಬ ಶಿಕ್ಷಕರು ಚಿತ್ರದುರ್ಗದಿಂದ "ವಿಶ್ವಕರ್ನಾಟಕ" ದಿನಪತ್ರಿಕೆ ತಂದು ಇವರಿಗೆ ಓದಲು ನೀಡುತ್ತಿದ್ದರು. ಅಂದಿನಿಂದಲೇ ಪತ್ರಿಕೆ, ಪತ್ರಿಕೋದ್ಯಮ ಇವರನ್ನು ಸೆಳೆದಿತ್ತು.

ಈ ಮಧ್ಯೆ, ಪತ್ರಿಕೋದ್ಯಮವೇ ಜೀವನದ ದಾರಿಯಾದರೂ ಅಧ್ಯಾಪಕನಾಗಿ ಕನಿಷ್ಠ ಒಂದು ವರ್ಷದ ಮಟ್ಟಿಗೆ ದುಡಿಯಲೇಬೇಕೆಂಬ ಹಠತೊಟ್ಟರು. ಈ ಹಠಕ್ಕೆ ಕಾಲೇಜಿನಲ್ಲಿ ಕೆಲ ಹಿರಿಯರೆನಿಸಿಕೊಂಡ ಪ್ರಾಧ್ಯಾಪಕರೇ ಕಾರಣ! ವೈಕುಂಠರಾಜು ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರೂ ಫೇಲ್ ಆಗಲೂ ಅವರೇ ಕಾರಣ!

ಆ ದಿನಗಳಲ್ಲಿ ಜಾತೀಯತೆ, ಎಂಥ ವಿದ್ವನ್ಮಣಿಗಳನ್ನೂ ಬಿಡುತ್ತಿರಲಿಲ್ಲ ಎಂಬುದಕ್ಕೆ ಇವರು ಫೇಲ್ ಆದದ್ದೇ ಒಂದು ಉದಾಹರಣೆ. ವೈಕುಂಠರಾಜು ಅನ್ನಿಸಿದ್ದನ್ನು ನೇರವಾಗಿಯೇ ಹೇಳುವ ಚಾಳಿಯವರು. ಮುಂದೆ ಆಗಬಹುದಾದ ಯಾವ

ಪರಿಣಾಮಗಳನ್ನೂ ಇವರು ಲಕ್ಷಿಸುತ್ತಿರಲಿಲ್ಲ. ಅದೇ ಕಾರಣ ಇವರು ಫೇಲ್ ಆಗಬೇಕಾಯಿತು ಎನಿಸುತ್ತದೆ.

ಅದೊಂದು ದಿನ ವೈಕುಂಠರಾಜು, ಎಲ್ಲರ ಸಮ್ಮುಖದಲ್ಲೇ ಅಧ್ಯಾಪಕರೊಬ್ಬರ ಜಾತೀಯತೆಯನ್ನು ಟೀಕಿಸಿದರು. ಅವರ ಟೀಕೆ ಸುತ್ತಲ ವಾತಾವರಣವನ್ನೇ ದಂಗು ಬಡಿಸಿತ್ತು. ಇವರ ಮಿತ್ರರಾರೂ, ವೈಕುಂಠರಾಜು ಹೀಗೆ ಮಾತನಾಡುತ್ತಾನೆಂದು ಊಹಿಸಿರಲಿಲ್ಲ. ಅಲ್ಲಿ ಎಲ್ಲರ ಮುಂದೆ ಅವಮಾನಕ್ಕೆ ಒಳಗಾದ ಅಧ್ಯಾಪಕರು ವೈಕುಂಠರಾಜು ವಿರುದ್ಧ ಸೇಡು ತೀರಿಸಿಕೊಳ್ಳಲು ಹೊಂಚು ಹಾಕಿದರು. ಅದೇ ರೀತಿ ಇನ್ನೊಬ್ಬ ಪ್ರಾಧ್ಯಾಪಕರು, ರಾಜು ಅವರನ್ನೇ ಉದ್ದೇಶಿಸಿ ತರಗತಿಯಲ್ಲಿ 'ನಿಮ್ಮ ಗುರುಗಳಿಗೆ ಗೌರವ ಕೊಡಬೇಕು ಎನ್ನುವುದು ಗೊತ್ತಿಲ್ಲವೇ?' ಎಂದು ಪ್ರಶ್ನಿಸಿದರು. ವೈಕುಂಠರಾಜುಗೆ ತಡೆಯಲಾಗಲಿಲ್ಲ. 'ಸರ್, ಆ 'ಗೌರವ' ಯಾವ ಅಂಗಡಿಯಲ್ಲಿ ಸಿಗುತ್ತೆ ಅಂತ ಹೇಳ್ತೀರಾ ಸರ್' ಎಂದರು.

ಇಂಥ ಮೂರ್‍ನಾಲ್ಕು ಪ್ರಕರಣಗಳು ಅಧ್ಯಾಪಕರಿಗೆ ವೈಕುಂಠರಾಜು ವಿರುದ್ಧ ಸಂಚು ಹೂಡಲು ದಾರಿ ಮಾಡಿಕೊಟ್ಟವು. ಅದೇ ವರ್ಷ ಪರೀಕ್ಷಾ ಆಡಳಿತ ಸಮಿತಿಯಿಂದ, ಇವರ ಗುರುಗಳಾದ ಪ್ರೊ.ಡಿ.ಎಲ್.ಎನ್. ಅವರನ್ನು ಹೊರಗಿಡಲಾಯಿತು. ಹಾಗೂ ಒಂದು ಪತ್ರಿಕೆಯಲ್ಲಿ ಅಗತ್ಯಕ್ಕಿಂತ ಕಡಿಮೆ ಅಂಕ ನೀಡಿ ಅನುತ್ತೀರ್ಣ ಎಂದು ಘೋಷಿಸಲಾಯಿತು. ಇದೇ ಸಂದರ್ಭದಲ್ಲಿ ಬೇರೆ ವಿಶ್ವವಿದ್ಯಾನಿಲಯದಿಂದ ಬಂದಿದ್ದ ಪ್ರಾಧ್ಯಾಪಕರೊಬ್ಬರು ವೈಕುಂಠರಾಜು ಮುಂದೆಯೇ ಈ ಸಂಚನ್ನು ಬಯಲಿಗೆಳೆದಿದ್ದರು!

ಫಲಿತಾಂಶ ಪ್ರಕಟವಾಯಿತು. ಎಲ್ಲರ ಲೆಕ್ಕಾಚಾರದಂತೆ ವೈಕುಂಠರಾಜು ಅನುತ್ತೀರ್ಣ. ಇವರಿಗೆ ಕೋಪ ತಡೆಯಲಾಗಲಿಲ್ಲ. ನೇರವಾಗಿ ಆ ಪ್ರಾಧ್ಯಾಪಕರ ಕೊಠಡಿಗೇ ನಡೆದರು. ಆ ಬಾರಿ ಪರೀಕ್ಷೆಯಲ್ಲಿ ಎಂತೆಂಥವರೋ ಉತ್ತೀರ್ಣರಾಗಿದ್ದರು. ತೀರಾ ಅಂಥವರಿಗಿಂತ ನಾನು ಕಡೆಯೇ? ಎಂದು ನೇರವಾಗಿ ಪ್ರಶ್ನಿಸಿದರು. "ನೀವು ರಿಟೈರ್ಡ್ ಆದ ಮೇಲೆ ಬೀದೀಲಿ ಯಾವ ನಾಯಿಯೂ ಮೂಸಿ ನೋಡುವುದಿಲ್ಲ, ಜೀವನ ನಡೆಸೋಕೆ ಅಧ್ಯಾಪಕನಾಗಿ ಮಾತ್ರ ದುಡಿಬೇಕೆ? ಪ್ರಪಂಚ ವಿಶಾಲವಾಗಿದೆ", ಎಂದೆಲ್ಲಾ ಕೂಗಾಡಿದರು. ಎದುರಿಗಿದ್ದ ಪ್ರಾಧ್ಯಾಪಕರಿಗೆ ಪಾಪಪ್ರಜ್ಞೆ ಕಾಡುತ್ತಿತ್ತು. ಅವರಿಗೆ ಮಾತೇ ಹೊರಡದಂತಾಯ್ತು. ಈ ಎಲ್ಲಾ ಘಟನೆಗಳಿಂದ ಪ್ರೊ.ಡಿ.ಎಲ್.ಎನ್. ಕೂಡ ನೊಂದುಕೊಂಡರು. ಆದರೆ ಅವರು ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಮುಂದೆ ಎಷ್ಟೋ ವರ್ಷಗಳ ನಂತರ ಇದೇ ಪ್ರಕರಣದಲ್ಲಿ ಭಾಗಿಯಾಗಿದ್ದ ಅಧ್ಯಾಪಕರೊಬ್ಬರು, ಪಶ್ಚಾತ್ತಾಪ ಪಟ್ಟದ್ದುಂಟು.

ವೈಕುಂಠರಾಜು ಫೇಲ್ ಆದದ್ದರಿಂದ, ಆತ ಅಧ್ಯಾಪಕನಾಗುವ ಅವಕಾಶ

ಇಲ್ಲವೆಂದು ಅನೇಕರು ಭಾವಿಸಿದರು. ಆದರೆ ಹಾಗಾಗಲಿಲ್ಲ. ತನ್ನನ್ನು ಫೇಲ್ ಮಾಡಿದವರಿಗೆ ತಕ್ಕ ಪಾಠ ಕಲಿಸಬೇಕೆಂದೇ 'ಅಧ್ಯಾಪಕ ಹುದ್ದೆ'ಗೆ ಸಿದ್ಧವಾದರು. ಕನ್ನಡ ವಿಭಾಗದ ಮುಖ್ಯಸ್ಥರು, ಮತ್ತಿತರರು ಇವರ ಶತ್ರುಗಳಾದರೇನಂತೆ, ಅಂದಿನ ಉಪಕುಲಪತಿ ಪ್ರೊ. ನಿಕ್ಕಂ , ಇವರಿಗೆ ಆತ್ಮೀಯರು. ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರೆಲ್ಲ ಸೇರಿ ವೈಕುಂಠರಾಜುಗೆ ಮಾಡಿದ ಅನ್ಯಾಯ ಅವರಿಗೆ ತಿಳಿದಿತ್ತು. ಅದೇ ಕಾರಣ ನಿಕ್ಕ ಅವರೇ ರಾಜು ಅವರನ್ನು ತುಮಕೂರಿನ ಪ್ರಥಮ ದರ್ಜೆ ಕಾಲೇಜಿಗೆ ಅಧ್ಯಾಪಕರಾಗಲು ಸಹಾಯ ಮಾಡಿದರು. (ಆಗ ಆನರ್ಸ್ ಪದವಿಯ ಆಧಾರದ ಮೇಲೆ ನೇಮಕ ಮಾಡುವ ಅವಕಾಶವಿತ್ತು.)

## ನವ್ಯದ ಆರಂಭ :

ವೈಕುಂಠರಾಜುರವರು ಮೈಸೂರಿನಲ್ಲಿದ್ದ ದಿನಗಳು, ಕನ್ನಡ ಸಾಹಿತ್ಯದ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಹತ್ವದ ದಿನಗಳು. ಅಡಿಗರು ಆಗ ತಾನೆ ಹೊಸಕಾವ್ಯಕ್ಕೆ ನಾಂದಿ ಹಾಡುತ್ತಿದ್ದರು. ಆ ಹೊತ್ತಿಗಾಗಲೇ ನವೋದಯ ತಣ್ಣಗಾಗಿ ಪ್ರಗತಿಶೀಲರು ನಂತರ ನವ್ಯರು ಕ್ರಿಯಾಶೀಲರಾಗಿದ್ದರು. ಅಡಿಗರನ್ನು ಕುರಿತಂತೆ ಕಂಬಾರರು ಹೇಳಿದ ಮಾತು "ಅವರು ಒಂದು ಜನಾಂಗದ ಕಣ್ಣು ತೆರೆಸಿದ ಕವಿ" ಎಂಬುದು ಈ ಕಾಲದ ಹಿನ್ನೆಲೆಯಲ್ಲಿಯೇ.

ಅಡಿಗರು ಆಗ ಮೈಸೂರಿನ ಸೆಂಟ್ ಫಿಲೋಮಿನ ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರು. ಸಾಹಿತ್ಯಾಸಕ್ತರೆಲ್ಲಾ ಆ ದಿನಗಳಲ್ಲಿ ಭೇಟಿಯಾಗುತ್ತಿದ್ದ ಸ್ಥಳ 'ಕಾಫಿ ಹೌಸ್'. ಅದು ಪ್ರಭಾ ಥಿಯೇಟರ್ ಪಕ್ಕದಲ್ಲಿತ್ತು. ಪ್ರತಿದಿನ ಸಂಜೆ ಅಲ್ಲಿ ಒಂದು ದೊಡ್ಡಗುಂಪೇ ನೆರೆಯುತ್ತಿತ್ತು. ಆ ಗುಂಪಿಗೆಲ್ಲ ಅಡಿಗರೇ ಅಧಿಪತಿ. ನಿಜಾರ್ಥದಲ್ಲಿ ನವ್ಯ ಜನ್ಮತಾಳಿದ್ದೇ ಅಲ್ಲಿ. ಅನಂತಮೂರ್ತಿ, ಲಂಕೇಶ್, ಎಚ್.ಎಂ. ಚೆನ್ನಯ್ಯ, ಜಿ.ಎಚ್. ನಾಯಕ್, ಬಿ.ವಿ. ವೈಕುಂಠರಾಜು ಮತ್ತಿತರರು ಅಲ್ಲಿ ಸೇರುತ್ತಿದ್ದರು.

ಕಾಫೀಹೌಸ್ನ ಚರ್ಚೆಗಳಲ್ಲಿ ಬಂದು ಹೋಗದ ವಿಷಯಗಳೇ ಇಲ್ಲ. ಗುಂಪಿನಲ್ಲೇ ಯಾರಾದರೂ ಬರೆದ ಹೊಸ ಕವನದಿಂದ ಹಿಡಿದು ದೇಶ – ವಿದೇಶಗಳ ಅನೇಕ ಲೇಖಕರ ಕೃತಿಗಳು ಇಲ್ಲಿ ಚರ್ಚೆಯಾಗುತ್ತಿದ್ದವು. ಅಡಿಗರು ಈ ಗುಂಪಿನ ಸದಸ್ಯರ ಮೇಲೆ ಪ್ರಭಾವ ಯಾವ ಮಟ್ಟಿಗೆ ಇತ್ತೆಂದರೆ, ಅವರೆಲ್ಲ ತರಗತಿಗಳಲ್ಲಿ ನವೋದಯ ಕಾವ್ಯದ ವಿರೋಧಿಗಳಾಗಿ ರೂಪುಗೊಂಡರು.

ಕಾಫೀಹೌಸ್‌ನ ಚರ್ಚೆಗಳು ಸಾಹಿತ್ಯದ ದಿಕ್ಕುಗಳನ್ನು ನಿರ್ಧರಿಸಿದಂತೆಯೇ ಅಲ್ಲಿಯ ಎಲ್ಲರ ವ್ಯಕ್ತಿತ್ವಗಳನ್ನೂ ರೂಪಿಸಿದವು. ಅದೇ ಹೊತ್ತಿಗೆ ಕನ್ನಡ ಸಾಹಿತ್ಯ ಸಾಮ್ರಾಜ್ಯಕ್ಕೆ ಒಂದು ಸಿಂಹಾಸನವನ್ನು ಕಲ್ಪಿಸಿ ಅದಕ್ಕೆ ಅಡಿಗರೇ ಸಿಂಹಾಸನಾಧೀಶ್ವರರು ಎಂಬಂತೆ

ಬಿಂಬಿಸಲಾಗುತ್ತಿತ್ತು. ಆ ಪಟ್ಟದ ಉತ್ತರಾಧಿಕಾರಕ್ಕಾಗಿ ಲಂಕೇಶ್ ಮತ್ತು ಅನಂತಮೂರ್ತಿಯರ ನಡುವೆ ಮುಸುಕಿನ ಗುದ್ದಾಟ ನಡೆದೇ ಇತ್ತು.

ಇದೇ ಗುಂಪಿನ ಪ್ರತಿಭೆಯಾದ ಎಚ್.ಎಂ. ಚೆನ್ನಯ್ಯ ನವ್ಯಕವಿಗಳಲ್ಲಿ ಪ್ರಮುಖರಾದರು. ಜಿ.ಎಚ್. ನಾಯಕ, ಹೊಸ ತಲೆಮಾರಿನ ವಿಮರ್ಶಕರಲ್ಲಿ ಅಗ್ರಗಣ್ಯರಾದರು. ಅಂತೆಯೇ ವೈಕುಂಠರಾಜು ಪ್ರಜಾವಾಣಿ ಪತ್ರಿಕೆಯ 'ಸಾಪ್ತಾಹಿಕ ಪುರವಣಿ'ಯ ಸಂಪಾದಕರಾಗಿ ನವ್ಯ ಬರಹಗಾರರಿಗೆ ಸೂಕ್ತ ವೇದಿಕೆ ಒದಗಿಸಿಕೊಟ್ಟರು. ಕಥಾಸ್ಪರ್ಧೆಗಳ ಮೂಲಕ ಹೊಸ ಹೊಸ ಪ್ರತಿಭೆಗಳನ್ನು ಬೆಳಕಿಗೆ ತಂದರು. ನವ್ಯ ಪಂಥದವರ ಬಗ್ಗೆ ಸದಾ ನಿಷ್ಠುರ ಸ್ವಭಾವವನ್ನೇ ಹೊಂದಿದ್ದ ಎಸ್.ಎಲ್. ಭೈರಪ್ಪನವರು ತಮ್ಮ ಆತ್ಮಕಥೆ "ಭಿತ್ತಿ"ಯಲ್ಲಿ ವೈಕುಂಠರಾಜು ಅವರನ್ನು "ನವ್ಯ ಮಠದ ವಟು" ಎಂದೇ ವ್ಯಾಖ್ಯಾನಿಸಿದ್ದಾರೆ. ಅಚ್ಚರಿಯ ಸಂಗತಿ ಎಂದರೆ, 'ಭಿತ್ತಿ' ಕೃತಿಯನ್ನು ಬಿಡುಗಡೆ ಮಾಡಿದವರೂ ವೈಕುಂಠರಾಜು ಅವರೇ.

## ರಂಗಭೂಮಿ ಮತ್ತು ವೈಕುಂಠರಾಜು

ವೈಕುಂಠರಾಜು ಅವರು ಕನ್ನಡ ರಂಗಭೂಮಿಗೆ ನೀಡಿದ ಕೊಡುಗೆ ವಿಶಿಷ್ಟವಾದದು. ಹಾಗಂತ ಅವರನ್ನು ಶ್ರೇಷ್ಠ ರಂಗ ನಿರ್ದೇಶಕರು ಎಂದರೆ ತಪ್ಪಾಗುತ್ತದೆ. ಅಪ್ರತಿಮ ನಾಟಕಕಾರರು ಅಂದ್ರೆ ಆ ಮಾತನ್ನು ಕೆಲವರು ಒಪ್ಪುವುದಿಲ್ಲ. ಆದರೆ, ಅವರನ್ನು, ಕನ್ನಡ ರಂಗಭೂಮಿ ಕಂಡ ವಿಶಿಷ್ಟ ರಂಗ ವಿಮರ್ಶಕ, ರಂಗ ತಜ್ಞ, ರಂಗಚಳವಳಿಗಳ ನೇತಾರ ಎನ್ನದಿದ್ದರೆ ಬಹುದೊಡ್ಡ ದ್ರೋಹ ಎಸಗಿದಂತೆ.

ಇವರಿಗೆ ಚಿಕ್ಕಂದಿನಿಂದಲೂ ನಾಟಕದಲ್ಲಿ ಆಸಕ್ತಿ. ಚಿತ್ರದುರ್ಗದ ಸುತ್ತಮುತ್ತ ಪ್ರದರ್ಶನಗೊಳ್ಳುತ್ತಿದ್ದ ಗುಬ್ಬಿ ಕಂಪನಿಯ ನಾಟಕಗಳು ಇವರನ್ನು ಬಾಲ್ಯದಲ್ಲೇ ಆಕರ್ಷಿಸಿದ್ದವು. ಅವರೇ ಹೇಳುವಂತೆ, ಅಂದು ಕಂಪನಿ ನಾಟಕಗಳನ್ನು ನೋಡಿದ್ದು ಮುಂದೆ ರಂಗವಿಮರ್ಶೆಯ ಸಂದರ್ಭದಲ್ಲಿ ಸಹಕಾರಿಯಾಯಿತು. ಅದೇ ಸಂದರ್ಭದಲ್ಲಿ, ಒಮ್ಮೆ ನಾಟಕ ಕಂಪನಿಯೊಂದನ್ನು ಸೇರುವ ಆಸಕ್ತಿಯನ್ನೂ ಪೋಷಕರಲ್ಲಿ ತೋಡಿಕೊಂಡರು. ಇವನು ನಾಟಕದ ಹುಚ್ಚು ಹತ್ತಿಸಿಕೊಂಡು ಓದು ಹಾಳುಮಾಡಿಕೊಳ್ಳುತ್ತಾನೆಂದು ಹೆದರಿದ ತಂದೆ, ತಾಯಿ ಕಂಪನಿಗೆ ಸೇರಲು ಬಿಡಲಿಲ್ಲ. ಹಾಗಂತ ನಾಟಕದ ಹುಚ್ಚೇನೂ ಕಡಿಮೆಯಾಗಲಿಲ್ಲ.

ರಂಗಭೂಮಿಯ ಸೆಳೆತವೇ ಅಂಥಾದ್ದು. ಇದರೆಡೆಗೆ ಆಕರ್ಷಿತನಾಗುವ ವ್ಯಕ್ತಿ ಪ್ರಪಂಚವನ್ನೇ ಮರೆತುಬಿಡುತ್ತಾನೆ. ಎಲ್ಲರಿಗೂ ತಿಳಿದಿರುವಂತೆ, ವೈಕುಂಠರಾಜು, ರಂಗಭೂಮಿ ಅಲ್ಲದೆ, ಸಾಹಿತ್ಯ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳಲ್ಲೂ ಸಾಧನೆ

ಮಾಡಿದವರು. ಆದರೆ ಈ ಮೂರರಲ್ಲಿ ಅವರಿಗೆ ಇಂದಿಗೂ ಅತ್ಯಂತ ಆಪ್ತ ಕ್ಷೇತ್ರ ರಂಗಭೂಮಿ. ಅದಕ್ಕೆ ಕಾರಣವೂ ಸ್ಪಷ್ಟ. ಅವರೇ ಹೇಳುವಂತೆ, "ಅಲ್ಲಿ ಯಾರೂ ದೊಡ್ಡವರಲ್ಲ, ಯಾರೂ ಸಣ್ಣವರಲ್ಲ, ಅಲ್ಲಿ ಎಲ್ಲರೂ ಕಲಾವಿದರು. ಒಂದು ಕೃತಿಯನ್ನು ನೆಪವನ್ನಾಗಿಟ್ಟುಕೊಂಡು ಐಕ್ಯತೆಯನ್ನು ಸಾಧಿಸುವ ಎಲ್ಲಾ ಸಾಧ್ಯತೆಗಳೂ ಅಲ್ಲಿವೆ. ನನಗೆ ಎಂದೆಂದಿಗೂ ನೆಮ್ಮದಿ ಕೊಡುವ ಕ್ಷೇತ್ರವೇ ರಂಗಭೂಮಿ."

## ರಂಗವಿಮರ್ಶೆ :

ರಂಗವಿಮರ್ಶೆಯ ಮಾತು ಬಂದಾಗಲೆಲ್ಲ, ವೈಕುಂಠರಾಜು ಎಂಬ ಹೆಸರು ಅನಿವಾರ್ಯವಷ್ಟೇ ಅಲ್ಲ, ಆ ಹೆಸರಿನೊಂದಿಗೇ ಮಾತು ಆರಂಭವಾಗಬೇಕು. ಅನೇಕ ಸಭೆ ಸಮಾರಂಭಗಳಲ್ಲಿ, ಇಂದಿನ ರಂಗವಿಮರ್ಶೆಯ ಪ್ರಸ್ತಾಪ ಬಂದಾಗಲೆಲ್ಲ ಮಾತನಾಡುವವರು ಗತವೈಭವಕ್ಕೆ ತೆರಳಿ, ವೈಕುಂಠರಾಜು, ಪ್ರಜಾವಾಣಿಯಲ್ಲಿ ಬರೆಯುತ್ತಿದ್ದ ವಿಮರ್ಶೆಯ ಮುಂದೆ, ಇವೆಲ್ಲಾ ಏನು ಎನ್ನುತ್ತಾರೆ. ಮತ್ತೆ ಕೆಲವರು ಹೇಳುವಂತೆ, ವೈಕುಂಠರಾಜು ಅನೇಕ ಪ್ರದರ್ಶನಗಳನ್ನು ಬಯ್ಯುತ್ತಿದ್ದರೂ, ಅದರಿಂದ ರಂಗಕರ್ಮಿಗಳಿಗೆ ಪಾಠವಾಗುತ್ತಿತ್ತು. ಆದರೆ ಇಂದಿನ ದಿನಗಳಲ್ಲಿ ರಂಗವಿಮರ್ಶೆ ಕೇವಲ ಕತೆ ಹೇಳುವುದಷ್ಟಕ್ಕೇ ಸೀಮಿತವಾಗಿದೆ.

ರಂಗ ವಿಮರ್ಶಕ, ಭಾನುವಾರ ಸಂಜೆ ಯಾವುದೋ ಒಂದು ನಾಟಕದ ಪ್ರದರ್ಶನ ನೋಡಿ ನಾಲ್ಕು ಸಾಲು ಬರೆಯುವುದಷ್ಟೇ ವಿಮರ್ಶೆ ಆಗಲಾರದು. ಆತನಿಗೆ ರಂಗಭೂಮಿ ಬೆಳೆದು ಬಂದ ಬಗೆಯ ಸಂಪೂರ್ಣ ಅರಿವಿರಬೇಕು. ವಿಭಿನ್ನ ಕಾಲಘಟ್ಟಗಳಲ್ಲಿ ರಂಗಭೂಮಿ ಚಳವಳಿ ಪಡೆದ ಬೇರೆ ಬೇರೆ ರೂಪಗಳ ಸ್ಪಷ್ಟ ಜ್ಞಾನವಿರಬೇಕು. ಆಗ ಮಾತ್ರ ಅಂದಿನ ಪ್ರದರ್ಶನದ ವಿಶೇಷವನ್ನು ಗುರುತಿಸಬಲ್ಲ.

ವೈಕುಂಠರಾಜು, ಕನ್ನಡ ರಂಗಭೂಮಿಯ ಇತಿಹಾಸ ಚೆನ್ನಾಗಿ ಬಲ್ಲವರು. ತಮ್ಮ 'ಕನ್ನಡ ರಂಗಭೂಮಿ' ಕೃತಿಯಲ್ಲಿ ರಂಗಭೂಮಿ ಕಳೆದ ಒಂದು ಶತಮಾನದಲ್ಲಿ ಬೆಳೆದು ಬಂದ ಬಗೆಯನ್ನು ವಿಶಿಷ್ಟ ಒಳನೋಟಗಳಿಂದ ವಿಶ್ಲೇಷಿಸಿದ್ದಾರೆ.

## ಆಧುನಿಕ ರಂಗಭೂಮಿ :

ಬಿ.ಎಂ.ಶ್ರೀ ಯವರ "ಇಂಗ್ಲೀಷ್ ಗೀತೆಗಳು" ಕನ್ನಡ ಸಾಹಿತ್ಯಕ್ಕೆ ಹೊಸದಿಕ್ಕನ್ನು ತೋರಿಸಿದಂತೆ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಪಾರ್ಸಿ ಕಂಪನಿಯು ಏರ್ಪಡಿಸಿದ ನಾಟಕ ಪ್ರದರ್ಶನಗಳು ಆಧುನಿಕ ಕನ್ನಡ ರಂಗಭೂಮಿಗೆ ಕಾರಣ ಎನ್ನುತ್ತಾರೆ ವೈಕುಂಠರಾಜು.

ಅದುವರೆವಿಗೂ ಏಕತಾನದಿಂದ ಸೊರಗಿದ್ದ ಬಯಲು ನಾಟಕಗಳು ಬದಲಾವಣೆಗೆ ಸಿದ್ಧವಾದವು. ಇದೇ ಸಮಯಕ್ಕೆ ಸರಿಯಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಅರಮನೆಯಲ್ಲಿ ಚಾಮರಾಜೇಂದ್ರ ನಾಟಕ ಸಭಾ (1882) ಆರಂಭಿಸಿದರು. ಇದರೊಂದಿಗೆ ಆಧುನಿಕ ಕನ್ನಡ ರಂಗಭೂಮಿ ಅಧಿಕೃತವಾಗಿ ಆರಂಭವಾಯಿತೆನ್ನಬಹುದು.

ಅರಮನೆಯ ನಾಟಕ ಸಭಾದ ತರುವಾಯ ಜನರ ಗಮನ ಸೆಳೆದದ್ದು ನಾಟಕ ಶಿರೋಮಣಿ ವರದಾಚಾರ್ಯರ 'ರತ್ನಾವಳಿ ಥಿಯೇಟ್ರಿಕಲ್ಸ್'. ರತ್ನಾವಳಿ ಜೊತೆಗೆ ಥಿಯೇಟ್ರಿಕಲ್ಸ್ ಎಂಬ ಇಂಗ್ಲೀಷ್ ಪದ ಸೇರಿಕೊಂಡು ಆಧುನಿಕತೆಯ ಸ್ಪಷ್ಟ ಸೂಚನೆ ನೀಡುತ್ತದೆ.

## ಕನ್ನಡ ನಾಟಕಗಳ ಇತಿಹಾಸ ಮತ್ತು ಕನ್ನಡ ರಂಗಭೂಮಿ ಇತಿಹಾಸ :

ವೈಕುಂಠರಾಜು ಅವರು ತಮ್ಮ ಲೇಖನಗಳಲ್ಲಿ ಕನ್ನಡ ನಾಟಕಗಳ ಇತಿಹಾಸ ಮತ್ತು ರಂಗಭೂಮಿಯ ಇತಿಹಾಸಗಳೆರಡೂ ಬೇರೆ ಬೇರೆ ಎಂದೇ ಪರಿಗಣಿಸುತ್ತಾರೆ. ಅದಕ್ಕೆ ಅವರು ಕೊಡುವ ಕಾರಣ ಸ್ಪಷ್ಟವಾಗಿದೆ.

"ನಾಟಕದ ಹಸ್ತಪ್ರತಿ ಅಥವಾ ಮುದ್ರಿತ ಪ್ರತಿ, ನಾಟಕದ ವಸ್ತುವಿನ ಕಾಲ ಸೂಚಿಸಬಹುದು, ಹೆಚ್ಚೆಂದರೆ, ನಾಟಕಕಾರ ಸಮಕಾಲೀನ ಅಂಶಗಳನ್ನು ತನ್ನ ಕೃತಿಯಲ್ಲಿ ಅಳವಡಿಸಿದ್ದರೆ, ಆ ಕಾಲವನ್ನು ನಿಗದಿಪಡಿಸಬಹುದು. ಆದರೆ ರಂಗದ ಮೇಲೆ ನಡೆಯುವ ಪ್ರಯೋಗದ ಕಾಲ ಆ ಕ್ಷಣದ್ದು. ಪ್ರೇಕ್ಷಕ ರಂಗಮಂಚದ ಮೇಲೆ ನಾಟಕ ನೋಡುತ್ತಿರುವಾಗ ಆ ನಾಟಕದ ವಸ್ತುವಿನ ಕಾಲಕ್ಕೆ ಸರಿಯುತ್ತಾನೆ. ಹಾಗಾಗಿ ಪ್ರಯೋಗ ಸದಾ ವರ್ತಮಾನದ್ದಾಗಿರುತ್ತದೆ. ನಾಟಕದ ಹಸ್ತಪ್ರತಿ ಭೂತಕಾಲದ್ದಾಗುತ್ತದೆ.

ನಾಟಕದ ಹಸ್ತಪ್ರತಿ ಸಾಹಿತ್ಯದ ಅಂಶಗಳನ್ನು ಒಳಗೊಂಡಿರುತ್ತದೆ. ಅದರ ಸಲುವಾಗಿ ನಾಟಕದ ಪ್ರತಿಯನ್ನು ಸಾಹಿತ್ಯಕ ದೃಷ್ಟಿಯಿಂದ ನೋಡಬೇಕೇ ಹೊರತು ಕಲೆಯ ದೃಷ್ಟಿಯಿಂದಲ್ಲ. ಆದರೆ ಅದೇ ನಾಟಕದ ಪ್ರಯೋಗವನ್ನು ವಿಮರ್ಶಿಸುವಾಗ ಸಾಹಿತ್ಯ ವಿಮರ್ಶೆಯ ಸೂತ್ರಗಳನ್ನು ಅಳವಡಿಸಲು ಬರುವುದಿಲ್ಲ.

ಅದೇ ರೀತಿ ಒಂದು ಒಳ್ಳೆಯ ನಾಟಕ ಒಳ್ಳೆಯ ಪ್ರಯೋಗವೂ ಆಗುತ್ತದೆಂದು ಹೇಳಲಾಗುವುದಿಲ್ಲ. ಹಾಗೆಯೇ ಕೆಟ್ಟ ನಾಟಕದ ಪ್ರಯೋಗ ಕೆಟ್ಟದಾಗಿರುತ್ತದೆ ಎಂದು ಹೇಳುವಂತಿಲ್ಲ. ಅದು ನಿರ್ದೇಶಕರ ಕೈಯಲ್ಲಿ ಬೇಕಾದ ರೂಪ ಪಡೆಯಬಹುದು."

## ನಟರ ಕಾಲ :

ವೈಕುಂಠರಾಜು ಅವರು ಕನ್ನಡ ರಂಗಭೂಮಿಯ ಇತಿಹಾಸವನ್ನು ಮುಖ್ಯವಾಗಿ ಮೂರು ಘಟ್ಟಗಳಲ್ಲಿ ಗುರುತಿಸುತ್ತಾರೆ. ಅವುಗಳೆಂದರೆ 1. ನಟರ ಕಾಲ , 2. ನಾಟಕಕಾರರ ಕಾಲ ಮತ್ತು 3. ನಿರ್ದೇಶಕರ ಕಾಲ.

ಇಂದಿನ ಚಲನಚಿತ್ರಗಳಂತೆ, ಮುಖ್ಯಪಾತ್ರಧಾರಿಯ ಹೆಸರಿನ ಮೇಲೆ ನಾಟಕ ಅಂದಿನ ದಿನಗಳಲ್ಲಿ 50 – 100 ಪ್ರದರ್ಶನ ಕಾಣುತ್ತಿದ್ದವು. ಅವು ವೃತ್ತಿ ಕಂಪನಿಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದ ದಿನಗಳು. ನಾಟ್ಯಕಲಾ ಚತುರ, ನಟಸಾರ್ವಭೌಮ, ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರನ್ನು ಈ ಕಾಲದ ಪ್ರಮುಖ ನಟ ಎಂದು ಗುರುತಿಸಲಾಗಿದೆ.

ವರದಾಚಾರ್ಯರು ರಂಗಭೂಮಿಗೆ ಬರುವ ಮುನ್ನ ಬ್ರಿಟಿಷ್ ರೆಸಿಡೆಂಟರ ಕಚೇರಿಯಲ್ಲಿ ಗುಮಾಸ್ತರಾಗಿದ್ದರು. ಆ ವೇಳೆಯಲ್ಲಿ ಅರಮನೆಯಲ್ಲಿ ಪ್ರದರ್ಶನಗೊಳ್ಳುತ್ತಿದ್ದ ನಾಟಕಗಳನ್ನು ನೋಡಿಯೇ ಅವರು ಅಭಿನಯದಲ್ಲಿ ಆಸಕ್ತಿ ಬೆಳೆಸಿಕೊಂಡರು.

ವರದಾಚಾರ್ಯರು 1902 ರಲ್ಲಿ ರತ್ನಾವಳಿ ಥಿಯೇಟ್ರಿಕಲ್ಸ್, ಸಭಾ ಆರಂಭಿಸಿದರು. ಈ ಕಂಪನಿಯ "ಶಾಕುಂತಲ" ನಾಟಕ ತುಂಬಾ ಜನಪ್ರಿಯವಾಯಿತು. ಅವರು ರಂಗಕ್ಕೆ ಅಳವಡಿಸಿದ್ದು ಬಸವಪ್ಪ ಶಾಸ್ತ್ರಿಗಳ ಅನುವಾದವನ್ನು. ವೈಕುಂಠರಾಜು ಅವರು, ಆಧುನಿಕ ರಂಗಭೂಮಿಗೆ ಬಸವಪ್ಪ ಶಾಸ್ತ್ರಿಗಳ ಕೊಡುಗೆಯನ್ನು ವಿಶಿಷ್ಟ ಎನ್ನುತ್ತಾರೆ. ಒಂದರ್ಥದಲ್ಲಿ ಕನ್ನಡದ ಕಣ್ವ ಬಿ.ಎಂ.ಶ್ರೀ ಯವರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನೀಡಿದಂಥ ಕೊಡುಗೆಯನ್ನೇ ಬಸವಪ್ಪ ಶಾಸ್ತ್ರಿಗಳೂ ನೀಡಿದ್ದಾರೆ ಎನ್ನುತ್ತಾರೆ.

ಬಸವಪ್ಪ ಶಾಸ್ತ್ರಿಯವರು 'ಶಾಕುಂತಲ' ನಾಟಕವನ್ನು ಕನ್ನಡಕ್ಕೆ ತಂದದ್ದು 1880 ರಲ್ಲಿ. ಆ ಹೊತ್ತಿಗಾಗಲೇ ಪಾರ್ಸಿ ಕಂಪನಿ, ಬೆಂಗಳೂರು, ಮೈಸೂರುಗಳಲ್ಲಿ ನಾಟಕ ಪ್ರದರ್ಶನಗಳನ್ನು ನೀಡಿ ಹೋಗಿತ್ತು. ಶಾಸ್ತ್ರಿಯವರ ಅನುವಾದದ ಎರಡೇ ವರ್ಷಗಳ ತರುವಾಯ ಅರಮನೆಯಲ್ಲಿ ನಾಟಕ ಕಂಪನಿ ಆರಂಭವಾಯಿತು.

ಶಾಸ್ತ್ರಿಯವರು 'ಶಾಕುಂತಲ'ದ ನಂತರ, ಷೇಕ್ಸ್‌ಪಿಯರ್‌ನ 'ಒಥೆಲೊ' ನಾಟಕವನ್ನು ರೂಪಾಂತರಿಸಲು ಪ್ರಯತ್ನಿಸಿ 'ಶೂರಸೇನ ಚರಿತ್ರೆ' ಸೃಷ್ಟಿಸಿದರು. ವೈಕುಂಠರಾಜು ಹೇಳುವಂತೆ, ರೂಪಾಂತರ ಎಷ್ಟೇ ಕೆಟ್ಟದಾಗಿದ್ದರೂ ಅದು ಹೊಸ ಪರಂಪರೆಗೆ ನಾಂದಿಯಾಯಿತು. ಬಿ.ಎಂ.ಶ್ರೀ ಯವರ "ಇಂಗ್ಲೀಷ್ ಗೀತೆಗಳು" ಕೃತಿಗಿಂತ ಬಹಳ ಹಿಂದೆಯೇ ಆಂಗ್ಲಭಾಷೆಯ ಕೃತಿಯನ್ನು ಕನ್ನಡಕ್ಕೆ ತರಲು ಪ್ರಯತ್ನಿಸಿದ ಶಾಸ್ತ್ರಿಯವರು

'ಶ್ರೀ'ಯವರಿಗಿಂತ ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾರೆ. ಹೊಸ ಸಾಹಿತ್ಯಕ್ಕೆ 'ಶ್ರೀ'ಯವರಿಗಿಂತ ಮೊದಲೇ ಶಾಸ್ತ್ರಿಯವರು ನಾಂದಿ ಹಾಡಿದ್ದರು ಎನ್ನಬಹುದು.

ವರದಾಚಾರ್ಯರು, ಲಭ್ಯವಿರುವ ನಾಟಕಗಳನ್ನು ರಂಗಕ್ಕೆ ತಂದದ್ದಲ್ಲದೆ, ನಾಟಕಕಾರರಿಂದ ಕೆಲವು ನಾಟಕಗಳನ್ನೂ ಬರೆಯಿಸಿದರು. ಕನ್ನಡ ನಾಟಕಗಳ ಜೊತೆಗೆ ಕೆಲವು ಇಂಗ್ಲಿಷ್ ನಾಟಕಗಳನ್ನೂ ಅನುವಾದಿಸಿ ರಂಗಕ್ಕೆ ತರುವ ಪ್ರಯತ್ನಮಾಡಿದರು. ಅಷ್ಟೇ ಅಲ್ಲದೆ ಸ್ವತಃ ಅವರೇ ನಾಟಕಗಳನ್ನು ಬರೆದದ್ದುಂಟು. ಆ ಕಾಲದಲ್ಲಿ ಮೈಸೂರು ಭಾಗದಲ್ಲಿ ಹೆಚ್ಚಾಗಿ ಸಂಗೀತಕ್ಕಾಗಿ ಕರ್ನಾಟಕ ಸಂಗೀತದ ಮಟ್ಟುಗಳನ್ನು ಬಳಸಿಕೊಳ್ಳಲಾಗಿತ್ತು. ಆದರೆ ವರದಾಚಾರ್ಯರು ಹಿಂದೂಸ್ಥಾನೀ ಸಂಗೀತವನ್ನು ಪ್ರಯೋಗಕ್ಕೆ ತಂದರು.

ಇವೆಲ್ಲಕ್ಕೂ ಮಿಗಿಲಾಗಿ ವರದಾಚಾರ್ಯರು, ವೈಕುಂಠರಾಜು ಅವರಿಂದ ಲಿವಿಂಗ್ ಲೆಜೆಂಡ್ ಎನಿಸಿಕೊಳ್ಳುವುದು ಅವರ ಅಭಿನಯಕ್ಕಾಗಿ. ವೈಕುಂಠರಾಜು ಅವರು ಆಚಾರ್ಯರ ಯಾವ ನಾಟಕವನ್ನು ನೋಡದಿದ್ದರೂ ಈ ಅಭಿಪ್ರಾಯ ಹೊಂದುವುದಕ್ಕೆ ಬಲವಾದ ಕಾರಣವಿದೆ. ಅವರ ಪೀಳಿಗೆಯ ಮಂದಿಯಿಂದ ಆಚಾರ್ಯರ ನಟನೆ ಬಗ್ಗೆ ಅಪಾರ ಕತೆಗಳನ್ನು ಕೇಳಿದ್ದರು. ಅವುಗಳಲ್ಲಿ ಒಂದನ್ನು ಇಲ್ಲಿ ಉದಾಹರಿಸಬಹುದು.

'ಪ್ರಹ್ಲಾದ ವಿಜಯ' ನಾಟಕದಲ್ಲಿ ಆಚಾರ್ಯರದು ಹಿರಣ್ಯಕಶಪುವಿನ ಪಾತ್ರ. ಹಿರಣ್ಯಕಶಿಪು ತನ್ನ ಮಗ ಪ್ರಹ್ಲಾದನನ್ನು "ಎಲ್ಲಿರುವನೋ ಆ ನಿನ್ನ ಶ್ರೀ ಹರಿ ?" ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ಪ್ರಹ್ಲಾದ 'ಎಲ್ಲೆಲ್ಲೂ ಇರುವನು' ಎನ್ನುತ್ತಾನೆ. ಹಿರಣ್ಯಕಶಿಪು, "ಈ ಕಂಬದಲ್ಲಿರುವನೇ, ನಿನ್ನ ಹರಿ ? ಆ ಕಂಬದಲ್ಲಿರುವನೇ ನಿನ್ನ ಹರಿ ?" ಎಂದೆಲ್ಲಾ ಪ್ರಶ್ನಿಸುವ ದೃಶ್ಯ ಎಲ್ಲರಿಗೂ ತಿಳಿದಿದೆ. ಇದೇ ದೃಶ್ಯದಲ್ಲಿ ಹಿರಣ್ಯಕಶಿಪು ಕಂಬವೊಂದನ್ನು ಕಾಲಿನಿಂದ ಜಾಡಿಸಿ ಒದ್ದಾಗ ಅಲ್ಲಿಂದ ನರಸಿಂಹ ಪ್ರತ್ಯಕ್ಷನಾಗುತ್ತಾನೆ. ವಿಶಿಷ್ಟವೆಂದರೆ ಆಕ್ಷಣ ಹಿರಣ್ಯಕಶಿಪು, ತನ್ನ ಮಗ ಪ್ರಹ್ಲಾದನನ್ನು ಆನಂದದಿಂದ ಆಲಂಗಿಸುವುದು !

ಹಿರಣ್ಯಕಶಿಪು, ಹರಿಯ ಶತ್ರು. ಹಾಗಾದರೆ, ನರಸಿಂಹ ಪ್ರತ್ಯಕ್ಷನಾದ ತಕ್ಷಣ ಅವನು ಪ್ರಹ್ಲಾದನನ್ನು ಅಪ್ಪಿಕೊಳ್ಳುವುದೇಕೆ ? ಇದೇ ಅಚ್ಚರಿ. ಇದೇ ವರದಾಚಾರ್ಯರ ವಿಶೇಷ. ಆ ದೃಶ್ಯಕ್ಕೆ ಕಾರಣ ಇಷ್ಟೆ. ನರಸಿಂಹನನ್ನು ಕಂಬದಲ್ಲಿ ತೋರಿಸು ಎಂದಾಗ, ಮಗ ಆ ಸವಾಲನ್ನು ಒಪ್ಪಿಕೊಂಡು ಅದನ್ನು ಸಾಧಿಸಿ ತೋರಿಸುತ್ತಾನೆ. ಹಿರಣ್ಯಕಶಿಪು ಎಷ್ಟೇ ಕ್ರೂರಿಯಾದರೂ, ಮಗನ ಮೇಲೆ ಪ್ರೀತಿ ಇದ್ದೇ ಇತ್ತು. ತನ್ನಂತೆಯೇ ಹಿಡಿದ ಹಠ ಸಾಧಿಸುವ ಛಲ ಇರುವ ಮಗನನ್ನು

ಕಂಡು ಎಲ್ಲ ತಂದೆಯರಂತೆ ಅವನಿಗೂ ಮೆಚ್ಚುಗೆಯಾಯಿತು. ಅದನ್ನೇ ಅವರು ಅಭಿನಯಿಸಿದ್ದು.

ಸಾವಿರ ಪದಗಳಲ್ಲಿ ಹೇಳಲಾಗದ ಒಂದು ಭಾವವನ್ನು ಅವರು ಒಂದೇ ಒಂದು ಕ್ರಿಯೆಯ ಮೂಲಕ ತೋರಿಸಿದ್ದರು. ಒಬ್ಬ ಶ್ರೇಷ್ಠ ನಟನ ಅಭಿನಯ ಪ್ರತಿಭೆ ವ್ಯಕ್ತವಾಗುವುದು, ಇಂತಹ ಸನ್ನಿವೇಶಗಳಲ್ಲಿಯೇ. ನಟರ ಕಾಲದ ಅನೇಕ ನಟರಲ್ಲಿ ವೈಕುಂಠರಾಜು, ವರದಾಚಾರ್ಯರಿಗೆ ಅತ್ಯುನ್ನತ ಸ್ಥಾನ ನೀಡುತ್ತಾರೆ. ಅತಿ ಹೆಚ್ಚಿನ ಗೌರವ ಕೊಡುವುದೂ ಅವರಿಗೇ.

ವೈಕುಂಠರಾಜು ಅವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ, ವರದಾಚಾರ್ಯರ ಕಂಪನಿ ಪ್ರಯೋಗಿಸುತ್ತಿದ್ದ ಮೂರು ನಾಟಕಗಳ ಸಂಕಲನವನ್ನು ಹೊರತಂದರು. ಅದೇ 'ರತ್ನಾವಳಿ'. ಇದರಲ್ಲಿ ಪ್ರಹ್ಲಾದ ಚರಿತ್ರೆ ಮತ್ತು ವಿರಾಟಪರ್ವ ನಾಟಕಗಳಿವೆ.

ವೃತ್ತಿಕಂಪನಿಗಳಿಗೆ ಕಲೆಯ ಪೋಷಣೆಯ ಜೊತೆಗೆ ಕಲಾವಿದರ ಉದರ ಪೋಷಣೆಯೂ ಮುಖ್ಯವಾಗಿತ್ತು. ಒಂದೊಂದು ಕಂಪನಿಯಲ್ಲೂ ನೂರಿನ್ನೂರು ಜನ ಕೆಲಸ ಮಾಡುತ್ತಿದ್ದರು. ಅವರೆಲ್ಲರಿಗೂ ಅನ್ನ ಹೊಂದಿಸುವ ಜವಾಬ್ದಾರಿ ಕಂಪನಿಯ ಮಾಲೀಕನದು. ಆ ಕಾರಣ ಪ್ರೇಕ್ಷಕರನ್ನು ಥಿಯೇಟರ್‌ಗೆ ಸೆಳೆಯುವ ದೃಷ್ಟಿಯಿಂದ ನಾಟಕದ ವಸ್ತುವಿನ ಜೊತೆಜೊತೆಗೆ ದೃಶ್ಯವೈಭವಕ್ಕೂ ಹೆಚ್ಚಿನ ಗಮನ ಹರಿಸುತ್ತಿದ್ದರು. ಅದ್ದೂರಿ ಸೆಟ್‌ಗಳು, ಬಣ್ಣಬಣ್ಣದ ಲೈಟ್ಸ್ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದವು. ಹೀಗೆ ರಂಗದ ಮೇಲೆ ಅದ್ದೂರಿ ಸೆಟ್‌ಗಳಿಗೆ ಸಾಕಷ್ಟು ಹಣ ಖರ್ಚು ಮಾಡುತ್ತಿದ್ದವರು ಶಿರಹಟ್ಟಿ ವೆಂಕೋಬರಾಯರು.

ಶಿರಹಟ್ಟಿಯವರ ಕಂಪನಿ ಒಂದು ಊರಿನಿಂದ ಮತ್ತೊಂದು ಊರಿಗೆ ಕ್ಯಾಂಪ್ ಬದಲಿಸಬೇಕೆಂದರೆ ಸರಿಸುಮಾರು ನೂರು ಎತ್ತಿನ ಗಾಡಿಗಳ ಯಾತ್ರೆ ನಡೆಯಬೇಕಿತ್ತು. ಹೀಗೆ ನೂರು ಗಾಡಿಗಳು ಒಂದೇ ಬಾರಿಗೆ ಪ್ರಯಾಣ ಬೆಳೆಸುವುದೇ ಒಂದು ಪ್ರಚಾರತಂತ್ರ. ಗಾಡಿಗಳಲ್ಲಿರುತ್ತಿದ್ದ, ಸೀನರಿಗಳು, ಬೆಳಕಿನ ಸಾಮಾಗ್ರಿಗಳು ಮತ್ತಿತರೆ ಸರಂಜಾಮುಗಳನ್ನು ನೋಡಿಯೇ ಜನ ಆಕರ್ಷಿತರಾಗುತ್ತಿದ್ದರು. ಅದಕ್ಕೆ ತಕ್ಕಂತೆ ಪ್ರದರ್ಶನವೂ ಇರುತ್ತಿತ್ತು.

ಶಿರಹಟ್ಟಿಯವರು ತಮ್ಮ ಕಂಪನಿಗಾಗಿಯೇ ಬೆಳ್ಳಾವೆ ನರಹರಿ ಶಾಸ್ತ್ರಿಗಳಿಂದ 'ಶರಭಾವತಾರ' ನಾಟಕವನ್ನು ಬರೆಯಿಸಿ ಪ್ರಯೋಗಿಸಿದ್ದರು. ಅವರ ಕಂಪನಿಯಲ್ಲಿ ಕಲಾವಿದರಿಗೆ 150 ರಿಂದ 300 ರೂ.ಗಳವರೆಗೆ ಮಾಸಿಕ ವೇತನ ನೀಡುತ್ತಿದ್ದರು. ರಂಗಸಜ್ಜಿಕೆ ಸಿದ್ಧಮಾಡುವ ಕಲಾವಿದರಿಗೂ, ನಟನಟಿಯರಷ್ಟೇ ವೇತನ ನೀಡುತ್ತಿದ್ದುದು

ಶಾಸ್ತ್ರಿಗಳ ಕಂಪನಿಯ ಹೆಗ್ಗಳಿಕೆ. ನಟರಷ್ಟೇ, ಕಲಾವಿದರೂ ರಂಗಭೂಮಿಗೆ ಮುಖ್ಯ ಎನ್ನುವುದನ್ನು ಅವರು ಮನಗಂಡಿದ್ದರು. ಆರ್.ನಾಗೇಂದ್ರರಾಯರಂಥ ಪ್ರತಿಭೆ ಬೆಳಕಿಗೆ ಬಂದದ್ದೂ ಶಿರಹಟ್ಟಿಯವರ ಕಂಪನಿಯಿಂದಲೇ.

ಪ್ರತಿಯೊಂದು ನಾಟಕದ ವಿನ್ಯಾಸಕ್ಕೆ ಮಿತಿಮೀರಿ ಖರ್ಚುಮಾಡುತ್ತಿದ್ದ ವೆಂಕೋಬರಾಯರು ಸಾಲದ ಸುಳಿಗೆ ಸಿಲುಕಬೇಕಾಯಿತು. ಅವರ ನಂತರ ಅವರ ಮಗ ಕಂಪನಿ ನಡೆಸಲು ಪ್ರಯತ್ನಪಟ್ಟರಾದರೂ ಯಶ ಕಾಣಲಿಲ್ಲ.

## ಗುಬ್ಬಿ ವೀರಣ್ಣ :

'ಸದಾರಮೆ'ಯಲ್ಲಿ ಕಳ್ಳ ಮತ್ತು ಆದಿಮೂರ್ತಿ, 'ಪ್ರಭಾಮಣಿ ವಿಜಯ'ದಲ್ಲಿ ವೀರೋಚನ, 'ಗುಲೇಬ ಕಾವಲಿ'ಯಲ್ಲಿ ಮುತ್ತುಸ್ವಾಮಿ ಮತ್ತು ಕುರುಡು ದೊಂಬಿದಾಸ, ಪ್ರಹ್ಲಾದ ಚರಿತ್ರೆಯ ಸಾಬಿ ಪಾತ್ರಗಳಿಂದ ಮನೆಮಾತಾಗಿದ್ದ ವೀರಣ್ಣನವರದು ರಂಗಭೂಮಿ ಇತಿಹಾಸದಲ್ಲಿ ಪ್ರಮುಖ ಹೆಸರು.

ಕಂಪನಿ ಅವಸಾನದ ಅಂಚಿನಲ್ಲಿದ್ದಾಗ, ಮಾಲೀಕರಾದ ವೀರಣ್ಣ ಅದನ್ನು ಯಶಸ್ಸಿನತ್ತ ಕೊಂಡೊಯ್ದರು. ಒಂದು ಕಂಪನಿಯ ಎಲ್ಲಾ ಸ್ತರಗಳಲ್ಲೂ ದುಡಿದ ಅನುಭವ ಇದ್ದುದರಿಂದ ಆ ಯಶಸ್ಸು ಸಾಧ್ಯವಾಯಿತು.

ತುಮಕೂರಿನ ವಿದ್ಯಾಇಲಾಖೆಯಲ್ಲಿ ನೌಕರಿಯಲ್ಲಿದ್ದ ಬೆಳ್ಳಾವೆ ನರಹರಿಶಾಸ್ತ್ರಿಯವರನ್ನು ಕರೆಸಿ 'ಕೃಷ್ಣಲೀಲಾ', 'ಸದಾರಮೆ' ನಾಟಕಗಳನ್ನು ಬರೆಯಿಸಿದರು. ಈ ನಾಟಕಗಳಿಂದ ಕಂಪನಿಯ ಕಲೆಕ್ಷನ್ ದಿನವೊಂದಕ್ಕೆ ಸಾವಿರ ರೂ.ಗಳನ್ನು ದಾಟುವಂತಾಯ್ತು. ಇದೇ ಕಂಪನಿಯಲ್ಲಿ ಅದ್ಭುತ ನಟರಾದ ಸಿ.ಬಿ. ಮಲ್ಲಪ್ಪ, ಎಂ.ಎಸ್. ಗಂಗಾಧರರಾಯರು, ಜಿ.ಬಿ. ನಾಗೇಶರಾಯರು, ಸುಂದರಮ್ಮ ಮತ್ತಿತರರು ದುಡಿಯುತ್ತಿದ್ದರು.

ವೆಂಕೋಬರಾಯರಂತೆ, ವೀರಣ್ಣವನರೂ ರಂಗಸಜ್ಜಿಕೆಗೆ ಸಾವಿರಾರು ರೂ.ಗಳನ್ನು ಖರ್ಚು ಮಾಡುತ್ತಿದ್ದರು. 'ಕುರುಕ್ಷೇತ್ರ' ನಾಟಕದ ಸಲಕರಣೆಗಳಿಗಾಗಿಯೇ ಅವರು ಆ ಕಾಲದಲ್ಲಿ 70,000 ರೂ.ಗಳನ್ನು ವೆಚ್ಚ ಮಾಡಿದ್ದರು. ಈ ನಾಟಕ ಅಭೂತಪೂರ್ವ ಯಶಸ್ಸು ಕಂಡಿತ್ತು. ಪ್ರತಿದಿನ ಪ್ರದರ್ಶಿಸಿದರೂ ಸಾವಿರಾರು ರೂಪಾಯಿಗಳ ಕಲೆಕ್ಷನ್ ಆಗುತ್ತಿತ್ತು. ನಾಟಕ ನೋಡಲು ಬಂದ ಎಷ್ಟೋ ಮಂದಿ ಟಿಕೆಟ್ ಸಿಗದೆ ನಿರಾಶರಾಗಿ ಹಿಂತಿರುಗುತ್ತಿದ್ದರು.

ವೀರಣ್ಣನವರು ರಂಗದ ಮೇಲೆ 'ಸದಾರಮೆ'ಯ ಕಳ್ಳನ ಪಾತ್ರ ವಹಿಸಿ ಅಭಿನಯ ಮಾಡುತ್ತಿರುವಾಗಲೇ ತಮ್ಮ ಪತ್ನಿ ಸುಂದರಮ್ಮನವರ ನಿಧನದ ವಾರ್ತೆ ಬಂತು.

ವೀರಣ್ಣನವರು ಪ್ರೇಕ್ಷಕರಿಗೆ ರಸಭಂಗ ಆಗಬಾರದೆಂದು ಆ ಸುದ್ದಿಯನ್ನು ಯಾರಿಗೂ ಹೇಳಲಿಲ್ಲ. ಸ್ವಂತ ಮಕ್ಕಳಿಗೂ ಆ ಶೋಕದ ಸುದ್ದಿ ತಿಳಿಸಲಿಲ್ಲ. ಕಲೆಯೇ ಕಾಯಕ ಎಂದು ನಂಬಿದ್ದ ವೀರಣ್ಣನವರಿಗೆ ಕಲೆಗಿಂತ ಮಿಗಿಲಾದದ್ದು ಯಾವುದೂ ಇರಲಿಲ್ಲ.

ವೈಕುಂಠರಾಜು ಅವರು ಗುಬ್ಬಿ ಕಂಪನಿಯ 'ದಶಾವತಾರ' ಪ್ರಯೋಗವನ್ನು ವೃತ್ತಿರಂಗಭೂಮಿಯ ಕೊನೆಯ ಮಹತ್ವದ ಘಟ್ಟ (1955) ಎಂದು ಗುರುತಿಸುತ್ತಾರೆ. ಈ ಪ್ರಯೋಗದ ನಂತರ ಅಂತಹ ವೈಭವದ ಪ್ರಯೋಗಗಳು ಮತ್ತಾಗಲಿಲ್ಲ. ಅಲ್ಲಿಗೆ ನಟರ ಕಾಲ ಮುಗಿಯಿತೆಂದೇ ಅವರು ನಿರ್ಧರಿಸುತ್ತಾರೆ.

## ಹಿನ್ನೆಲೆ ವಾದ್ಯಸಂಗೀತ – ಮುನಿಯಪ್ಪ

ನಾಟಕಗಳಿಗೆ ಹಿನ್ನೆಲೆ ಸಂಗೀತ ಅಳವಡಿಸುವುದನ್ನು ಆರಂಭಿಸಿದವರು ಗುಬ್ಬಿ ಕಂಪನಿಯ ಮುನಿಯಪ್ಪ ಎನ್ನುವುದನ್ನು ಇಂದಿನ ಅನೇಕರು ಮರೆತಿದ್ದಾರೆ. ಅದಕ್ಕೂ ಮಿಗಿಲಾಗಿ ಮುನಿಯಪ್ಪ ಕಾರಂತರ ಗುರುಗಳು. ಮುನಿಯಪ್ಪ ಕೊನೆಯ ದಿನಗಳವರೆಗೂ ಪ್ರಸಿದ್ಧಿಗೇ ಬರದ ಪ್ರತಿಭೆ. ವೈಕುಂಠರಾಜು ಅವರು ಬಿ.ವಿ. ಕಾರಂತರೊಂದಿಗೆ ಮುನಿಯಪ್ಪರನ್ನು ಭೇಟಿಯಾಗಿ ಸಂದರ್ಶನ ನಡೆಸಿದ್ದಾರೆ.

ಮುನಿಯಪ್ಪ ರಂಗಭೂಮಿಗೆ ಕಾಲಿಟ್ಟಾಗ ಅವರಿಗೆ ಹತ್ತು ವರ್ಷ. ಕಂಟ್ರಾಕ್ಟರ್ ಒಬ್ಬರ ಹತ್ತಿರ ಅವರು ಆಗ ದುಡಿಯುತ್ತಿದ್ದರು. ಆ ಕಂಟ್ರಾಕ್ಟರ್‌ಗೆ ನಾಟಕದ ಹುಚ್ಚು. ಅದೇ ಹುಚ್ಚು ಇವರಿಗೂ ತಗುಲಿತು. ಮುಂದೆ ಇವರು ಗುಬ್ಬಿ ಕಂಪನಿ ಪ್ರವೇಶಿಸಿದರು. ಎರಡು ದಶಕಗಳಿಗೂ ಹೆಚ್ಚು ಕಾಲ ಅಲ್ಲಿಯೇ ಕಲಾಸೇವೆ ಸಲ್ಲಿಸಿದರು. ಹಿನ್ನೆಲೆ ಸಂಗೀತವನ್ನು ನಾಟಕಗಳಲ್ಲಿ ಬಳಕೆಗೆ ತಂದದ್ದು ಇಲ್ಲಿಯೇ. ಹಾರ್ಮೋನಿಯಂ, ಆರ್ಗನ್, ಪಿಯಾನೋ, ಕೊಳಲು, ಕ್ಲಾರಿಯೋನೆಟ್, ಪಿಟೀಲು ಮತ್ತಿತರ ವಾದ್ಯಗಳನ್ನು ಬಳಕೆಗೆ ತಂದರು. ಕಾರಂತರು ಸಂಗೀತದ ಪ್ರಯೋಗ ಕಲಿತದ್ದು ಇವರಲ್ಲಿಯೇ.

ಮುನಿಯಪ್ಪನವರು ಕಂಪನಿಯ ಪ್ರಾಕ್ಟೀಸ್ ಮ್ಯಾನೇಜರ್. ಅಕ್ಕಮಹಾದೇವಿ, ಕೃಷ್ಣಲೀಲಾ, ರುಕ್ಮಿಣಿ ಕಲ್ಯಾಣ, ಕೃಷ್ಣಗಾರುಡಿ, ಚಲ್ತಿ ದುನಿಯಾ ಮುಂತಾದ ನಾಟಕಗಳ ರಿಹರ್ಸಲ್‌ಗಳನ್ನು ಇವರೇ ನೋಡಿಕೊಳ್ಳುತ್ತಿದ್ದರು.

ಹಿನ್ನೆಲೆ ಸಂಗೀತದ ಜೊತೆಗೆ ರಂಗಸಜ್ಜಿಕೆಯಲ್ಲೂ ಇವರದು ಪಳಗಿದ ಕೈ. ಗುಬ್ಬಿ ಕಂಪನಿ ಬಿಟ್ಟ ಮೇಲೆ ಹೊನ್ನಪ್ಪ ಭಾಗವತರ್ ಜೊತೆ ಸೇರಿ 'ಉಮಾಮಹೇಶ್ವರಿ ನಾಟಕ ಸಭಾ' ಸಂಸ್ಥೆ ಕಟ್ಟಿದರು. ಇಲ್ಲಿ ಅವರು ನಾಟಕದ ವಿಶೇಷ ರೀತಿಯ ಬೆಳಕಿನ ಸಂಯೋಜನೆ ಮಾಡುತ್ತಿದ್ದರು.

## ಶ್ರೇಷ್ಠ ನಟ ಮತ್ತು ಶ್ರೇಷ್ಠ ನಟಿ

ಬರೋಬ್ಬರಿ ನೂರು ವರ್ಷಗಳಷ್ಟು ವಿಸ್ತಾರವಾಗಿ ಹರಡಿಕೊಂಡಿರುವ ವೃತ್ತಿರಂಗಭೂಮಿಯ ಶ್ರೇಷ್ಠ ನಟ, ನಟಿಯರು ಯಾರೆಂದು ಜಿಜ್ಞಾಸೆ ನಡೆದೇ ಇದೆ.

ಹಾಸ್ಯ ಪಾತ್ರಗಳಲ್ಲಿ ಗುಬ್ಬಿ ವೀರಣ್ಣನವರು, ವೀರಾವೇಶದ ಪಾತ್ರಗಳಲ್ಲಿ ಎಂ.ಎನ್. ಗಂಗಾಧರರಾಯರು, ಬೇಲೂರು ರಾಘವೇಂದ್ರರಾಯರು, ಸಂತರ ಪಾತ್ರಗಳಲ್ಲಿ ಸಿ.ಬಿ. ಮಲ್ಲಪ್ಪನವರು, ಮಹಮದ್ ಪೀರ್ ಕೀರ್ತಿಪಡೆದಿದ್ದಾರೆ. ಆದರೆ ವೈಕುಂಠರಾಜು ಅವರ ಪ್ರಕಾರ ಶೃಂಗಾರ, ಹಾಸ್ಯ, ವೀರ, ಭಯಾನಕ, ರೌದ್ರ ಭಾವನೆಗಳನ್ನು ಯಶಸ್ವಿಯಾಗಿ ಅಭಿನಯಿಸಿದ ಏಕೈಕ ನಟನೆಂದರೆ ಎಂ.ವಿ. ಸುಬ್ಬಯ್ಯನಾಯ್ಡು. ಸುಬ್ಬಯ್ಯನಾಯ್ಡು ವೈಕುಂಠರಾಜು ದೃಷ್ಟಿಯಲ್ಲಿ ಶ್ರೇಷ್ಠ ನಟ. ಗುಬ್ಬಿ ಕಂಪನಿಯ ಮುನಿಯಪ್ಪನವರೂ ಇದೇ ಮಾತನ್ನು ಒಪ್ಪುತ್ತಾರೆ. ಅದೇ ರೀತಿ ನಟಸಾರ್ವಭೌಮ ಡಾ. ರಾಜ್‌ಕುಮಾರ್ ಕೂಡ ಇದೇ ಅಭಿಪ್ರಾಯವನ್ನು ಬೆಂಬಲಿಸುತ್ತಾರೆ.

ನಾಯ್ಡುಅವರು 'ಭೂಕೈಲಾಸ'ದಲ್ಲಿ ರಾವಣನ ಪಾತ್ರ ಅಭಿನಯಿಸುತ್ತಿದ್ದ ರೀತಿಯೇ ವಿಶಿಷ್ಟವಾಗಿತ್ತು. ಅವರ ರಾವಣನ ಪಾತ್ರಕ್ಕೆ ಮಾನವೀಯ ಗುಣಗಳ ಲೇಪನ ನೀಡಿದ್ದರು. ವೈಕುಂಠರಾಜು ಅವರೇ ಹೇಳುವಂತೆ 'ಸ್ವಲ್ಪ ಹೊತ್ತು ಲಿಂಗವನ್ನು ಹಿಡಿದುಕೊಂಡಿರು ಎಂದು ರಾವಣ ಗಣೇಶನನ್ನು ಬೇಡಿಕೊಳ್ಳುವುದು, ಗಣಪತಿ, ಲಿಂಗವನ್ನು ಭೂಮಿಯ ಮೇಲಿಟ್ಟಾಗ, ಅದನ್ನು ಎತ್ತಿಕೊಳ್ಳಲು ಪ್ರಯತ್ನಿಸಿ ಅದರಲ್ಲಿ ವಿಫಲನಾದಾಗ ಪ್ರೇಕ್ಷಕರ ಹೃದಯ ಹಿಂಡುವಂತೆ ಗೋಳಾಡುವ ದೃಶ್ಯಗಳು ಈಗಲೂ ನನ್ನ ಕಣ್ಣ ಮುಂದಿವೆ. ಆ ದೃಶ್ಯಗಳಲ್ಲಿ ನಾಯ್ಡು ಅವರ ಅಭಿನಯ ಅಮೋಘ.

ವರದಾಚಾರ್ಯರ ಹಿರಣ್ಯಕಶಿಪು ಪಾತ್ರದಂತೆಯೇ ನಾಯ್ಡು ಅವರ ರಾವಣ ಪಾತ್ರಕ್ಕೂ ರಂಗಭೂಮಿಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ ಎನ್ನುತ್ತಾರೆ ಬಿ.ವಿ. ವೈಕುಂಠರಾಜು. ಕೇವಲ ಅಭಿನಯವಲ್ಲದೆ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ' ಸ್ಥಾಪಿಸಿ ರಂಗಭೂಮಿಗೆ ವಿಶಿಷ್ಟ ಕೊಡುಗೆಯನ್ನೇ ನೀಡಿದ್ದಾರೆ ಸುಬ್ಬಯ್ಯ ನಾಯ್ಡು.

ಸುಬ್ಬಯ್ಯನಾಯ್ಡು ಅವರ ಹೆಸರು ಬಂದಾಗಲೆಲ್ಲ ಅನಿವಾರ್ಯವೆಂಬಂತೆ ನೆನಪಾಗುವ ಮತ್ತೊಂದು ಹೆಸರು ಆರ್. ನಾಗೇಂದ್ರರಾಯರದು. ಬಹಳ ಕಾಲದವರೆವಿಗೂ ಇಬ್ಬರೂ ಜೊತೆಗೇ ಮಂಡಳಿ ನಡೆಸಿದರು. ಆ ನಂತರದ ದಿನಗಳಲ್ಲಿ ರಾಯರು ಚಿತ್ರರಂಗದ ಕಡೆಗೆ ತಿರುಗಿದರು.

ವೈಕುಂಠರಾಜು ಅವರ ಪ್ರಕಾರ ರಂಗಭೂಮಿಯ ಶ್ರೇಷ್ಠನಟಿ ಬಿ.ಜಯಮ್ಮ. ಗುಬ್ಬಿ ಕಂಪನಿಯ ಮುನಿಯಪ್ಪನವರೂ ಈ ಮಾತಿಗೆ ತಲೆದೂಗುತ್ತಾರೆ.

ಗುಬ್ಬಿ ಕಂಪನಿಯ 'ಕುರುಕ್ಷೇತ್ರ', 'ದಶಾವತಾರ' ಮೊದಲಾದ ಮಹತ್ವದ ಪ್ರಯೋಗಗಳಲ್ಲಿ ಜಯಮ್ಮನವರ ಅತ್ಯುತ್ತಮ ಅಭಿನಯವನ್ನು ಜನ ಇಂದಿಗೂ ಜ್ಞಾಪಿಸಿಕೊಳ್ಳುತ್ತಾರೆ. ಮುನಿಯಪ್ಪನವರೇ ಹೇಳುವಂತೆ, "ಜಯಮ್ಮನವರು ರಂಗಕ್ಕೆ ಕಾಲಿಡುತ್ತಿದ್ದಂತೆಯೇ ಪ್ರೇಕ್ಷಕರಲ್ಲಿ ವಿದ್ಯುತ್ ಸಂಚಾರವಾಗುತ್ತಿತ್ತು." ಅವರು ಒಂದು ಹಾಡು ಹಾಡಿದರೆಂದರೆ ಸಾಕು ಗ್ಯಾಲರಿಯಲ್ಲಿ ಒನ್ಸ್‌ಮೋರ್‌ಗಳ ಸುರಿಮಳೆಯಾಗುತ್ತಿತ್ತು.

ಗುಬ್ಬಿ ಕಂಪನಿ ಸ್ಥಾಪನೆಯಾದದ್ದು ಕ್ರಿ.ಶ. 1884 ರಲ್ಲಿ. ಆಗ ಚಂದಣ್ಣನವರು ಕಂಪನಿಯ ಮಾಲೀಕರು. ನಂತರ 1907 ರಲ್ಲಿ ವೀರಣ್ಣನವರು ಕಂಪನಿಯ ನೇತೃತ್ವ ವಹಿಸಿದರು. ಅಲ್ಲಿಂದ ಕಂಪನಿಯ ಎರಡನೇ ಘಟ್ಟ ಆರಂಭವಾಯಿತು. 1928 ರಲ್ಲಿ ಜಯಮ್ಮನವರ ಪ್ರವೇಶದಿಂದ ಕಂಪನಿಯ ಮೂರನೇಘಟ್ಟ ಆರಂಭವಾಯಿತು ಎನ್ನುತ್ತಾರೆ ವೈಕುಂಠರಾಜು.

'ಸದಾರಮೆ'ಯಲ್ಲಿ ಜಯಮ್ಮನವರದು, ನಾಯಕಿಯ ಪಾತ್ರ. ಗಂಭೀರವಾದ ಪಾತ್ರ. ಆದರೆ ಮಧ್ಯೆ ನಾಯಕಿ ಕಳ್ಳನ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತಾಳೆ. ಆಗ ಕಳ್ಳನ ಕೈಯಿಂದ ಉಪಾಯವಾಗಿ ತಪ್ಪಿಸಿಕೊಳ್ಳಬೇಕು. ಆ ಕಳ್ಳನ ಪಾತ್ರದಲ್ಲಿರುವವರು ಸ್ವತಃ ವೀರಣ್ಣನವರು. ಕಳ್ಳನ ಪಾತ್ರದಲ್ಲಿ ವೀರಣ್ಣ ಭಾರೀ ಜನಮನ್ನಣೆ ಗಳಿಸಿದ್ದರು. ಜಯಮ್ಮನವರು ವೀರಣ್ಣನವರಿಗೆ ಸರಿಸಾಟಿಯಾಗಿ ಅಭಿನಯಿಸದಿದ್ದರೆ ಇಡೀ ಸನ್ನಿವೇಶವೇ ಮುಗ್ಗರಿಸುತ್ತಿತ್ತು. ಆದರೆ ಹಾಗಾಗಲಿಲ್ಲ. ಹಾಸ್ಯದ ಸನ್ನಿವೇಶದಲ್ಲೂ ಸೈ ಎನಿಸಿಕೊಂಡರು. ಹೀಗೆ ಒಂದೇ ನಾಟಕದಲ್ಲಿ ಎರಡು ರೀತಿಯಲ್ಲಿ ಅಭಿನಯಿಸಿದ್ದು ಶ್ರೇಷ್ಠ ನಟಿ ಎನಿಸಿಕೊಳ್ಳಲು ಕಾರಣ.

## ವೃತ್ತಿರಂಗಭೂಮಿಗೆ ಕಾಯಕಲ್ಪ :

ಹಿರಿಯ ನಾಟಕಕಾರ, ಕವಿ ಚಂದ್ರಶೇಖರ ಕಂಬಾರ ಆಗ 'ಕರ್ನಾಟಕ ನಾಟಕ ಅಕಾಡೆಮಿ'ಯ ಅಧ್ಯಕ್ಷರು. ಅವರಿಗೆ, ನಶಿಸಿ ಹೋಗುತ್ತಿರುವ ವೃತ್ತಿ ಕಂಪನಿಗಳ ಬಗೆಗೆ ಸಮಗ್ರ ಅಧ್ಯಯನ ನಡೆಸಬೇಕೆಂಬ ಆಸಕ್ತಿಯಿತ್ತು. ಇದೇ ಆಸಕ್ತಿಯನ್ನು ಹೊಂದಿದ್ದವರು ಬಿ.ವಿ. ವೈಕುಂಠರಾಜು. 1983 ರಲ್ಲಿ ಕಂಬಾರರೇ ವೈಕುಂಠರಾಜು ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯಲ್ಲಿ ಜಿ.ವಿ. ಶಿವಾನಂದ, ಎಚ್.ಎನ್. ಹೂಗಾರ, ಶ್ರೀನಿವಾಸ ತಾವರಗಿರಿಯವರು ಸದಸ್ಯರಾಗಿ ಹಾಗೂ ಅಕಾಡೆಮಿಯ ರಿಜಿಸ್ಟ್ರಾರ್ ಎಲ್.ಎಸ್. ಸುಧೀಂದ್ರ ಸಮಿತಿಯ ಸಂಚಾಲಕರಾಗಿ ನೇಮಕಗೊಂಡರು.

ಸಮಿತಿಯ ಸದಸ್ಯರ ತಂಡ ರಾಜ್ಯಾದ್ಯಂತ ಎರಡು ತಿಂಗಳ ಕಾಲ ಸಂಚರಿಸಿ 46 ಕಂಪನಿಗಳಿಗೆ ಭೇಟಿ ನೀಡಿ 1600 ಕ್ಕೂ ಹೆಚ್ಚಿನ ಜನರನ್ನು ಸಂದರ್ಶಿಸಿ ವರದಿಯನ್ನು ತಯಾರಿಸಿತು. ವೃತ್ತಿರಂಗಭೂಮಿ ಕುರಿತಂತೆ ಈ ಮಟ್ಟಗಿನ ಅಧ್ಯಯನವೊಂದು ದೇಶದ ಬೇರೆಲ್ಲೆಡೆ ನಡೆದ ಉದಾಹರಣೆ ಇಲ್ಲ.

ವೈಕುಂಠರಾಜು ಅವರು, ಅಧ್ಯಯನ ಸಮಿತಿ ಕಲೆಹಾಕಿದ ಮಾಹಿತಿ ಹಾಗೂ ಸಂದರ್ಶನಗಳನ್ನು ಆಧರಿಸಿ ವರದಿಯೊಂದನ್ನು ಸಿದ್ಧಪಡಿಸಿದರು. ವರದಿಯ ಬೇಡಿಕೆಗಳು ಇದುವರೆವಿಗೂ ಸರ್ಕಾರದಿಂದ ಈಡೇರದಿದ್ದರೂ, ಅದು ಮುಂದಿನ ಎಲ್ಲಾ ಕಾಲಕ್ಕೂ ಅತ್ಯುತ್ತಮ ದಾಖಲೆಯಾಗಿ ಉಳಿಯಲಿದೆ.

## ಬದಲಾವಣೆಗಳಿಗೆ ಹೊಂದಿಕೊಳ್ಳದಿರುವುದು :

ವೃತ್ತಿರಂಗಭೂಮಿ ನಶಿಸಲು ಚಲನಚಿತ್ರೋದ್ಯಮವೇ ಕಾರಣವೆಂದು ಅನೇಕ ಕಂಪನಿಯ ಮಾಲೀಕರು ಅಧ್ಯಯನದ ವೇಳೆ ಅಭಿಪ್ರಾಯಪಟ್ಟಿದ್ದರು. ಆದರೆ ವೈಕುಂಠರಾಜು ಅವರು ಈ ಅಭಿಪ್ರಾಯವನ್ನು ತಮ್ಮ ವರದಿಯಲ್ಲಿ ಒಪ್ಪುವುದಿಲ್ಲ. ಮಾಲೀಕರ ಅಭಿಪ್ರಾಯ ಸತ್ಯವೇ ಆಗಿದ್ದಲ್ಲಿ ಹವ್ಯಾಸಿರಂಗತಂಡಗಳು ದಿನೇ ದಿನೇ ಹೆಚ್ಚುತ್ತಿರಲಿಲ್ಲ. ಹವ್ಯಾಸಿ ಕಲಾವಿದರು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾರೆ. ಆದರೆ ವೃತ್ತಿ ಕಂಪನಿಯವರು ತಮ್ಮ ಸಿದ್ಧ ಮಾದರಿಗಳನ್ನು ಬಿಟ್ಟು ಬರಲು ತಯಾರಿಲ್ಲ.

ವೈಕುಂಠರಾಜು ಹೇಳುವಂತೆ, ಇಂಗ್ಲೆಂಡ್ ಮತ್ತಿತರ ದೇಶಗಳಲ್ಲಿ ವೃತ್ತಿರಂಗಭೂಮಿಯವರು ಹವ್ಯಾಸಿ ರಂಗಭೂಮಿಯಲ್ಲಾಗುವ ಬದಲಾವಣೆಗಳನ್ನು ಸದಾ ಗಮನಿಸುತ್ತಿರುತ್ತಾರೆ. ಹಾಗೆಯೇ ಹವ್ಯಾಸೀ ರಂಗಭೂಮಿಯಲ್ಲಾಗುವ ಯಶಸ್ವೀ ಪ್ರಯೋಗಗಳನ್ನು ಅವರು ಅಳವಡಿಸಿಕೊಳ್ಳುತ್ತಾರೆ. ಆ ಕಾರಣ ಅಲ್ಲಿ ವೃತ್ತಿರಂಗಭೂಮಿಯವರು ಇಲ್ಲಿಯಂತೆ ಆತಂಕ ಎದುರಿಸುತ್ತಿಲ್ಲ. ಕರ್ನಾಟಕದಲ್ಲಿ ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿ. ವೃತ್ತಿರಂಗಭೂಮಿಯ ಕಲಾವಿದರು, ಹವ್ಯಾಸಿ ಪ್ರಯೋಗಗಳನ್ನು ಅಳವಡಿಸಿಕೊಳ್ಳುವುದಿರಲಿ, ಅವರ ಪ್ರದರ್ಶನಗಳನ್ನು ನೋಡಲೂ ಹೋಗುವುದಿಲ್ಲ. ಜೊತೆಗೆ, ರಂಗಭೂಮಿಗಿದ್ದ ಪ್ರೇಕ್ಷಕ ವರ್ಗ ವೃತ್ತಿರಂಗಭೂಮಿ ಮತ್ತು ಹವ್ಯಾಸೀ ರಂಗಭೂಮಿಗಳ ನಡುವೆ ಹಂಚಿ ಹೋಗಿದ್ದಾರೆ.

ಹೊಸ ಪ್ರಯೋಗಗಳಿಗೆ ಕೈ ಹಾಕಲು ಇರುವ ದೊಡ್ಡ ಸಮಸ್ಯೆ ಹಣದ್ದು ! ಪ್ರಯೋಗ ಎಂದಮೇಲೆ ಫಲಿತಾಂಶ ಏನಾಗುತ್ತದೋ ಹೇಳಲಾಗುವುದಿಲ್ಲ. ಕಂಪನಿಯ ಮಾಲೀಕ ತನ್ನ ತಂಡದ ಎಲ್ಲರಿಗೂ ಊಟ, ವಸತಿ, ಸಂಬಳ ಒದಗಿಸಿ ಪ್ರಯೋಗಕ್ಕೆ ಹಣ ಖರ್ಚು ಮಾಡುವುದು ಕಷ್ಟ. ಹಾಗೂ – ಹೀಗೂ ಹೊಸ ಪ್ರಯೋಗಗಳಿಗೆ

ಕೈ ಹಾಕಬೇಕೆಂದು ಕೆಲವು ಮಾಲೀಕರು ಇಚ್ಛಿಸಿದರೂ, ಅವರ ತಂಡದಲ್ಲಿ ನುರಿತ, ಸುಶಿಕ್ಷಿತ ಕಲಾವಿದರ ಕೊರತೆ ಇದೆ.

ಈ ನಿಟ್ಟಿನಲ್ಲಿ, ಅಕಾಡೆಮಿ ವೃತ್ತಿರಂಗಭೂಮಿ ಕಲಾವಿದರಿಗಾಗಿಯೇ ವಿಶೇಷ ತರಬೇತಿ ಶಿಬಿರಗಳನ್ನು ನಡೆಸಬೇಕೆಂದು ಅಧ್ಯಯನ ವರದಿ ಸಲಹೆ ನೀಡುತ್ತದೆ.

**ರಂಗಮಂದಿರಗಳು :**

ಕಂಪನಿಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ರಂಗಮದಿರಗಳದ್ದು. ಅನೇಕ ಕಂಪನಿಗಳ ದಿವಾಳಿತನಕ್ಕೆ ಈ ಸಮಸ್ಯೆ ಬಹುಮುಖ್ಯ ಕಾರಣ. ಕಂಪನಿಗಳು ಒಂದು ಊರಿನಿಂದ ಮತ್ತೊಂದು ಊರಿಗೆ ಹೊರಟನಂತರ ಕನಿಷ್ಠ ಹದಿನೈದು ದಿನಗಳು ತಾತ್ಕಾಲಿಕ ರಂಗಮಂದಿರವನ್ನು ನಿರ್ಮಿಸುವುದರಲ್ಲೇ ಕಳೆದು ಹೋಗುತ್ತವೆ. ಈ ಹದಿನೈದು ದಿನಗಳ ಕಾಲ ಯಾವುದೇ ಆದಾಯ ಇರುವುದಿಲ್ಲ. ಆದಾಯ ಇಲ್ಲದಿದ್ದರೂ ಕಂಪನಿಯ ಎಲ್ಲರಿಗೂ ಊಟ-ವ್ಯವಸ್ಥೆ ಆಗಲೇಬೇಕು. ಮಾಲೀಕ ಸಂಪೂರ್ಣವಾಗಿ ಬೋಳಿಸಿಕೊಂಡು ಹೋಗುವುದು ಇಲ್ಲಿಯೇ.

ಅಂತೂ ಇಂತೂ ಒಂದು ತಾತ್ಕಾಲಿಕ ರಂಗಮಂದಿರವನ್ನು ನಿರ್ಮಾಣ ಮಾಡೇಬಿಟ್ಟರು ಎಂದು ಕೊಳ್ಳೋಣ. ಆ ಹೊತ್ತಿಗೆ ಸರಿಯಾಗಿ, ಕಂಪನಿ ನಾಟಕಗಳ ಕಡು ವೈರಿ 'ಮಳೆಗಾಲ' ವಕ್ಕರಿಸಿಬಿಡುತ್ತಾನೆ. ಮಳೆಗಾಲದಲ್ಲಿ ಕಂಪನಿ ಹಾಕಿದವರು ಏನೇನೂ ಕುರುವಿಲ್ಲದೆ ನಾಶವಾಗಿ ಹೋದ ಅನೇಕ ಉದಾಹರಣೆಗಳಿವೆ.

ಮಳೆಗಾಲದ ಕತೆ ಹೀಗಾದರೆ, ಬೇಸಿಗೆ ಕಾಲವೇನೂ ಇವರಿಗೆ ಮಿತ್ರನಲ್ಲ. ಪ್ರೇಕ್ಷಕನೊಬ್ಬ ಸೇದಿ ಬಿಸಾಕಿದ ಬೀಡಿ ತುಂಡಿನಿಂದಲೋ ಅಥವಾ ಮತ್ತಾವುದೋ ಅವಘಡದಿಂದಲೋ, ಬೆಂಕಿ ಹತ್ತಿಕೊಂಡರೆ ಸೀನರಿಗಳಿರಲಿ, ಮನುಷ್ಯರ ಜೀವಕ್ಕೇ ಕುತ್ತು! ಇಂಥ ಸಂದರ್ಭಗಳಿರುವಾಗ ವೃತ್ತಿ ರಂಗಭೂಮಿ ಸುಗಮವಾಗಿ ನಡೆಯುವುದಾದರೂ ಹೇಗೆ?

ವೈಕುಂಠರಾಜು ನೇತೃತ್ವದ ಸಮಿತಿ ಈ ಸಮಸ್ಯೆಗೆ ನೀಡುವ ಸಲಹೆ, ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ರಂಗಮಂದಿರಗಳನ್ನು ನಿರ್ಮಿಸುವುದು. ಸಮಿತಿ ಹೇಳುವಂತೆ ಜಿಲ್ಲಾ ಕೇಂದ್ರಗಳಲ್ಲಿ ಸುಮಾರು 15-16 ಲಕ್ಷ ರೂ.ಗಳ ವೆಚ್ಚದಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ತೀರಾ ಕಡಿಮೆ ಖರ್ಚಿನಲ್ಲಿ ರಂಗಮಂದಿರಗಳನ್ನು ನಿರ್ಮಾಣ ಮಾಡಿದರೆ ಸಾಕು.

ಇದರೊಟ್ಟಿಗೆ, ಕಂಪನಿ ಮಾಲೀಕರು, ತಮ್ಮ ಕ್ಯಾಂಪ್ ಹಾಕಿ ನಾಟಕ ಆಡಲು ಪರವಾನಗಿ ಪಡೆಯುವುದೆಂದರೆ ಅದೊಂದು ಅಶ್ವಮೇಧಯಾಗ ಮಾಡಿದಂತೆ.

ಪೊಲೀಸ್ ಇನ್ಸ್‌ಪೆಕ್ಟರ್‌ನಿಂದ ಹಿಡಿದು ಎಸ್.ಪಿ ವರೆಗೆ ಕೆ.ಇ.ಬಿ.ಯವರಿಂದ ಅಗ್ನಿಶಾಮಕದಳದವರೆಗೆ ಕಂಪನಿಯ ಪ್ರತಿನಿಧಿ ಅಲೆದಾಡಬೇಕು. ಹೀಗೆ ಪರವಾನಿಗಿ ಪಡೆಯುವುದೇ ಎರಡರಿಂದ ಮೂರು ವಾರಗಳ ಕಾಲ ಹಿಡಿದರೆ ಪ್ರದರ್ಶನ ನಡೆಸುವುದು ಯಾವಾಗ? ಲಾಭ ಗಳಿಸುವುದು ಯಾವಾಗ? ಈ ಮಧ್ಯೆ ಪರವಾನಿಗೆಗಾಗಿ ಅಧಿಕಾರಿಗಳ ಕೈ 'ಬಿಸಿ' ಮಾಡುವುದಂತೂ ಎಂದಿಗೂ ಬಿಡದ ಕರ್ಮ.

ಈ ಸಮಸ್ಯೆಯನ್ನು ಬಗೆಹರಿಸಲು ಸರಕಾರ ಅಗತ್ಯ ಕ್ರಮ ಕೈಗೊಂಡು ಸುಲಭ ರೀತಿಯಲ್ಲಿ ಪರವಾನಗಿ ಕೊಡಿಸುವ ವ್ಯವಸ್ಥೆ ಮಾಡಲು ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

## ಸರ್ಕಾರದ ನೆರವು :

ಸರ್ಕಾರ ಕೇವಲ ಕೆಲವು ಆಯ್ದ ಕಂಪನಿಗಳಿಗೆ ಧನ ಸಹಾಯಕ ನೀಡುವುದನ್ನು ಸಮಿತಿ ವಿರೋಧಿಸುತ್ತದೆ. ಹೀಗೆ ಆಯ್ದ ಕಂಪನಿಗಳಿಗೆ ಸಹಾಯ ಮಾಡುವುದರಿಂದ ರಂಗಭೂಮಿಯ ಒಟ್ಟಾರೆ ಬೆಳವಣಿಗೆಗೆ ಯಾವುದೇ ಉಪಯೋಗ ಆಗುವುದಿಲ್ಲವೆಂದು ಅದರ ಅಭಿಪ್ರಾಯ.

ಅದರ ಬದಲಿಗೆ, ಕಂಪನಿಯೊಂದು ಉತ್ತಮ ನಾಟಕವೊಂದನ್ನು ಪ್ರಯೋಗಕ್ಕಿಳಿಸುವಾಗ ಸರಕಾರ ಧನ ಸಹಾಯ ಮಾಡಬೇಕು. ಮಾಲೀಕರು ತಮ್ಮ ಯೋಜನೆಯನ್ನು ಅಕಾಡೆಮಿಯ ಮೂಲಕ ಸರಕಾರಕ್ಕೆ ಕಳುಹಿಸಿ ಪ್ರಯೋಜನ ಪಡೆಯುವಂತಾಗಬೇಕು.

## ಆಧುನಿಕ ರಂಗಭೂಮಿ :

## ನಾಟಕಕಾರರ ಕಾಲ:

ವೈಕುಂಠರಾಜು ಅವರು ನಾಟಕಕಾರರ ಕಾಲದಲ್ಲಿ ಪ್ರಮುಖವಾಗಿ ಗುರುತಿಸಿರುವುದು ಗೋವಿಂದ ಪೈ ಮತ್ತು ಸಂಸರನ್ನು.

## ಗೋವಿಂದ ಪೈ :

ವೈಕುಂಠರಾಜು ಗುರುತಿಸುವಂತೆ ಪೈ ಮೂಲತಃ ಪ್ರಯೋಗ ಪ್ರಿಯರು. ಅವರು ಜಪಾನಿನ ನೋ· ನಾಟಕಗಳನ್ನು ಅನುವಾದಿಸಲು ಯತ್ನಿಸಿದ್ದು ಅವರ ಪ್ರಯೋಗ ಪ್ರೇಮವನ್ನು ಬಿಂಬಿಸುತ್ತದೆ.

ಗ್ರೀಕ್ ನಾಟಕಗಳನ್ನು ಅಧ್ಯಯನ ಮಾಡುವಾಗ ಆ ನಾಟಕಗಳ ಬಂಧ ಅವರನ್ನು ಆಕರ್ಷಿಸಿತು. ಅದೇ ಕಾರಣ 'ಹೆಬ್ಬೆರಳು' ಎಂಬ ಮಹತ್ವಾಕಾಂಕ್ಷೆಯ ನಾಟಕ ರೂಪುಗೊಳ್ಳುವ ಮುನ್ನ 'ತಾಯಿ'ಯ ರೂಪಾಂತರಕ್ಕಿಳಿದರು. ಕೇವಲ ಮೂರು ಪಾತ್ರಗಳಿಂದ ಅನಾವರಣಗೊಳ್ಳುವ ಈ ನಾಟಕ 'ತಾಯ್ತನಕ್ಕೂ'ಮಗುವಿಗೆ ಜನ್ಮ ನೀಡುವುದಕ್ಕೂ ಸಂಬಂಧವಿಲ್ಲ ಎಂಬುದನ್ನು ಸೂಚಿಸುತ್ತದೆ. ವೈಕುಂಠರಾಜು ಹೇಳುವಂತೆ, ಪೈ ಅವರು ಇಲ್ಲಿ ಬಳಸಿರುವ ಭಾಷೆ ಕೃತಕ. ಜೊತೆಗೆ ನಾಟಕದ ಮೂಲ ಆಶಯವನ್ನು ಹೊರತುಪಡಿಸಿದರೆ ಮತ್ತಾವ ಕಾರಣಗಳಿಂದಲೂ ಇದು ಮಹತ್ವದೆನಿಸುವುದಿಲ್ಲ.

ಪೈ 'ತಾಯಿ' ಬರೆದ ಹನ್ನೆರಡು ವರ್ಷಗಳ ತರುವಾಯ ಬರೆದ ಕೃತಿ 'ಹೆಬ್ಬೆರಳು'. ಮೂಲಕತೆಯಿಂದ ನಾಟಕಕಾರ ಬಯಸುವ ಬದಲಾವಣೆಗಳೇ ಈ ನಾಟಕದ ಹೆಚ್ಚುಗಾರಿಕೆ ಎನ್ನುತ್ತಾರೆ ವೈಕುಂಠರಾಜು. ಗ್ರೀಕ್ ನಾಟಕಗಳ ಮಾದರಿಯನ್ನು ಸಂಪೂರ್ಣವಾಗಿ ಅಳವಡಿಸಿರುವ ನಾಟಕವಿದು. ಪೈ ಅವರು 'ಮೇಳ'ದವರನ್ನು 'ಗೊಂದಳ'ದವರೆಂದು ಕರೆಯುತ್ತಾರೆ.

ಮೂಲ ಕತೆಯಲ್ಲಿ ದ್ರೋಣ ಉದ್ದೇಶ ಪೂರ್ವಕವಾಗಿಯೇ ಏಕಲವ್ಯನಿಂದ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಬೇಡಿದರೆ, ಇಲ್ಲಿ ಪರಿಹಾಸ್ಯಕ್ಕೆ 'ಹೆಬ್ಬೆರಳನ್ನೇ ಕೊಡು' ಎನ್ನುತ್ತಾರೆ. ಮತು ಮುಗಿಯುವ ಮುನ್ನವೇ ಏಕಲವ್ಯ ತನ್ನ ಬಾಣದ ಸಹಾಯದಿಂದ ಹೆಬ್ಬೆರಳನ್ನು ತುಂಡರಿಸಿ ಮೂರ್ಛೆ ತಪ್ಪಿರುತ್ತಾನೆ! ಈ ಘಟನೆಯಿಂದ ದ್ರೋಣಾಚಾರ್ಯರೂ ವ್ಯಥೆ ಪಡುತ್ತಾರೆ.

ನಾಟಕ ಆರ್ಯ, ಅನಾರ್ಯರ ನಡುವಿನ ಸಂಘರ್ಷವನ್ನು ಪ್ರಮುಖವಾಗಿ ಬಿಂಬಿಸುತ್ತದೆ. ಆದರೆ ಈ ಸಂಘರ್ಷ ಕೇವಲ ವಾದದ ಹಂತಕ್ಕೆ ನಿಲ್ಲದೆ ನಾಟಕದ ವಸ್ತುವಿನೊಂದಿಗೆ ಲೀನವಾಗಿರುವುದು ಇದರ ವಿಶೇಷ ಎಂದು ವೈಕುಂಠರಾಜು ಅಭಿಪ್ರಾಯ ಪಡುತ್ತಾರೆ. ಈ ನಾಟಕದಲ್ಲಿ ಬಳಸಿರುವ ಭಾಷೆ ಎಲ್ಲಿಯೂ ಕೃತಕ ಎನಿಸುವುದಿಲ್ಲ. ಪೈ ಅವರು ಗೊಂದಳದವರನ್ನು ತರುವುದರ ಜೊತೆಗೆ ನಾಟಕದ ವಿಷುಯಲ್ಸ್ ಕಡೆಗೂ ಹೆಚ್ಚಿನ ಗಮನ ಹರಿಸಿದ್ದಾರೆ. ಈ ನಾಟಕವನ್ನು ಯಾವ ಗೊಂದಲವೂ ಇಲ್ಲದೆ ಇಂದಿಗೂ ಪ್ರಯೋಗಕ್ಕಿಳಿಸಬಹುದು ಎನ್ನುತ್ತಾರೆ ಅವರು.

ಗೋವಿಂದ ಪೈ 1948ರಲ್ಲಿ ಬರೆದ ಮತ್ತೊಂದು ನಾಟಕ 'ಚಿತ್ರಭಾನು ಅಥವಾ 1942'. ಸ್ವಾತಂತ್ರ್ಯ ಸಂಗ್ರಾಮದ ವೇಳೆ ಹುಬ್ಬಳ್ಳಿಯಲ್ಲಿ ನಡೆದ ಘಟನೆಯೊಂದರ ಪ್ರೇರಣೆಯಿಂದ ರಚನೆಯಾದ ನಾಟಕವಿದು.

ಸ್ವಾತಂತ್ರ್ಯಯೋಧ ಮಗನನ್ನು ಕೊಂದ ಪೋಲೀಸನಿಗೆ ದುಃಖತಪ್ತ ತಾಯಿ

ಸಿಟ್ಟಿನಿಂದ ಪೊಲೀಸನಿಗೆ ಶಾಪ ನೀಡುತ್ತಾಳೆ. ನಂತರ ಆ ಶಾಪ ನಿಜವಾಗಿ ಆ ಪೊಲೀಸನೂ ಅಪಘಾತದಲ್ಲಿ ಸಾಯುತ್ತಾನೆ. ತನ್ನ ಮಗನ ಸಾವಿನ ಜೊತೆಗೆ ಸೊಸೆಯ ಆತ್ಮಹತ್ಯೆಯ ನೋವನ್ನು ಅನುಭವಿಸಿರುವ ತಾಯಿ ತನ್ನ ಶಾಪದಿಂದ ಸತ್ತ ಪೊಲೀಸನ ಸಾವಿಗೂ ಮರುಗುತ್ತಾಳೆ. ಅದೇ ಕತೆ.

ಭಾವನಾತ್ಮಕ ಸನ್ನಿವೇಶಗಳಿಂದ ಕೂಡಿರುವ ಈ ನಾಟಕ ಪ್ರಯೋಗದ ದೃಷ್ಟಿಯಿಂದ ಉತ್ತಮವಾಗಿಲ್ಲ ಎಂಬುದು ವೈಕುಂಠರಾಜು ಅವರ ಅಭಿಪ್ರಾಯ.

ಇದರೊಟ್ಟಿಗೆ, ಪೈಯವರು ಪ್ರಯೋಗಕ್ಕಿಳಿಸಿದ 'ನೋ' ನಾಟಕಗಳು ರಂಗಭೂಮಿಯ ಹೊಸ ಸಾಧ್ಯತೆಗಳನ್ನು ಹುಡುಕುವ ಕಾಲದಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎನ್ನುತ್ತಾರೆ ವೈಕುಂಠರಾಜು.

**ಸಂಸ :**

ಸಂಸರೆಂದಾಕ್ಷಣ ಅವರ ನಾಟಕಗಳಿಗಿಂತ ಖಾಕಿಧಾರಿ ಪೊಲೀಸ್ ನೆನಪಾಗುತ್ತಾನೆ. ಸಂಸ ಸಂಶಯದ ಸುಳಿಗೆ ಸಿಲುಕಿಯೇ ಸಾವನ್ನಪ್ಪಿದರು. ಸಾವನ್ನಪ್ಪಿದರು ಎಂದರೆ ತಪ್ಪಾಗುತ್ತದೆ. ಬದಲಿಗೆ ಸಂಸರೇ ಸಾವನ್ನು ಅಪ್ಪಿದರು ಎನ್ನಬೇಕು. ಅವರು ಬದುಕಿರುವವರೆಗೂ ಯಾರಿಗೂ ಅರ್ಥವಾಗಲಿಲ್ಲ. ಬರೆದ ನಾಟಕಗಳನ್ನು ಮಾರಲೆಂದೇ ಬೀದಿ ಬೀದಿ ಅಲೆಯುತ್ತಿದ್ದರು.

ಸಂಸರು ಒಟ್ಟು ಬರೆದದ್ದು 23 ನಾಟಕಗಳಾದರೂ ಲಭ್ಯವಿರುವುದು ಕೇವಲ ಆರು. ಅವೆಂದರೆ, 'ಬಿರುದಂತೆಂಬರ ಗಂಡ', 'ಸುಗುಣ ಗಂಭೀರ', 'ಬೆಟ್ಟದ ಅರಸು', ವಿಗಡ ವಿಕ್ರಮರಾಯ', 'ಮಂತ್ರಶಕ್ತಿ' ಮತ್ತು 'ವಿಜಯನಾರಸಿಂಹ'.

ಇವರ ನಾಟಕಗಳಲ್ಲಿ ಮೈಸೂರು ಸಂಸ್ಥಾನದ ಇತಿಹಾಸವೇ ಪ್ರಮುಖ ವಸ್ತು. ವೈಕುಂಠರಾಜು ಗುರುತಿಸಿರುವಂತೆ ಇವರ ನಾಟಕಗಳಲ್ಲಿ ಶೌರ್ಯ, ರಾಜಕೀಯ ಕುತಂತ್ರಗಳಂತೆಯೇ ಶೃಂಗಾರಕ್ಕೂ ಪ್ರಾಶಸ್ತ್ಯವಿದೆ. ಹಾಗೆಯೇ ಸಂಸರು ಇತಿಹಾಸದ ಜೊತೆ ಜೊತೆಗೆ ಸಮಕಾಲೀನ ಅಂಶಗಳಿಗೂ ಗಮನ ನೀಡುತ್ತಿದ್ದರು.

ವೈಕುಂಠರಾಜು ಅವರ ಪ್ರಕಾರ, ಸಂಸರು ತಮ್ಮ ಸಮಕಾಲೀನ ನಾಟಕಕಾರರಂತೆ ಸಾಮಾಜಿಕ ಸಮಸ್ಯೆಗಳಿಗೆ ನಾಟಕರೂಪ ನೀಡದೆ ಇತಿಹಾಸಕ್ಕೆ ಮರಳಿದ್ದು ವಿಶೇಷ. ಈ ವಿಶೇಷದಿಂದಾಗಿಯೇ ಅವರು ಕನ್ನಡ ರಂಗಭೂಮಿಯಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ. ಸಂಸರ ಸಮಕಾಲೀನರಾದ ಕೈಲಾಸಂ ಮತ್ತು ಶ್ರೀರಂಗರಿಗೆ ಹೋಲಿಸಿದರೆ ಸಂಸ ಅಷ್ಟು ಜನಪ್ರಿಯರಲ್ಲ. ವೈಕುಂಠರಾಜು ಹೇಳುವಂತೆ ಸಂಸರ ನಾಟಕಗಳು ಅವರಿಬ್ಬರ ನಾಟಕಗಳಿಗಿಂತಲೂ ಗಟ್ಟಿಯಾದವು. ಒಂದು ಶತಮಾನದ

ನಂತರ ರಂಗಾಸಕ್ತರ ಮನಸ್ಸಿನಲ್ಲಿ ಶ್ರೀರಂಗ ಮತ್ತು ಕೈಲಾಸಂ ಉಳಿಯದಿದ್ದರೂ ಸಂಸ ಉಳಿದಿರುತ್ತಾರೆ ಎನ್ನುತ್ತಾರೆ ವೈಕುಂಠರಾಜು.

ಸಂಸರು ಇತರರಂತೆ ಜನಪ್ರಿಯರಾಗದಿರಲು ಕಾರಣ, ಅವರ ನಾಟಕಗಳನ್ನು ಪ್ರಯೋಗಿಸುವುದು ಅಷ್ಟು ಸುಲಭವಲ್ಲ. ಇವರ ನಾಟಕಗಳಲ್ಲಿ ಯಾವುದೇ ಪಾತ್ರ ಮಾತನಾಡುವ ಭಾಷೆ ಆ ಪಾತ್ರದ ಮನೋಧರ್ಮವನ್ನು ಪ್ರತಿಬಿಂಬಿಸುವಂತಿದೆ. ಅನಗತ್ಯವಾಗಿ ಅವರು ಒಂದೇ ಒಂದು ಪದವನ್ನೂ ಬಳಸುವುದಿಲ್ಲ. ವೈಕುಂಠರಾಜು ಅವರ ಪ್ರಕಾರ ಸಂಸರ ಭಾಷೆ, ನವ್ಯಕವಿಗಳ ಭಾಷೆಯಷ್ಟೇ ಸಂಕೀರ್ಣ.

## ಕೈಲಾಸಂ :

ಕೈಲಾಸಂ ಲಂಡನ್‌ನಲ್ಲಿ ಓದಿ ಬಂದವರು. ಅವರಿಗೆ ಲಂಡನ್‌ನ ವೃತ್ತಿ ನಾಟಕಗಳು ಹಾಗೂ ಹವ್ಯಾಸಿ ನಾಟಕಗಳ ಸಂಪೂರ್ಣ ಪರಿಚಯವಿತ್ತು. ಈ ಹೊತ್ತಿಗಾಗಲೇ ಕನ್ನಡದಲ್ಲಿ ಚಲನಚಿತ್ರಗಳು ಆರಂಭವಾಗಿ ಪ್ರೇಕ್ಷಕ ವರ್ಗ ಅತ್ತ ಮುಖಮಾಡಿತ್ತು. ಪ್ರೇಕ್ಷಕರ ಲಕ್ಷ್ಯವನ್ನು ರಂಗಭೂಮಿಯೆಡೆಗೆ ಮತ್ತೆ ಸೆಳೆಯಬೇಕಿತ್ತು. ಆ ಬದಲಾವಣೆಗೆ ಕೈಲಾಸಂ ಅವರೇ ಬರಬೇಕಾಯಿತು.

ಕೈಲಾಸಂ ತಾಯ್ನಾಡಿಗೆ ಹಿಂದಿರುಗಿದವರೇ ರಂಗಭೂಮಿಯಲ್ಲಿ ಬಲವಾದ ಅಲೆಯನ್ನೇ ಬೀಸಿದರು. ಕೈಲಾಸಂರ ಏಕಾಂಕಗಳು ಪ್ರೇಕ್ಷಕರನ್ನು ಆಕರ್ಷಿಸಿದವು. ಹವ್ಯಾಸಿ ರಂಗಭೂಮಿ ಬಲವಾಗಿ ತಳವೂರಿದ್ದು ಇವರ ನಾಟಕಗಳಿಂದಲೇ. ನಾಟಕಗಳಲ್ಲಿ ಇವರು ಬಳಸುತ್ತಿದ್ದ ಇಂಗ್ಲಿಷ್ ಮಿಶ್ರಿತ ಕನ್ನಡ ಭಾಷೆ ಹೊಸ ಸಂಚಲನಕ್ಕೆ ಕಾರಣವಾಯಿತು.

ಇವರ ನಾಟಕಗಳು ಎಷ್ಟು ಮಟ್ಟಿಗೆ ಪ್ರಸಿದ್ಧಿ ಪಡೆದವೆಂದರೆ. ವಿದ್ಯಾರ್ಥಿ ಸಂಘಗಳು ಇವರ ಒಂದು ನಾಟಕವಿಲ್ಲದೆ ಉದ್ಘಾಟನೆಯಾಗುತ್ತಲೇ ಇರಲಿಲ್ಲ. ಈ ಯಶಸ್ಸಿಗೆ ಮತ್ತೊಂದು ಕಾರಣ ಅವರ ನಾಟಕಗಳ 'ಸುಲಭ ಪ್ರಯೋಗ'.

ಕೈಲಾಸಂ ನಾಟಕಗಳಲ್ಲಿ ಸಾಮಾಜಿಕ ಸಮಸ್ಯೆಗಳೇ ಮುಖ್ಯ ವಸ್ತು. ವೈಕುಂಠರಾಜು ಹೇಳುವಂತೆ ಅವರು ಈ ಸಮಸ್ಯೆಗಳನ್ನು ಗಂಭೀರವಾಗಿ ಚಿತ್ರಿಸದೆ ಗೇಲಿ ಮಾಡುತ್ತಿದ್ದರು. ಆ ಗೇಲಿಯ ಕಾರಣವಾಗಿಯೇ ಇವರ ನಾಟಕಗಳು ಹೆಚ್ಚೆಚ್ಚು ಜನಪ್ರಿಯವಾದವು.

ಇವರ ಪ್ರಯೋಗಗಳು ದುಬಾರಿಯವಲ್ಲ. ಮಧ್ಯಮ ವರ್ಗದ ಜನತೆಯ ಸಮಸ್ಯೆಗಳನ್ನು ಚಿತ್ರಿಸುತ್ತಿದ್ದರಿಂದ ಆಡಂಬರ ಅಥವಾ ವೈಭೋಗದ ಅಗತ್ಯವಿರಲಿಲ್ಲ. ವಸ್ತ್ರ ವಿನ್ಯಾಸಕ್ಕೂ ದುಂದು ವೆಚ್ಚ ಮಾಡುವ ಅಗತ್ಯವಿರಲಿಲ್ಲ.

ಇದೆಲ್ಲದರ ಜೊತೆಗೆ ಕೈಲಾಸಂರ ಮೇಲೆ ವೈಕುಂಠರಾಜು ಅವರ ಆರೋಪವೂ ಇದೆ. ಅದೇಂದರೆ, ಕೈಲಾಸಂ ಅವರು ವೃತ್ತಿರಂಗಭೂಮಿಯ ಜಡತ್ವವನ್ನು ಗುರುತಿಸಿದರೇ ಹೊರತು ಅದರ ಆಕರ್ಷಣೆಯ ತಂತ್ರಗಳನ್ನು ಗುರುತಿಸುವಲ್ಲಿ ಸೋತರು. ಈ ಕಾರಣದಿಂದ ಕೈಲಾಸಂರ ನಾಟಕಗಳಿಗೂ ಕ್ರಮೇಣ ಏಕತಾನ ಅಂಟಿಕೊಂಡಿತು. ಹೊಸ ನಾಟಕಕಾರರು ವೈವಿಧ್ಯಮಯವಾದ ನಾಟಕಗಳನ್ನು ಬರೆಯಲಾರಂಭಿಸಿದರು. ಹವ್ಯಾಸಿಗಳೂ ಅದ್ಧೂರಿ ಪ್ರಯೋಗಗಳನ್ನಾಡಲು ಶುರು ಹಚ್ಚಿದರು. ಈ ಮಧ್ಯೆ ಕೈಲಾಸಂರ ಪ್ರಯೋಗಗಳು ಸಪ್ಪೆಯಾದವು. ಅವರು (ವೈಕುಂಠರಾಜು) ಹೇಳುವಂತೆ ನಾಟಕಗಳು 'ಎಪಿಕ್' ಮಟ್ಟ ಮುಟ್ಟಿದರೆ ಮಾತ್ರ ರಂಗಭೂಮಿಯ ಮೇಲೆ ದೀರ್ಘಕಾಲ ಉಳಿಯಬಲ್ಲವು. ಕೈಲಾಸಂರ ಒಂದೇ ಒಂದು ನಾಟಕವಾದರೂ ಆ ಮಟ್ಟ ಮುಟ್ಟಲಿಲ್ಲ ಎನ್ನುತ್ತಾರೆ. ಆದರೆ ಕೈಲಾಸಂ ಒಂದು ಕಾಲದ ಅಗತ್ಯವನ್ನು ಪೂರೈಸಿದರು.

## ಶ್ರೀರಂಗ :

ಕೈಲಾಸಂರಂತೆ ಇವರೂ England returned! (ಇಂಗ್ಲೆಂಡ್‌ನಿಂದ ಹಿಂತಿರುಗಿದವರು) ಉತ್ತರ ಕರ್ನಾಟಕದಲ್ಲಿ ಜಡ್ಡುಗಟ್ಟಿದ್ದ ರಂಗಭೂಮಿ ಚಳವಳಿಯನ್ನು ನೋಡಲಾಗದೆ ಬೇಸತ್ತು ರಂಗಭೂಮಿಗೆ ಪ್ರವೇಶಿಸಿದರು.

ಇವರದು ಮೂಲತಃ ಬಂಡಾಯ ಪ್ರವೃತ್ತಿ. ಇದರ ಕಾರಣದಿಂದಲೇ ಅವರು ಕನ್ನಡ ರಂಗಭೂಮಿಗೆ ವಿಶಿಷ್ಟ ಕೊಡುಗೆ ಕೊಡಲು ಸಾಧ್ಯವಾಯಿತು. ಇವರು ನೂರಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ನಾಟಕ ಬರೆಯುವುದರ ಜೊತೆಗೆ ಕೆಲವನ್ನು ಅವರೇ ರಂಗಕ್ಕೆ ತಂದರು. ಅವುಗಳಲ್ಲಿ 'ರಂಗಭಾರತ', 'ಸ್ವರ್ಗಕ್ಕೆ ಮೂರೇ ಬಾಗಿಲು' ಮುಂತಾದವು ಅವರಿಗೆ ಖ್ಯಾತಿ ತಂದವು. ಹಾಗೆಯೇ ಇವರ ಬಹುತೇಕ ನಾಟಕಗಳು ಮರಾಠಿಗೆ ಅನುವಾದವಾಗಿವೆ.

ಕೈಲಾಸಂರಂತೆಯೂ ಇವರೂ ಹೊಸ ನಾಟಕಗಳ ಮೂಲಕ ರಂಗಭೂಮಿಗೆ ವಿಶೇಷ ಚಾಲನೆ ನೀಡಿದರು. ಕೈಲಾಸಂರ ಮೇಲೆ ಮಾಡಿದ ಆರೋಪವನ್ನೇ ವೈಕುಂಠರಾಜು ಅವರು ಇವರ ಮೇಲೂ ಹೊರಿಸುತ್ತಾರ. ವೃತ್ತಿ ರಂಗಭೂಮಿಯ ದೃಶ್ಯಗುಣಗಳನ್ನು ಮರೆತು ತಪ್ಪುಮಾಡಿದರು ಎನ್ನುತ್ತಾರೆ. ಹಾಗೆಯೇ ಹಿಂದೆ, ನಾಟಕಗಳಲ್ಲಿ ಹಾಡು, ನೃತ್ಯ ಇರಲೇಬೇಕು ಎನ್ನುವುದು ಸೂತ್ರವಾಗಿದ್ದಂತೆ, ಕೈಲಾಸಂ ಮತ್ತು ಶ್ರೀರಂಗರ ನಾಟಕಗಳಲ್ಲಿ ಹಾಡುಗಳು ಇರಲೇಕೂಡದು ಎನ್ನುವುದೂ ಒಂದು ಸೂತ್ರವೆಂಬಂತಾಯಿತು! ಇದೇ ಕಾರಣ ಇವರ ನಾಟಕಗಳೂ ಏಕತಾನವನ್ನು ಅನುಭವಿಸಿದವು. ಶ್ರೀರಂಗರ ಹತ್ತು ನಾಟಕಗಳನ್ನು ನೋಡಿದರೆ ಹನ್ನೊಂದನೆಯದನ್ನು

ಯಾರೇ ಆದರೂ ಸುಲಭವಾಗಿ ಕಲ್ಪಿಸಿಕೊಳ್ಳಬಹುದು. ಇದೇ ಕಾರಣದಿಂದ ಇತ್ತೀಚಿನ ದಿನಗಳಲ್ಲಿ ಶ್ರೀರಂಗರ ನಾಟಕಗಳು ಪ್ರಯೋಗದಿಂದ ಮರೆಯಾಗುತ್ತಿವೆ ಎನ್ನುತ್ತಾರೆ ವೈಕುಂಠರಾಜು.

## ನಿರ್ದೇಶಕರ ಕಾಲ :

1967ರಲ್ಲಿ ಬಿ.ವಿ. ಕಾರಂತರ ನಿರ್ದೇಶನದಲ್ಲಿ ಶ್ರೀರಂಗರ 'ನೀ ಕೊಡೆ ನಾ ಬಿಡೆ' ನಾಟಕ ಪ್ರಯೋಗವಾಯಿತು. ಅಂದಿನಿಂದ ಕನ್ನಡ ರಂಗಭೂಮಿಯಲ್ಲಿ ನಿರ್ದೇಶಕರ ಕಾಲ ಆರಂಭವಾಯಿತು ಎಂದು ವೈಕುಂಠರಾಜು ಗುರುತಿಸುತ್ತಾರೆ. 'ನಾಟ್ಯಸಂಘ ಥಿಯೇಟರ್' ಈ ಪ್ರಯೋಗವನ್ನು ಆಯೋಜಿಸಿತ್ತು. ಶ್ರೀರಂಗರು ನಾಟ್ಯಸಂಘ ಥಿಯೇಟರ್‌ನ ಅಧ್ಯಕ್ಷರಾಗಿದ್ದರು.

ಈ ಪ್ರಯೋಗದ ನಂತರ ಎರಡು ದಶಕಗಳ ಕಾಲ ಕಾರಂತರು ಕನ್ನಡ ರಂಗಭೂಮಿಯನ್ನು ಆವರಿಸಿಕೊಂಡಿದ್ದರು. 1972ರಲ್ಲಿ ಕಲಾಕ್ಷೇತ್ರದ ಬಯಲು ರಂಗಮಂದಿರದಲ್ಲಿ ಇವರು ನಿರ್ದೇಶಿಸಿದ ಮೂರು ನಾಟಕಗಳು ಕಾರಂತರ ನಿಜ ಸಾಮರ್ಥ್ಯವನ್ನು ಹೊರತಂದವು.

ಈ ನಾಟಕಗಳ ಪ್ರದರ್ಶನಗಳನ್ನು ನೋಡಲು ಪ್ರೇಕ್ಷಕರು ಟಿಕೆಟ್‌ಗಾಗಿ ಕಲಾಕ್ಷೇತ್ರದಿಂದ ಟೌನ್‌ಹಾಲ್‌ವರೆಗೂ ಕ್ಯೂ ನಿಂತಿದ್ದನ್ನು ವೈಕುಂಠರಾಜು ಇಂದಿಗೂ ಸ್ಮರಿಸುತ್ತಾರೆ. ನೂತನ ರಂಗ ಚಳವಳಿಗೆ ಇದೇ ಕಾರಣ ಎನ್ನುತ್ತಾರೆ.

ಲಂಕೇಶರ 'ಈಡಿಪಸ್' (ಅನುವಾದ), 'ಸಂಕ್ರಾಂತಿ' ಹಾಗೂ ಚಂದ್ರಶೇಖರ ಕಂಬಾರರ 'ಜೋಕುಮಾರ ಸ್ವಾಮಿ' ನಾಟಕಗಳು ಆ ವೇಳೆ ಪ್ರಯೋಗಗೊಂಡಿದ್ದವು. ಅಂದು ಈಡಿಪಸ್ ಪಾತ್ರವಹಿಸಿದ್ದ ಗಿರೀಶ್ ಕಾರ್ನಾಡ್ ತಮ್ಮ ಯಶಸ್ವೀ ಪ್ರದರ್ಶನದಿಂದ ಪ್ರೇಕ್ಷಕರ ಮನಗೆದ್ದಿದ್ದರು. ಇದೇ ಸಂದರ್ಭದಲ್ಲಿ ಕಾರಂತರ ನಿರ್ದೇಶನದ ಜೊತೆಗೆ ಬೆಳಕಿಗೆ ಬಂದದ್ದು ವಿ. ರಾಮಮೂರ್ತಿಯವರ 'ಬೆಳಕಿನ ಸಂಯೋಜನೆ'

ಜಾನಪದ ವಾತಾವರಣದ ಹಿನ್ನೆಲೆಯಲ್ಲಿ ರೂಪಿತಗೊಂಡಿರುವ ಕಂಬಾರರ 'ಜೋಕುಮಾರ ಸ್ವಾಮಿ' ಕಾರಂತರ ನಿರ್ದೇಶನದಿಂದಾಗಿ ರಂಗಭೂಮಿಯಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿತು ಎನ್ನುತ್ತಾರೆ ವೈಕುಂಠರಾಜು. ಪ್ರದರ್ಶನದ ಆರಂಭದಲ್ಲಿ ಪಾತ್ರಧಾರಿಗಳು ಪ್ರೇಕ್ಷಕರ ಮಧ್ಯದಿಂದಲೇ ನಡೆದುಕೊಂಡು ಹೋಗಿ ವೇದಿಕೆ ಹತ್ತುತ್ತಿದ್ದುದು ಅಂದಿನ ನೋಡುಗರಿಗೆ ಹೊಸ ಅನುಭವ. ಜಾನಪದ ಮತ್ತು ಆಧುನಿಕ ರಂಗ ತಂತ್ರಗಳೆರಡನ್ನೂ ಕಾರಂತರು ಈ ಪ್ರಯೋಗದಲ್ಲಿ ಅಳವಡಿಸಿದ್ದು ಗಮನಾರ್ಹ.

'ಸಂಕ್ರಾಂತಿ'ಯ ಪ್ರಯೋಗದಲ್ಲಿ ಕಾರಂತರು ಮೊದಲ ಬಾರಿಗೆ ದೊಡ್ಡ ಗುಂಪನ್ನು ಬಳಸಿಕೊಂಡದ್ದರು. ಗುಂಪಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಮುಖ್ಯನಾಗಿರುವಂತೆ ಮತ್ತು ಒಟ್ಟಾರೆಯಾಗಿ ಗುಂಪು ಒಬ್ಬನೇ ವ್ಯಕ್ತಿಯಂತೆ ಕಾಣುವ ರೀತಿಯಲ್ಲಿ ಗುಂಪನ್ನು ಕಾರಂತರು ಬಳಸಿಕೊಂಡಿರುವುದು ವಿಶೇಷ ಎನ್ನಬಹುದು. ವೈಕುಂಠರಾಜು ಗಮನಿಸುವಂತೆ ಕಾರಂತರ ವೈಶಿಷ್ಟತೆ ಅಡಗಿದ್ದುದು ಅವರು ಕಂಪನಿ ನಾಟಕಗಳ ದೃಶ್ಯಗುಣಗಳನ್ನು ಮತ್ತು ಸಂಗೀತವನ್ನು ತಮ್ಮ ಪ್ರಯೋಗಗಳಲ್ಲಿ ಅಳವಡಿಸಿದ್ದರಲ್ಲಿ. ಕಾರಂತರು ತಮ್ಮ ನಾಟಕಗಳಲ್ಲಿ ಸಿದ್ಧಪಡಿಸುತ್ತಿದ್ದ ರಂಗ ಸಜ್ಜಿಕೆ ಪ್ರೇಕ್ಷಕರನ್ನು ಆಕರ್ಷಿಸುತ್ತಿತ್ತು. ರಂಗ ಸಜ್ಜಿಕೆಯ ಜೊತೆಗೆ ಬೆಳಕಿನ ಸಂಯೋಜನೆಗೂ ಅವರು ವಿಶೇಷ ಗಮನ ಹರಿಸುತ್ತಿದ್ದರು.

ಕಾರಂತರ ಪ್ರವೇಶದ ನಂತರ ಕನ್ನಡ ರಂಗಭೂಮಿ ನಿರ್ದೇಶಕನ ಕೇಂದ್ರಿತವಾಗಿ ರೂಪುಗೊಂಡಿತು. ಸಾಧಾರಣ ಮಟ್ಟದ ನಾಟಕ ಕೃತಿಯೂ ಪ್ರತಿಭಾನ್ವಿತ ನಿರ್ದೇಶಕನ ಕೈಯಲ್ಲಿ ಅತ್ಯುತ್ತಮ ನಾಟಕವಾಗಿ ರೂಪುಗೊಳ್ಳುವ ಸಾಧ್ಯತೆ ಸೃಷ್ಟಿಯಾಯಿತು. ಅದೇ ಹೊತ್ತಿನಲ್ಲಿ ಅತ್ಯುತ್ತಮ ನಾಟಕ ಕೃತಿಯೂ ಕೆಲವೊಮ್ಮೆ ನಿರ್ದೇಶಕರ ಅತಿರೇಕಗಳಿಂದ ಸೊರಗಿದ್ದೂ ಉಂಟು.

ಕಾರಂತರ ಜೊತೆಜೊತೆಗೇ ನಿರ್ದೇಶಕರಾಗಿ ಬೆಳಕಿಗೆ ಬಂದವರು ಪ್ರೊ. ಬಿ. ಚಂದ್ರಶೇಖರ್. ಸುಮತೀಂದ್ರ ನಾಡಿಗ್‌ರ 'ಬೊಕ್ಕ ತಲೆಯ ನರ್ತಕಿ' ಹಾಗೂ ಕಾರ್ನಾಡ್‌ರ 'ತುಘಲಕ್' ನಾಟಕಗಳನ್ನು ಇವರು ಯಶಸ್ವಿಯಾಗಿ ನಿರ್ದೇಶಿಸಿದರು.

ಪತ್ತಾರ್ ಮಾಸ್ತರರ 'ಸಂಗ್ಯಾ ಬಾಳ್ಯಾ' ನಾಟಕವನ್ನು ಎರಡೂವರೆ ಗಂಟೆಗಳ ಪ್ರಯೋಗಕ್ಕೆ ಅನುಕೂಲವಾಗುವಂತೆ ಸಂಗ್ರಹಿಸಿ ರಂಗಕ್ಕೆ ತಂದವರು ಚಂದ್ರಶೇಖರ ಕಂಬಾರ. ಕಂಬಾರರ ಪ್ರಯೋಗಗಳಲ್ಲಿ ಜಾನಪದ ಪ್ರಜ್ಞೆಯ ಜೊತೆ ಜೊತೆಗೆ ಆಧುನಿಕ ಪ್ರಜ್ಞೆ ಮೇಳವಿಸಿರುವುದನ್ನು ವೈಕುಂಠರಾಜು ಗುರುತಿಸುತ್ತಾರೆ.

ಆರ್. ನಾಗೇಶ್, ನಾಟಕ ನಿರ್ದೇಶನಕ್ಕಿಂತ ರಂಗ ಸಂಘಟನೆಯಲ್ಲಿ ಯಶಸ್ಸು ಗಳಿಸಿದವರು. 'ತ್ರಿಶಂಕು' ಮತ್ತಿತರ ಯಶಸ್ವೀ ಪ್ರಯೋಗಗಳನ್ನು ರಂಗಕ್ಕೆ ತಂದ ನಾಗೇಶ್ ರಂಗಚಳವಳಿಗೆ ಅನೇಕ ಮಂದಿ ಹೊಸಬರನ್ನು ಕರೆತಂದರು.

ಸರಳ ರಂಗಸಜ್ಜಿಕೆಯಿಂದಲೇ ಪರಿಣಾಮಕಾರಿ ಪ್ರಯೋಗಕ್ಕೆ ಹೆಸರಾದವರು ಪ್ರಸನ್ನ. ಅವರು ತಮ್ಮ ಪ್ರಯೋಗಗಳಲ್ಲಿ ತಾವು ನಂಬಿರುವ ಸಿದ್ಧಾಂತವನ್ನೂ ತರಲು ಬಯಸುತ್ತಾರೆ. ತಮ್ಮ ಎಡಪಂಥೀಯ ಧೋರಣೆಗಳನ್ನು ಪ್ರತಿನಿಧಿಸುವುದಕ್ಕಾಗಿಯೇ ಅವರು ಸ್ಥಾಪಿಸಿದ ಸಂಘಟನೆ 'ಸಮುದಾಯ'. ಸಮುದಾಯ, ರಂಗಚಳವಳಿಯನ್ನು ರಾಜ್ಯದ ಮೂಲೆಮೂಲೆಗೆ ಕೊಂಡೊಯ್ಯಿತು. ಜಿ.ಬಿ. ಜೋಶಿಯವರ 'ಕದಡಿದ

ನೀರು' ಹಾಗೂ 'ಗೆಲಿಲಿಯೋ' ಪ್ರಯೋಗಗಳು ಯಶಸ್ವಿ ಪ್ರಯೋಗಗಳೆಂದು ವೈಕುಂಠರಾಜು ಬಣ್ಣಿಸುತ್ತಾರೆ.

ಯಶಸ್ವೀ ನಟಿ, ಉತ್ತಮ ನಿರ್ದೇಶಕಿ ಹಾಗೂ ಅತ್ಯುತ್ತಮ ಗಾಯಕಿಯಾಗಿ ಬೆಳಕಿಗೆ ಬಂದವರು ಬಿ. ಜಯಶ್ರೀ. ಇವರ ಪ್ರಯೋಗಗಳಲ್ಲಿ 'ಸಂಗೀತ' ತುಸು ಹೆಚ್ಚೇ ಎನ್ನಿಸಿದರೂ, ಅನೇಕ ಬಾರಿ ಸಂಗೀತವೇ ನಾಟಕವನ್ನು, ಪ್ರಯೋಗವನ್ನು ಯಶಸ್ವಿಗೊಳಿಸುತ್ತಿತ್ತು ಎನ್ನುತ್ತಾರೆ ವೈಕುಂಠರಾಜು. ಕಾರಂತರ ಕಾರಣದಿಂದಾಗಿ ಹುಟ್ಟಿಕೊಂಡ ರಂಗಚಳವಳಿಯಲ್ಲಿ ಬೆಳೆದು ಬಂದ ಏಕೈಕ ನಿರ್ದೇಶಕಿ ಇವರು.

ಷೇಕ್ಸ್‌ಪಿಯರ್‌ನ 'ಹ್ಯಾಮ್ಲೆಟ್' ನಾಟಕದ ನಿರ್ದೇಶನದಿಂದ ರಂಗಾಸಕ್ತರಿಗೆ ಕಾಣಿಸಿಕೊಂಡವರು ಅಶೋಕ ಬಾದರದಿನ್ನಿ. ಇವರ ಪ್ರಯೋಗಗಳಲ್ಲಿ ಕೆಲವೊಮ್ಮೆ ಸಾಮಾನ್ಯಮಟ್ಟದ ಪಾತ್ರಗಳೂ ಮುಖ್ಯಪಾತ್ರಗಳಾಗಿ ರೂಪುಗೊಳ್ಳುತ್ತವೆ ಎನ್ನುವುದಕ್ಕೆ ವೈಕುಂಠರಾಜು ಅವರ 'ಸಂದರ್ಭ' ಪ್ರಯೋಗವೇ ಸಾಕ್ಷಿ.

ವೈಕುಂಠರಾಜು ಅವರ 'ಉದ್ಭವ' ಕಾದಂಬರಿಯನ್ನೇ ರಂಗಕ್ಕೆ ತಂದು ಯಶಸ್ಸು ಗಳಿಸಿದವರು ಶ್ರೀನಿವಾಸ ಪ್ರಭು.

ಪ್ರೊ. ಬಿ. ಚಂದ್ರಶೇಖರರ 'ತುಘಲಕ್' ಪ್ರಯೋಗದಲ್ಲಿ ತಮ್ಮ ಉತ್ತಮ ಅಭಿನಯದಿಂದ ಖ್ಯಾತಿಗೆ ಬಂದಿದ್ದ ಸಿ.ಆರ್. ಸಿಂಹ ಅವರೇ ತುಘಲಕ್ ನಿರ್ದೇಶನಕ್ಕೆ ಕೈ ಹಾಕಿದರು. ಅವರ ಮತ್ತೊಂದು ಯಶಸ್ವಿ ಪ್ರಯೋಗ 'ಕಾಕನಕೋಟೆ'. ಇವರ ಮತ್ತೊಂದು ಗಮನಾರ್ಹ ಪ್ರಯೋಗ 'ಟಿಪಿಕಲ್ ಟಿ.ಪಿ. ಕೈಲಾಸಂ'. ರಂಗಚಳವಳಿ ನಿರ್ದೇಶಕರಿಂದ ಮಾತ್ರವಲ್ಲ, ಸಂಘಟಕರು ಹಾಗೂ ತಂತ್ರಜ್ಞರಿಂದಲೂ ಬೆಳೆದುಬಂದಿದೆ. ಕೆ.ವಿ. ಸುಬ್ಬಣ್ಣ (ಹೆಗ್ಗೋಡು), ಸಿಂಧುವಳ್ಳಿ ಅನಂತಮೂರ್ತಿ, ದಾವಣಗೆರೆ ಪ್ರತಿಮಾಸಭಾದ ಹಾಲಪ್ಪ, ಬಿಜಾಪುರದ ಶ್ರೀನಿವಾಸ ತಾವರಗಿರಿ, ಮತ್ತಿತರರು ರಂಗಚಳವಳಿಯ ಯಶಸ್ವಿಗೆ ಕಾರಣಕರ್ತರು.

ಬೆಳಕಿನ ವಿನ್ಯಾಸದಲ್ಲಿ ವಿ. ರಾಮಮೂರ್ತಿಯವರದು ಅಚ್ಚಳಿಯದ ಹೆಸರು. ಅವರ ನಂತರದ ಸಾಲಿನಲ್ಲಿ ಕಪ್ಪಣ್ಣ. ಶಿವಶಂಕರ್, ಲೋಕೇಶ್ (ರಂಗಸಂಪದ), ಚಂ.ಕು. ಸಿಂಗ್ (ಬೆನಕ) ಮತ್ತಿತರರು ಹೆಸರು ಮಾಡಿದ್ದಾರೆ.

ಪ್ರಸಾದನವನ್ನೂ ಒಂದು ಕಲೆಯನ್ನಾಗಿ ಪರಿಗಣಿಸಿ ಅದರೆಡೆಗೆ ವಿಶೇಷ ಗಮನ ಹರಿಸಿದವರು ಮೇಕಪ್ ನಾಣಿ. ನಾಣಿ ಪ್ರಸಾದನ ಕಲೆಗೆ ವಿಶೇಷ ಕೊಡುಗೆ ನೀಡಿದ್ದಲ್ಲದೆ, ಈ ಕ್ಷೇತ್ರಕ್ಕೆ ಅನೇಕ ಶಿಷ್ಯರನ್ನು ನೀಡಿದ್ದಾರೆ.

**ರಂಗವಿಮರ್ಶೆ :**

ವೈಕುಂಠರಾಜು ಅವರು ಪ್ರಜಾವಾಣಿಯ ಸಾಪ್ತಾಹಿಕದ ಸಂಪಾದಕರಾಗಿದ್ದಾಗ 'ರಂಗ ವಿಮರ್ಶೆಗೆ ಹೆಚ್ಚಿನ ಮಹತ್ವ ನೀಡಿದರು. ಸಂಪಾದಕರಾಗಿದ್ದ ಟಿ.ಎಸ್. ರಾಮಚಂದ್ರರಾಯರು ನೀಡಿದ್ದ ಸ್ವಾತಂತ್ರ್ಯದ ಪರಿಣಾಮವಾಗಿ ಅದೆಲ್ಲಾ ಸಾಧ್ಯವಾಯಿತು ಎನ್ನುತ್ತಾರೆ ಅವರು. ಹದಿನೈದು ದಿನಗಳಿಗೊಮ್ಮೆ ಸಾಪ್ತಾಹಿಕದಲ್ಲಿ 'ರಂಗಭೂಮಿ' ಎಂಬ ಅಂಕಣವನ್ನೂ ಬರೆಯುತ್ತಿದ್ದರು.

ಬೆಂಗಳೂರಿನಲ್ಲಿ ಯಾವುದೇ ನಾಟಕ ಪ್ರದರ್ಶನಗಳು ನಡೆದರೂ ಕಲಾವಿದರು ಮತ್ತು ನಿರ್ದೇಶಕರು ಪ್ರಜಾವಾಣಿಯಲ್ಲಿ ಪ್ರಕಟವಾಗುವ ವಿಮರ್ಶೆಗಾಗಿ ಕಾದು ಕೂತಿರುತ್ತಿದ್ದರು. ವೈಕುಂಠರಾಜು ಅವರು ಯಾವುದೇ ಪ್ರದರ್ಶನವನ್ನು ಮೆಚ್ಚಿ ಬರೆದಿದ್ದರೆ ಆ ಹೊತ್ತಿಗೆ ನಿರ್ದೇಶಕ ಯಶಸ್ವಿಯಾದಂತೆಯೇ. ಹಲವು ಬಾರಿ ಟೀಕೆ ಮಾಡಿದರೂ, ಅಂತಹ ಟೀಕೆಗಳು ರಂಗಭೂಮಿಯ ಬೆಳವಣಿಗೆಗೆ ಸಹಕಾರಿಯಾಗಿದ್ದುವು ಎಂದು ಅನೇಕ ರಂಗ ಕಲಾವಿದರು ಇಂದಿಗೂ ಹೇಳುವುದುಂಟು.

ಇಂದಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ ಬರೆಯುವವರೇ ಕಡಿಮೆ. ಆದರೂ ಅಪರೂಪಕ್ಕೊಮ್ಮೆ ಪತ್ರಿಕೆಗಳಲ್ಲಿ 'ರಂಗವಿಮರ್ಶೆ' ಪ್ರಕಟವಾಗುತ್ತದೆ. ಅವುಗಳಲ್ಲಿ ನಾಟಕದ ಕತೆಯನ್ನೇ ವಿವರವಾಗಿ ಬರೆದಿರುತ್ತಾರೆ. ಅದರ ಜೊತೆಗೆ, ಕಲಾವಿದರೇ ನೀಡಿದ ಕೈಪಿಡಿಯಿಂದ ಆಯ್ದ ಕೆಲವು ಅಂಶಗಳನ್ನು ಸೇರಿಸಿ ಕೊನೆಯ ಸಾಲಿನಲ್ಲಿ 'ಬೆಳಕು, ಸಂಗೀತ ಚೆನ್ನಾಗಿತ್ತು' ಎಂದು ಬರೆದು ಮುಗಿಸುತ್ತಾರೆ. ಆದರೆ ವೈಕುಂಠರಾಜು ತಮ್ಮ ವಿಮರ್ಶೆಗಳಲ್ಲಿ ರಂಗಮಂಚದ ಮೇಲಿನ ಪ್ರತಿ ಅಂಶವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಹಲವು ಬಾರಿ ರಂಗ ವಿನ್ಯಾಸದ ವಿಶ್ಲೇಷಣೆಯೊಂದಿಗೆ ರಂಗವಿಮರ್ಶೆಯನ್ನು ಆರಂಭಿಸಿದ್ದೂ ಉಂಟು. (ಕಾರಂತರ 'ಸತ್ತವರ ನೆರಳು' ಪ್ರದರ್ಶನಕ್ಕೆ ಇವರು ಬರೆದ ವಿಮರ್ಶೆ ಇದಕ್ಕೆ ಉದಾಹರಣೆ).

ರಂಗ ವಿಮರ್ಶೆಯ ಆರಂಭದಿಂದಲೂ ಚರ್ಚೆಯಲ್ಲಿರುವ ಸಂಗತಿ ಎಂದರೆ, ವಿಮರ್ಶಕ ಒಂದು ರಂಗ ಪ್ರಯೋಗದ ಸಾಹಿತ್ಯ ಅಂಶಗಳಿಗೆ ಬೆಲೆ ಕೊಡಬೇಕೋ ? ಅಥವಾ ಕೇವಲ ಪ್ರಯೋಗವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಬೇಕೋ? ವೈಕುಂಠರಾಜು ಅವರು ಈ ಸಮಸ್ಯೆಗೆ ಸೂಕ್ತವಾಗಿ ಉತ್ತರಿಸುತ್ತಾರೆ. 'ಒಂದು ಸಂಜೆಯ ಪ್ರದರ್ಶನ ತನ್ನ ಮೇಲೆ ಮಾಡಿದ ಪರಿಣಾಮವನ್ನು ಅಥವಾ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದೇ ನಾಟಕ ಪ್ರಯೋಗದ ವಿಮರ್ಶೆ. ಎಂದರೆ ಲೆಕ್ಕಚಾರ ಹಾಕಿಕೊಂಡು ತಾವು ಸಾಹಿತ್ಯ ಕೃತಿಯನ್ನು ಕುರಿತು ಬರೆಯಬೇಕೆ ಇಲ್ಲವೆ

ಪ್ರಯೋಗವನ್ನು ಕುರಿತು ಬರೆಯಬೇಕೆ ಎನ್ನುವ ಪ್ರಶ್ನೆಯೇ ವಿಮರ್ಶಕನಿಗೆ ಉದ್ಭವಿಸುವುದಿಲ್ಲ. ನಿಜವಾಗಿ ನಾಟಕವೆಂದರೆ ಸಾಹಿತ್ಯ ಕೃತಿಯೂ ಅಲ್ಲ. ಬರಿಯ ಪ್ರಯೋಗವೂ ಅಲ್ಲ. ಒಟ್ಟಾರೆ ಪ್ರದರ್ಶನ. ಆ ಪ್ರದರ್ಶನದ ಬಗ್ಗೆ ವಿಮರ್ಶಕ ತನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿದಾಗ ಸಾಧಾರಪೂರ್ವಕವಾಗಿ ಅವನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ.

ವಿಮರ್ಶಕ ಹೀಗೆ ತನ್ನ ಸಮರ್ಥನೆಯಲ್ಲಿ, ಒಂದು ನಾಟಕ ಯಾವ ಅಂಶಗಳಿಂದ ಯಶಸ್ವಿಯಾಯಿತು ಅಥವಾ ವಿಫಲವಾಯಿತು ಎಂದು ಗುರುತಿಸುತ್ತಾನೆ. ವೈಕುಂಠರಾಜು ಅವರೇ ಹೇಳುವಂತೆ 'ಯಾವ ಕಾರಣದಿಂದ ಪ್ರಯೋಗ ಮಹತ್ವಗಳಿಸಿತು ಎನ್ನುವುದನ್ನು ವಿವರಿಸುವಾಗ ಅನಿವಾರ್ಯವಾಗಿ ಅದರ ಸಾಹಿತ್ಯದ ಮಹತ್ವವನ್ನು ವಿವೇಚಿಸಬೇಕಾಗುತ್ತದೆ. ಅದೇ ರೀತಿ ಪ್ರಯೋಗವೊಂದು ವಿಫಲವಾದರೆ, ಆ ನಾಟಕ ಪ್ರಯೋಗದಲ್ಲಿಯೇ ಯಶಸ್ಸುಗಳಿಸಬಹುದೆನ್ನುವ ಖಚಿತ ಅಭಿಪ್ರಾಯ ವಿಮರ್ಶಕನಿಗಿದ್ದರೆ ಅದನ್ನು ಗುರುತಿಸಬೇಕಾಗುತ್ತದೆ.

ಈ ಮೇಲಿನ ಅಭಿಪ್ರಯಾಕ್ಕೆ ಅವರೇ ಎರಡು ಉದಾಹರಣೆಗಳನ್ನು ನೀಡುತ್ತಾರೆ. ಬಾದಲ್ ಸರ್ಕಾರ್ ಅವರ ' ಏವಂ ಇಂದ್ರಜಿತ್' ನಾಟಕದ ಹಲವು ಪ್ರಯೋಗಗಳಾಗಿವೆ. ಪ್ರಯೋಗದ ದೃಷ್ಟಿಯಿಂದ ಎಲ್ಲವೂ ಯಶಸ್ವಿಯಾಗಿವೆ. ಬದುಕಿನ ರಂಕಲ ರಾಟೆಯನ್ನು ಸಾಧಾರಣ ರೀತಿಯಲ್ಲಿ ಚಿತ್ರಿಸುವ ಈ ನಾಟಕ ಅಂತಹ ಸಂಕೀರ್ಣ ವಸ್ತುವನ್ನೇನೂ ಒಳಗೊಂಡಿಲ್ಲ. ಆದರೆ ಕಾರಂತರ ಪ್ರಯೋಗದಲ್ಲಿ ಹೊಸತನವನ್ನು ಕಂಡಿದೆ. ಕಂಡ ಹೊಸತನ ಪ್ರಯೋಗದ್ದೇ ಹೊರತು ನಾಟಕದ್ದಲ್ಲ. ಆದ್ದರಿಂದ ನಾಟಕಕಾರ ಬಾದಲ್ ಸರ್ಕಾರ್ ಅವರಿಗಿಂತ ನಿರ್ದೇಶಕ ಬಿ.ವಿ. ಕಾರಂತ್ ಮೇಲೆ ನಿಲ್ಲುತ್ತಾರೆ. ಬರಿಯ ಪ್ರಯೋಗವನ್ನೇ ಕುರಿತು ಬರೆದರೆ ಇದನ್ನು ಗುರುತಿಸುವ ಹಾಗಿಲ್ಲ. ಇದಕ್ಕೆ ವ್ಯತಿರಿಕ್ತವಾದ ಉದಾಹರಣೆಯೆಂದರೆ ಗಿರೀಶ್ ಕಾರ್ನಾಡರ 'ಹಯವದನ'. ಬೆಂಗಳೂರಿನಲ್ಲಿ ಇದುವರೆಗೆ ಈ ನಾಟಕ ಎರಡು ರೀತಿ ಪ್ರಯೋಗವಾಯಿತು. ನಾನು ಒಂದು ಪ್ರದರ್ಶನಕ್ಕೆ ಹೋಗಿರಲಿಲ್ಲವಾದರೂ ಪ್ರಯೋಗ ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲವೆಂದು ಕೇಳಿದ್ದೇನೆ. ಮತ್ತೊಂದು ಕಾರಂತರ ಪ್ರಯೋಗ. ಕನ್ನಡದ ಅತ್ಯಂತ ಯಶಸ್ವೀ ಪ್ರಯೋಗಗಳಲ್ಲಿ ಒಂದು ಎಂದೂ 'ಮೊದಲ ಪ್ರದರ್ಶನ ವಿಫಲವಾಯಿತು' ಎಂದ ಬರೆಯುವಾಗಲಾಗಲೀ ಅಥವಾ ಎರಡನೆಯ ಪ್ರದರ್ಶನ ಯಶಸ್ವಿಯಾಯಿತು ಎಂದು ಬರೆಯುವಾಗಲಾಗಲೀ ಕೃತಿಯ ಪ್ರಸ್ತಾಪ ಅನಿವಾರ್ಯವಾಗಿ ಬರುತ್ತದೆ.

'ನಾಟಕಕಾರ ಏನಿದ್ದರೂ ಒಂದು ರೀತಿಯಲ್ಲಿ ಕಚ್ಚಾ ಸಾಮಗ್ರಿಯನ್ನೊದಗಿಸುವವನು. ಅದನ್ನು ಸಂಸ್ಕರಿಸುವವನೇ ನಿರ್ದೇಶಕ. ಈ

ಸಂಸ್ಕರಣದ ಮಟ್ಟಕ್ಕನುಗುಣವಾಗಿ ಪ್ರಯೋಗವಿರುತ್ತದೆ. ಆದ್ದರಿಂದಲೇ ತೀರಾ ಸಾಮಾನ್ಯ ನಾಟಕಗಳು ರಂಗದ ಮೇಲೆ ಒಳ್ಳೆಯ ಪರಿಣಾಮ ಬೀರಲು ಸಾಧ್ಯವಾಗುತ್ತದೆ. ಹಾಗೆಯೇ ಒಳ್ಳೆಯ ನಾಟಕಗಳು ಯಶಸ್ವಿಯಾಗಬಹುದು. ಈ ಮಾತಿಗೆ ಕ್ರಮವಾಗಿ ಬಾದಲ್ ಸರ್ಕಾರ್ ಅವರ 'ಕೊನೆಯಿಲ್ಲ' (ಮೂಲ ಶೇಷಶಾಯಿ) ಮತ್ತು 'ಮಣ್ಣಿನ ಬಂಡಿ' (ಮೂಲ ಶೂದ್ರಕ. ಅನು. ಬಿ. ಚಂದ್ರಶೇಖರ) ನಾಟಕಗಳನ್ನು ಉದಾಹರಣೆಯಾಗಿ ಕೊಡಬಹುದು.

ಒಂದು ಪ್ರಯೋಗದ ಸಂಪೂರ್ಣ ಯಶಸ್ವಿಗೆ ನಾಟಕಕಾರ ಮತ್ತು ನಿರ್ದೇಶಕರಿಬ್ಬರ ಅಗತ್ಯವಿದೆ ಎನ್ನುತ್ತಾರೆ ವೈಕುಂಠರಾಜು.

'ನಾಟಕಕಾರ ಮತ್ತು ನಿರ್ದೇಶಕರಿಬ್ಬರ ಸಮಬಲದ ಪ್ರದರ್ಶನಕ್ಕೆ 'ಸ್ವರ್ಗಕ್ಕೆ ಮೂರೇ ಬಾಗಿಲು' ನಾಟಕವನ್ನು ಉದಾಹರಣೆಯಾಗಿ ನೀಡಬಹುದು. ಈ ಪ್ರಯೋಗವನ್ನು ನೋಡಿದ ನಾಟಕಕಾರರೊಬ್ಬರು, ಪ್ರೊಡಕ್ಷನ್ ದೃಷ್ಟಿಯಿಂದ ಗ್ರೇಟ್ ಎನಿಸುತ್ತೆ ಎಂದರು. ಅವರ ಮಾತಿನಲ್ಲಿ ನಾಟಕ ತೀರಾ ಸಾಮಾನ್ಯ. ಆದರೆ ಪ್ರದರ್ಶನ ಚೆನ್ನಾಗಿತ್ತು ಎನ್ನುವ ಧ್ವನಿಯಿತ್ತು. ಭಾರಿ ಸೆಟ್‌ಗಳು, ರಂಗಸಲಕರಣೆಗಳು, ವೈವಿಧ್ಯಮಯ ಬೆಳಕಿನ ಸಂಯೋಜನೆ ಇದ್ದರೆ ಪ್ರೊಡಕ್ಷನ್ ಗ್ರೇಟ್ ಎನ್ನಬಹುದೆ? ಮೂಲತಃ ನಾಟಕದಲ್ಲಿ ಸತ್ವವಿಲ್ಲದಿದ್ದರೆ ಪ್ರೊಡಕ್ಷನ್ ಗ್ರೇಟ್ ಆಗಲು ಸಾಧ್ಯವೇ? ಇದೇ 'ಸ್ವರ್ಗಕ್ಕೆ ಮೂರೇ ಬಾಗಿಲು' ನಾಟಕವನ್ನು ತೆಗೆದುಕೊಂಡರೂ ಮೊದಲ ಎರಡು ಅಂಕಗಳು ಮಾಡಿದ ಪರಿಣಾಮವನ್ನು ಮೂರನೆಯ ಅಂಕ ಮಾಡಲಿಲ್ಲ. ಅದಕ್ಕೆ ಶ್ರೀರಂಗ ಮತ್ತು ಕಾರಂತ ಇಬ್ಬರೂ ಕಾರಣ. ನಾಟಕದಲ್ಲಿಯ ಕ್ರಿಯೆ, ಶೋಷಣೆಯ ವಿರುದ್ಧ ಬಂಡೇಳುವ ಪ್ರವೃತ್ತಿ. ಈ ಪ್ರವೃತ್ತಿಯೇ ನಾಟಕದ ಸ್ಥಾಯಿ. ಮೊದಲ ಅಂಕದಲ್ಲಿ ಪುರೋಹಿತ ಸಾಮಾನ್ಯ ಜನರ ಅಜ್ಞಾನದ ಲಾಭವನ್ನು ಪಡೆಯಲೆತ್ನಿಸುತ್ತಾನೆ. ಈ ಶೋಷಣೆಯ ವಿರುದ್ಧ ಬಂಡೆದ್ದ ಜನ ಮೂರನೆಯ ಅಂಕದಲ್ಲಿ ಕೇವಲ ವಿಧ್ವಂಸಕ ಕೃತ್ಯಗಳಲ್ಲಿ ತೊಡಗುತ್ತಾರೆ. ಎಲ್ಲವೂ ಮಾತಿನಲ್ಲಿಯೇ ಮುಕ್ತಾಯವಾಗುತ್ತದೆ. ಈ ನಾಟಕದ ಎರಡು ಪ್ರಯೋಗಗಳಲ್ಲಿಯೂ ಕೊನೆ ಪರಿಣಾಮಕಾರಿಯಾಗಿಲ್ಲ. ಮೊದಲ ಬಾರಿ ನಿಸಾರ್‌ರ 'ಕುರಿಗಳು ಸಾರ್ ಕುರಿಗಳು' ಎನ್ನುವ ಪದ್ಯವನ್ನು ಹಾಡಿದ್ದರಿಂದ ನಾಟಕದ ಸ್ಥಾಯೀ ಭಾವಕ್ಕೆ ವಿರುದ್ಧಕವಾದ ಧ್ವನಿಯುಂಟಾಯಿತು. (ಕುರಿಗಳು ಬಂಡೇಳಲು ಸಾಧ್ಯವೇ?) ಆದರೆ ಎರಡನೆಯ ಬಾರಿ ಬದಲಾಯಿಸಿದರು, ಪ್ರತಿಕ್ರಿಯೆ, ಆ ಮನೋಭಾವವನ್ನು ನಾಶಪಡಿಸಿತೆ ? ಇಲ್ಲಿ ಸ್ವಾರಸ್ಯವೆಂದರೆ ನಾಟಕಕಾರ ಎಡವಿದ ಸ್ಥಳದಲ್ಲಿಯೇ ನಿರ್ದೇಶಕರೂ ಎಡವಿದ್ದರಿಂದ ಅಥವಾ ಇಬ್ಬರೂ ಒಂದೇ ಸ್ಥಳದಲ್ಲಿ ತಬ್ಬಿಬ್ಬು ಆದ್ದರಿಂದ ಇಂಥಹ ಪರಿಸ್ಥಿತಿ ನಿರ್ಮಾಣವಾಯಿತು. ಎಂದರೆ ನಾಟಕ ಹೊರಡಿಸುವ ಧ್ವನಿಗಿಂತ ಪ್ರಯೋಗದ ಧ್ವನಿ ಭಿನ್ನವಾಗಿರಲಾರದು.

ರಂಗ ವಿಮರ್ಶಕ ಇಂಥವನ್ನೆಲ್ಲ ಸೂಕ್ಷ್ಮವಾಗಿ ಗಮನಿಸುವಂತಿರಬೇಕು. ಹೊಸದೇನಾದರೂ ಕಂಡುಬಂದರೆ ಅದನ್ನು ಗುರುತಿಸುವುದು ಮತ್ತು ಒಳ್ಳೆಯದರ ಬಗ್ಗೆ ಪಕ್ಷಪಾತದಿಂದಿರುವುದು. ಸ್ಟ್ರೇಂಜ್ ಆದುದನ್ನು ಗುರುತಿಸುವ ಕಣ್ಣು ವಿಮರ್ಶಕನಿಗಿರಬೇಕು.

ರಂಗಭೂಮಿ ದೃಷ್ಟಿಯಿಂದ ನಿರ್ದೇಶಕ, ನಟ ಮತ್ತಿತರರಿಗೆ ಎಂತಹ ಜವಾಬ್ದಾರಿಯಿದೆಯೋ ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ವಿಮರ್ಶಕನಿಗಿದೆ. ವಿಮರ್ಶಕನೂ ಪ್ರೇಕ್ಷಕನೇ. ಒಂದು ಪ್ರಯೋಗವನ್ನು ನೋಡಿದ ಮೇಲೆ ಪ್ರೇಕ್ಷಕ ತನ್ನ ಅಭಿಪ್ರಾಯವನ್ನು ಒಂದೋ ಎರಡೋ ಮಾತುಗಳಲ್ಲಿ ವ್ಯಕ್ತಪಡಿಸಬಹುದು. 'ನಾಟಕ ಚೆನ್ನಾಗಿತ್ತು' ಎಂದು ಅವನು ಹೇಳಿದರೆ ಅದಕ್ಕೆ ಕಾರಣಗಳನ್ನು ಕೊಡಲು ಹೋಗುವುದಿಲ್ಲ. ಅವನು ಏನಿದ್ದರೂ ತೀರ್ಪು ಕೊಡುವವನು. ವಿಮರ್ಶಕ ಹಾಗೆ ಮಾಡುವಂತಿಲ್ಲ. ಯಾವ ಕಾರಣಗಳಿಂದ ನಾಟಕ ಚೆನ್ನಾಗಿದೆ, ಅಥವಾ ಯಾವ ಕಾರಣಗಳಿಗಾಗಿ ಚೆನ್ನಾಗಿಲ್ಲ ಎಂದು ವಿವರಿಸಬೇಕಾಗುತ್ತದೆ. ಒಂದು ಪ್ರಯೋಗ ಎಲ್ಲಾ ದೃಷ್ಟಿಗಳಿಂದ ಅನುಕರಣೆಯಾಗಿದ್ದರೆ ಅದನ್ನು ಗುರುತಿಸಬೇಕಾಗುತ್ತದೆ. ಜೊತೆಗೆ ನಿಜವಾದ ಪ್ರತಿಭೆ ಮತ್ತು ಖೋಟಾ ಪ್ರತಿಭೆಗಳ ನಡುವೆ ಇರುವ ವ್ಯತ್ಯಾಸವನ್ನು ವಿಮರ್ಶಕ ಅರಿತಿರಬೇಕು.

## ನಾಟಕ ಪ್ರಯೋಗ ಮತ್ತು ಸ್ಲಂ

ಕಲಾಕ್ಷೇತ್ರಕ್ಕೆ ನಾಟಕ ನೋಡಲೆಂದು ಬಂದು ಹೋಗುವ ಜನ ಬೂರ್ಜ್ವಾಗಳು, ಪ್ರಗತಿ ವಿರೋಧಿಗಳು. ಅವರ ಸಂಖ್ಯೆ ತೀರಾ ಕಡಿಮೆ. ನಾಟಕ ಬೀದಿಯಲ್ಲಿ ಸ್ಲಂಗಳಲ್ಲಿ ಆಡುವಂತಾಗಬೇಕು. ಆಗ ರಂಗ ವೈಭವದ ಅಗತ್ಯವೇ ಇರುವುದಿಲ್ಲ. ಎಂದೆಲ್ಲಾ ಕೆಲವರ ವಾದ. ಈ ಮಾತುಗಳು ಇಂದಿಗೂ ಕೇಳಿಬರುತ್ತವೆ. ವೈಕುಂಠರಾಜು ಅವರು ಈ ವಾದಕ್ಕೆ ಪ್ರತಿಕ್ರಿಯಿಸುತ್ತಾ,

"ಬೀದಿಗಳಲ್ಲಿ, ಸ್ಲಮ್‌ಗಳಲ್ಲಿ ನಾಟಕವಾಡುವುದು ಬೇಡ ಎಂದು ಯಾರು ಹೇಳುತ್ತಾರೆ? ಆದರೆ ಅಲ್ಲಿ ಮಾತ್ರ ಆಡಬೇಕು ಎಂದು ಒತ್ತಾಯ ಮಾಡಿದರೆ ಯಾರೂ ಕೇಳಲಾರರು. ಎಲ್ಲೆಲ್ಲಿ ಎಂತೆಂತಹ ನಾಟಕಗಳನ್ನು ಪ್ರದರ್ಶಿಸಲು ಸಾಧ್ಯವೋ ಅಂತಹ ನಾಟಕಗಳನ್ನು ಪ್ರದರ್ಶಿಸಬೇಕು. ಕಲಾಕ್ಷೇತ್ರದಂಥ ದೊಡ್ಡ ರಂಗಮಂದಿರಗಳಲ್ಲಿ ಮಾತ್ರ ಆಡಲು ಸಾಧ್ಯವಾಗುವ ನಾಟಕಗಳೂ ಕೆಲವಿರುತ್ತವೆ. ರಂಗ ಚಳವಳಿ ನಿಜವಾಗಿಯೂ ಬೆಳೆಯಬೇಕಾದರೆ ಕಲಾಕ್ಷೇತ್ರದ ನಾಟಕಗಳಿಗೆ ಸ್ಲಮ್‌ಗಳ ಜನರೂ ಬರುವಂತಾಗಬೇಕು. ಅದನ್ನು ಬಿಟ್ಟು ಕಲಾಕ್ಷೇತ್ರಕ್ಕೆ ಬರುವ ಪ್ರೇಕ್ಷಕರನ್ನು ಬೂರ್ಜ್ವಾಗಳು, ಪ್ರಗತಿ ವಿರೋಧಿಗಳು ಎಂದು ವಿಂಗಡಿಸುವುದು

ಸರಿಯೆ? ಈಗ ಕಲಾಕ್ಷೇತ್ರಕ್ಕೆ ಬಡವರು ಬರುತ್ತಿಲ್ಲವೆ? ತಮ್ಮ ತತ್ವಗಳನ್ನು ಪ್ರಚಾರ ಮಾಡಲು ಬಯಸುವ ಕಮಿಟೆಡ್ ಜನ ತಮಗೆ ಬೇಕಾದ ಹಾಗೆ ಮಾಡಲಿ. ಆದರೆ ರಂಗಭೂಮಿಗೆ ಕಮಿಟೆಡ್ ಆದಜನರಿಗೆ ತಮಗೆ ಸರಿಯೆನಿಸಿದ ರೀತಿಯಲ್ಲಿ ಪ್ರಯೋಗ ಮಾಡಲು ಸ್ವಾತಂತ್ರ್ಯ ಇರಬೇಕಲ್ಲವೆ?" ಎಂದು ಪ್ರಶ್ನಿಸುತ್ತಾರೆ.

## ಸೋಫೊಕ್ಲಿಸ್‌ನ 'ಈಡಿಪಸ್' ಮತ್ತು ಇಲ್ಲಿನ ಜಾನಪದ

ಸಾವಿರಾರು ವರ್ಷಗಳ ಹಿಂದೆಯೇ ಗ್ರೀಕ್ ಮತ್ತು ಭಾರತೀಯರ ನಡುವೆ ಸಂಪರ್ಕ ಇದ್ದುದರಿಂದ 'ಈಡಿಪಸ್' ಕತೆಯ ಸಾರ ಗ್ರೀಕ್‌ನಿಂದ ಇಲ್ಲಿಗೆ ಹರಿದು ಬಂತೆ? ಅಥವಾ ಇದಕ್ಕೆ ವಿರುದ್ಧವಾಗಿ ಇಲ್ಲಿಯ ಜಾನಪದ ಅಲ್ಲಿಗೆ ರವಾನೆಯಾಗಿ 'ಈಡಿಪಸ್' ರೂಪ ತಾಳಿತೆ?

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕಂಡು ಬರುವ ಜಾನಪದ ಕತೆಗಳು ಈ ಪ್ರಶ್ನೆಯ ಹುಟ್ಟಿಗೆ ಕಾರಣವಾಗಿವೆ. ವೈಕುಂಠರಾಜು ಅವರು ತಮ್ಮ 'ಕನ್ನಡ ರಂಗಭೂಮಿ' ಕೃತಿಯಲ್ಲಿ ಈ ಪ್ರಶ್ನೆಯನ್ನೇ ಮುಖ್ಯವನ್ನಾಗಿಟ್ಟುಕೊಂಡು ಸುದೀರ್ಘ ಪ್ರಬಂಧ ಬರೆದಿದ್ದಾರೆ.

ಸೋಫೊಕ್ಲಿಸ್‌ನ 'ಈಡಿಪಸ್' ಇಂದು ಜಗಜ್ಜಾಹೀರು. ಅನಿರೀಕ್ಷಿತ ಬೆಳವಣಿಗೆಗಳ ಪರಿಣಾಮವಾಗಿ ಮಗ ತನ್ನ ಹೆತ್ತ ತಾಯಿಯನ್ನೇ ಮದುವೆಯಾಗುವ ಪ್ರಸಂಗವೇ ಈ ನಾಟಕದ ವಸ್ತು. ಅಂತ್ಯದಲ್ಲಿ ತಾಯಿ–ಮಗ ಇಬ್ಬರೂ ಶಿಕ್ಷೆಯನ್ನು ತಾವೇ ಹೇರಿಕೊಳ್ಳುತ್ತಾರೆ. ಇಂಥಹ ಅಪರೂಪದ ಕಥಾ ವಸ್ತು ಬೇರೆ ಬೇರೆ ದೇಶಗಳ ಜಾನಪದಗಳಲ್ಲೂ ಕಂಡು ಬಂದಿರುವುದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ.

ಎ.ಕೆ. ರಾಮಾನುಜನ್‌ರವರು ಬೆಳಗಾವಿ ಸುತ್ತಮುತ್ತಲಲ್ಲಿ ಸಂಗ್ರಹಿಸಿದ ಜನಪದ ಕತೆಗಳಲ್ಲಿ ಇಂಥದೇ ಒಂದು ಕತೆ ಇದೆ. 'ಈಡಿಪಸ್' ಕತೆಯಂತೆಯೇ ಇಲ್ಲಿಯೂ ಒಬ್ಬ ರಾಜ. ಅವನ ಪತ್ನಿಗೆ ಒಂದು ಗಂಡು ಮಗುವಾಗುತ್ತದೆ. ಭವಿಷ್ಯಕಾರನೊಬ್ಬ ಮಗುವಿನ ಭವಿಷ್ಯ ನುಡಿಯುತ್ತಾ, 'ಈ ಮಗು ತನ್ನ ತಾಯಿಯನ್ನೇ ಮದುವೆಯಾಗಿ ಅವಳಲ್ಲಿ ಮಕ್ಕಳನ್ನು ಪಡೆಯುತ್ತಾನೆ' ಎನ್ನುತ್ತಾನೆ. ಇದರಿಂದ ವಿಚಲಿತನಾದ ರಾಜ ಮಗವನ್ನು ಕೊಲ್ಲುವ ಸಿದ್ಧತೆ ನಡೆಸುತ್ತಾನೆ. ಗ್ರೀಕ್‌ನ ಸೈನಿಕರಂತೆ ಇಲ್ಲಿಯೂ ಸೈನಿಕರೂ ಮಗುವನ್ನು ಕೊಲ್ಲದೆ ಹಾಗೆಯೇ ಕಾಡಿನಲ್ಲಿ ಬಿಟ್ಟು ಬರುತ್ತಾರೆ.

ಆ ಮಗು ಕಾಡಿನಲ್ಲೇ ಬೆಳೆದು ದೊಡ್ಡವನಾಗುತ್ತಾನೆ. ಅವನು ಒಂದು ದಿನ ಕಾಡಿನಲ್ಲಿ ಅಲೆದಾಡುವಾಗ ಮಾವಿನ ಮರದ ಬುಡವೊಂದರಲ್ಲಿ ಮೂತ್ರ ವಿಸರ್ಜನೆ ಮಾಡುತ್ತಾನೆ. ಆ ಮರದಲ್ಲಿ ಬಿಟ್ಟ ಒಂದೇ ಒಂದು ಹಣ್ಣನ್ನು ರಾಜನ ಸೈನಿಕರು

ರಾಜನಿಗೆ ಕೊಡುತ್ತಾರೆ. ರಾಜ, ರಾಣಿಗೆ ಕೊಡುತ್ತಾನೆ. ಹಣ್ಣನ್ನು ತಿಂದ ರಾಣಿ ಗರ್ಭವತಿಯಾಗುತ್ತಾಳೆ. ಅವಳು ಗಂಡುಮಗುವೊಂದರ ತಾಯಿಯಾಗುತ್ತಾಳೆ. ಆ ನಂತರ ಆ ಮಗು ತನ್ನ ಮಗನ ಮಗನೇ ಎನ್ನುವುದು ಆಕೆಗೆ ತಿಳಿಯುತ್ತದೆ.

*ಅಕ್ಕೆ, ಮಲಗು ಮಲಗೆಲೆ ಮಗುವೆ*
*ಗಂಡನ ತಮ್ಮನೆ ಮಲಗು....*
*ಎಂದು ಜೋಗುಳ ಹಾಡುತ್ತಾಳೆ.*

ಇದೇ ವಸ್ತುವಿನ ಇನ್ನೊಂದು ಕತೆ ದಾವಣಗೆರೆ–ಹರಿಹರ ಸುತ್ತಮುತ್ತಲ್ಲಿನ ಜಾನಪದದಿಂದ ಆಯ್ದದ್ದು. ಇದೇ ಕತೆಯನ್ನು ಆಧರಿಸಿ ನಾಟಕ ಕರ್ನಾಟಕ ರಂಗಾಯಣದ ಕಲಾವಿದ ಮಂಜುನಾಥ ಬೆಳಕೆರೆ 'ಇದಿ ಮುಂಡೆಯ ಮಗಳು' ಎಂಬ ನಾಟಕ ಬರೆದಿದ್ದಾರೆ. ಈ ಜಾನಪದ ಕತೆಯನ್ನು ಸಂಗ್ರಹಿಸಿದವರು ಎಂ.ಜಿ. ಈಶ್ವರಪ್ಪ.

ವೈಕುಂಠರಾಜು ಅವರಿಗೆ ಈ ನಾಟಕ ಓದಿ ಮುಗಿದ ನಂತರ ಷಾಕ್ ಆಯಿತಂತೆ! ಅದಕ್ಕೆ ಕಾರಣ ಏನು? ಮೊದಲ ಈ ನಾಟಕದ ಕತೆ ನೋಡೋಣ.

ಈ ನಾಟಕದ ಮುಖ್ಯ ಪಾತ್ರಗಳು ಎರಡು. 'ಇದಿ' ಎಂಬ ವಿಧವೆ ಮತ್ತು ಆಕೆಯ ಮಗಳು 'ಕಲ್ಕಿ'. ಇದಿ ರಾತ್ರಿಯ ವೇಳೆ ನವಜಾತ ಶಿಶುಗಳಿಗೆ ವಿಧಿ ಬರೆಯುತ್ತಾಳೆ. ಹಣೆಯ ಮೇಲೆ ವಿಧಿ ಬರೆಯುವ ಮುನ್ನ ಅವಳು ಹೀಗೆ ಬರೆಯಬೇಕೆಂದು ಯೋಚಿಸಲು ಸಾಧ್ಯವಿಲ್ಲ. ಅಗೋಚರ ಶಕ್ತಿಯೊಂದು ಅವಳಿಂದ ವಿಧಿ ಬರೆಸುತ್ತದೆ.

ತಾಯಿಯ ಈ ಕೆಲಸ ಕಲ್ಕಿಗೂ ತಿಳಿಯುತ್ತದೆ. ಕಲ್ಕಿ ಹಠಮಾಡಿ ತನ್ನ ವಿಧಿ ಏನೆಂದು ಅಮ್ಮನನ್ನು ಹೇಳಲೇಬೇಕೆಂದು ಪೀಡಿಸುತ್ತಾಳೆ. ಮೊದಮೊದಲು 'ಇದಿ' ಹೇಳಲು ಹಿಂಜರಿದರೂ ನಂತರ ಮಗಳ ಒತ್ತಾಯಕ್ಕೆ ಮಣಿದು 'ಗಂಡಿನ ಸಂಪರ್ಕ ಪಡೆಯದೆಯೇ ನೀನು ಗರ್ಭಿಣಿಯಾಗುತ್ತೀಯ. ನಿನಗೆ ಹುಟ್ಟುವ ಮಗನೇ ಮುಂದೆ ನಿನ್ನ ಗಂಡನಾಗಿ ಅವನಿಂದ ಮಕ್ಕಳನ್ನು ಪಡೆಯುತ್ತೀಯ' ಎನ್ನುತ್ತಾಳೆ.

ಇದರಿಂದ ಕ್ರುದ್ಧಗೊಂಡ ಕಲ್ಕಿ ಇದಿಯನ್ನು ಸುಳ್ಳಾಗಿಸುತ್ತೇನೆಂದು ಹಠತೊಟ್ಟು ಮನೆಯಿಂದ ಹೊರನಡೆಯುತ್ತಾಳೆ. ಅವಳು ಹೀಗೆ ಕಾಡಿನಲ್ಲಿ ಅಲೆಯುವಾಗ ತನ್ನ ಬಟ್ಟೆಗಳನ್ನು ಕಳಚಿ ಸ್ನಾನಕ್ಕೆಂದು ನೀರಿಗಿಳಿಯುತ್ತಾಳೆ. ಅದೇ ಸಮಯಕ್ಕೆ ಅಲ್ಲಿಗೆ ಬಂದ ದಿಗಂಬರನೊಬ್ಬ ಅವಳ ವಸ್ತ್ರಗಳಿಂದ ಮೋಹಿತನಾಗಿ ಅವುಗಳ ಮೇಲೆ ಹೊರಳಾಡುತ್ತಾನೆ. ಅವನಿಗೆ ವೀರ್ಯ ಸ್ಖಲನವಾಗುತ್ತದೆ.

ಅವನು ಹೊರಟು ಹೋದ ನಂತರ ಕಲ್ಕಿ ಅದೇ ಬಟ್ಟೆಗಳನ್ನು ತೊಡುತ್ತಾಳೆ. ಬಟ್ಟೆಯ ಮೇಲೆ ಹರಡಿದ್ದ ವೀರ್ಯದ ಪರಿಣಾಮವಾಗಿ ಅವಳು ಗರ್ಭವತಿಯಾಗುತ್ತಾಳೆ. ಇದೇ ಸಂದರ್ಭದಲ್ಲಿ ಅವಳು ತಾಯಿಯ ಬರಹವನ್ನು ಸುಳ್ಳಾಗಿಸಲು ಆತ್ಮಹತ್ಯೆಯ ಪ್ರಯತ್ನವನ್ನೂ ಮಾಡುತ್ತಾಳೆ. ಆದರೆ ತನ್ನ ಪ್ರಯತ್ನದಲ್ಲಿ ಅವಳು ಯಶಸ್ವಿಯಾಗುವುದಿಲ್ಲ. ಬದಲಿಗೆ ಅವಳು ತನ್ನ ಹಿಂದಿನದನ್ನೆಲ್ಲಾ ಮರೆತುಬಿಡುತ್ತಾಳೆ.

ಕೆಲವು ವರ್ಷಗಳ ನಂತರ ಅದೇ ಊರಿನ ರಾಜಕುಮಾರ ಕಲ್ಕಿಯ ಸೌಂದರ್ಯಕ್ಕೆ ಮಾರುಹೋಗಿ ಮದುವೆಯಾಗುತ್ತಾನೆ. ಮದುವೆಯಾದ ನಂತರ ಅವನಿಗೆ ಬೆನ್ನುನೋವು ಕಾಡುತ್ತದೆ. ವೃದ್ಧ ವೈದ್ಯೆಯೊಬ್ಬಳು ಅವನ ಬೆನ್ನನ್ನು ಪರೀಕ್ಷಿಸಿ ಅವನ ಬೆನ್ನಿನಿಂದ ಬಗ್ಗರಿ ಮುಳ್ಳನ್ನು ಹೊರತೆಗೆಯುತ್ತಾಳೆ. ಬಗ್ಗರಿ ಮುಳ್ಳನ್ನು ನೋಡಿದಾಕ್ಷಣ ಕಲ್ಕಿಗೆ ಹಳೆಯದೆಲ್ಲಾ ನೆನಪಾಗುತ್ತದೆ. ಅವಳ ಮಾವನಾದ ರಾಜನನ್ನು ವಿಚಾರಿಸಿದಾಗ ರಾಜಕುಮಾರ ಆತನ ಸ್ವಂತ ಮಗನಲ್ಲ ಎಂಬ ಸಂಗತಿ ತಿಳಿಯುತ್ತದೆ. ಹಲವು ವರ್ಷಗಳ ಹಿಂದೆ ರಾಜ ಕಾಡಿಗೆ ಬೇಟೆಗೆಂದು ಹೋದಾಗ ಬಗ್ಗರಿ ಮುಳ್ಳಿನ ಗಿಡವೊಂದರ ಮಧ್ಯೆ ಸಿಕ್ಕು ಬಿದ್ದಿದ್ದ ಮಗುವೇ ಈ ರಾಜಕುಮಾರ ಎಂದು ರಾಜ ಹೇಳುತ್ತಾನೆ.

ಇದನ್ನರಿತ ಕಲ್ಕಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಬಗ್ಗರಿ ಮುಳ್ಳಿನ ಮೇಲಿದ್ದ ಮಗು ಅವಳ ಗರ್ಭದಲ್ಲಿ ಹುಟ್ಟಿದ ಮಗುವೇ ಆಗಿರುತ್ತದೆ. ತಾಯಿಯ ವಿಧಿಯನ್ನು ಸುಳ್ಳು ಮಾಡುವ ನೆಪದಲ್ಲಿ ಮಗುವನ್ನು ಸಾಯಿಸಲು ಅವಳು ಯೋಜಿಸಿ ಮಗುವನ್ನು ಬಗ್ಗರಿ ಮುಳ್ಳಿನ ಗಿಡದ ಮೇಲೆ ಎಸೆದಿದ್ದಳು. ಆದರೂ ಅವಳಮ್ಮ ಬರೆದ ವಿಧಿ ಸುಳ್ಳಾಗಲಿಲ್ಲ.

ಈ ಎರಡೂ ಕತೆಗಳ ಜೊತೆ ಗ್ರೀಕ್‌ನ 'ಈಡಿಪಸ್' ನಾಟಕಕ್ಕಿರುವ ಸಾಮ್ಯ ಹಾಗೂ ಭಿನ್ನತೆಗಳನ್ನು ವೈಕುಂಠರಾಜು ಅವರು ಸೂಕ್ಷ್ಮವಾಗಿ ಗುರುತಿಸುತ್ತಾರೆ. ಮೊದಲ ಜಾನಪದ ಕತೆಯಲ್ಲಿ ತಾಯಿ–ಮಗನ ನಡುವೆ ದೈಹಿಕ ಸಂಪರ್ಕವನ್ನು ಮಾವಿನಹಣ್ಣಿನ ಸಂಕೇತದ ಮೂಲಕ ತೋರಿಸಲಾಗಿದೆ. ಆದರೆ ಎರಡನೇ ಕತೆಯಲ್ಲಿ ಸಂಯೋಗವನ್ನು ನೇರವಾಗಿಯೇ ಹೇಳಲಾಗಿದೆ. ಗ್ರೀಕ್ ನಾಟಕದಂತೆ ಇಲ್ಲಿಯೂ ತಾಯಿ ಎಂಬ ಅರಿವು ಇಲ್ಲದೆಯೇ ಮದುವೆ ನೆರವೇರುತ್ತದೆ. ಅದೇ ರೀತಿ 'ಕಲ್ಕಿ'ಯಂತೆ ಈಡಿಪಸ್‌ನ ತಾಯಿ ಮತ್ತು ಪತ್ನಿಯಾದ ಯೊಕಾಸ್ಟ ಕೂಡ ನೇಣುಹಾಕಿಕೊಂಡೇ ಸಾಯುತ್ತಾಳೆ.

ಆದರೆ ಈ ಮೊದಲು ಹೇಳಿದ ಜಾನಪದ ಕತೆಯಲ್ಲಿ ತಾಯಿ ಆತ್ಮಹತ್ಯೆ

ಮಾಡಿಕೊಳ್ಳುವುದಿಲ್ಲ. ಕಾರಣ ಆಕೆ ಮಗನೊಂದಿಗೆ ನೇರವಾಗಿ ದೈಹಿಕ ಸಂಪರ್ಕ ಹೊಂದಿರುವುದಿಲ್ಲ.

ಭಾರತದ ಶಿಷ್ಟ ಸಾಹಿತ್ಯದಲ್ಲಿ ಇಂಥ ಕತೆಗಳು ಕಂಡುಬರುವುದಿಲ್ಲ. ನಮ್ಮ ಪೂರ್ವಕವಿಗಳು ತಾಯಿ–ಮಗನ ನಡುವೆ ದೈಹಿಕ ಸಂಬಂಧ ಕಲ್ಪಿಸಿಕೊಳ್ಳುವುದೂ ದೊಡ್ಡ ಪಾಪವೆಂಬಂತೆ ನೋಡುತ್ತಿದ್ದರು. ಆದರೆ ಇವರಿಗೆ ತಂದೆ–ಮಗಳ ಸಂಬಂಧದ ಬಗ್ಗೆ ಈ ಧೋರಣೆ ಇರಲಿಲ್ಲ. ಕನ್ನಡದ ಪ್ರಥಮ ಗದ್ಯಕೃತಿ 'ವಡ್ಡಾರಾಧನೆ'ಯಲ್ಲಿಯೇ ಅಂಥದೊಂದು ಪ್ರಸಂಗವಿದೆ.

ಭಾರತೀಯ ಈ ಧೋರಣೆ ಇಂದಿಗಾದರೂ ಬದಲಾಗಿದೆ ಎಂದು ಹೇಳಲಾಗದು. ವೈಕುಂಠರಾಜು ಅವರೇ ತಮ್ಮ 'ವಾರಪತ್ರಿಕೆ'ಯಲ್ಲಿ ಇಂತಹ ವಸ್ತುಗಳನ್ನೊಳಗೊಂಡ ಕತೆಗಳನ್ನು ಪ್ರಕಟಮಾಡಿದಾಗ ಅನೇಕ ಓದುಗರು ಪತ್ರಬರೆದು ಅಂಥವನ್ನು ಇನ್ನು ಮುಂದೆ ಪ್ರಿಂಟ್ ಮಾಡಬೇಡಿ ಎಂದರು.

ಬಹುಶಃ ಭಾರತೀಯರ ಈ ಮನೋಧರ್ಮದ ಕಾರಣ ಇಂಥ ಕತೆಗಳು ಜನಪದವನ್ನು ದಾಟಿ ಶಿಷ್ಟ ಸಾಹಿತ್ಯಕ್ಕೆ ಬರಲಿಲ್ಲ ಎನಿಸುತ್ತದೆ.

ಗ್ರೀಕ್ ಮತ್ತು ಭಾರತ ಸಂಸ್ಕೃತಿಗಳೆರಡಕ್ಕೂ ಇರುವ ಮತ್ತೊಂದು ಸಾಮ್ಯ ಎಂದರೆ, ವಿಧಿಯಲ್ಲಿರುವ ನಂಬಿಕೆ. ಕಲ್ಕಿ ಏನೇ ಮಾಡಿದ್ದರೂ ವಿಧಿಯನ್ನು ಸುಳ್ಳಾಗಿಸಲು ಸಾಧ್ಯವಾಗಲಿಲ್ಲ. ಅಂತೆಯೇ ಈಡಿಪಸ್‌ನ ಅಪ್ಪ–ಅಮ್ಮಂದಿರ ಪ್ರಯತ್ನದ ಫಲವಾಗಿಯೂ ವಿಧಿ ಬದಲಾಗಲಿಲ್ಲ.

ಭಾರತದ ಈ ಜಾನಪದ ಕತೆಗಳಿಗೆ ಮೂಲ ಗ್ರೀಕ್ ನಾಟಕವೇ ಎನ್ನುವುದಾದರೆ, ಅದನ್ನು ಸಂಪೂರ್ಣವಾಗಿ ಭಾರತೀಕರಣಗೊಳಿಸಿದ 'ಜಾನಪದ ಕವಿ'ಗೆ ಮೆಚ್ಚುಗೆ ಸಲ್ಲಲೇಬೇಕು. ಗ್ರೀಕ್‌ನಲ್ಲಿರುವಂತೆ ಇಲ್ಲಿ ತನಗಿಂತ ದೊಡ್ಡವಳಾದ ಹೆಣ್ಣನ್ನು ಮದುವೆಯಾಗುವ ಪದ್ಧತಿ ಇಲ್ಲ. ಅದೇ ಕಾರಣ ಮೊದಲನೇ ಜಾನಪದ ಕತೆಯಲ್ಲಿ ಮಾವಿನಹಣ್ಣನ್ನು ಸಂಕೇತವಾಗಿ ಬಳಸಿಕೊಂಡರೆ ಎರಡನೆಯದರಲ್ಲಿ ಕಲ್ಕಿಗೆ ಮರೆವನ್ನೇ ನೀಡಿ ವಯಸ್ಸನ್ನು ಜಾಣತನದಿಂದ ಮರೆಮಾಚಲಾಗಿದೆ. ಮೇಲಾಗಿ ರಾಜಕುಮಾರ ಕಲ್ಕಿಯ ಸೌಂದರ್ಯದ ಕಡೆ ಗಮನಹರಿಸುತ್ತಾನೆಯೇ ಹೊರತು ವಯಸ್ಸಿನ ಮೇಲಲ್ಲ.

ಈ ಎರಡನೇ ಜಾನಪದ ಕತೆಯನ್ನೇ ಆಧಾರವಗಿಟ್ಟುಕೊಂಡು ಮಂಜುನಾಥ ಬೆಳಕೆರೆ ಕೆಲವು ಹೊಸ ಬದಲಾವಣೆಗಳೊಂದಿಗೆ 'ಇದಿ ಮುಂಡೆಯ ಮಗಳು' ನಾಟಕವನ್ನು ಸೃಷ್ಟಿಸಿದ್ದಾರೆ. ಹಾಗೂ ನಾಟಕವನ್ನು ಸಮಕಾಲೀನ ನೆಲೆಯಲ್ಲಿ ನಿಲ್ಲಿಸುವ ಉದ್ದೇಶದಿಂದ ಮತ್ತೊಂದು ಜಾನಪದ ಕತೆಯನ್ನು ಈ ಕತೆಗೆ ತಾಳೆ ಹಾಕಿದ್ದಾರೆ.

ವಿಧಿ ಬರಹವೇ ಗೆಲ್ಲುವ ಕತೆಗೂ, ಇದಕ್ಕೆ ತಾಳೆಹಾಕಿರುವ ಹೊಲೆಯನನ್ನು ಮದುವೆಯಾಗುವ ಸವರ್ಣೀಯ ಹೆಣ್ಣೊಬ್ಬಳ ಕತೆಯ ನಡುವೆ ಯಾವ ಸಂಬಂಧವೂ ಇರದಿರುವುದರಿಂದ ಈ ಪ್ರಕ್ರಿಯೆ ಸೋತಿದೆ ಎನ್ನುತ್ತಾರೆ ವೈಕುಂಠರಾಜು. ಸಮಕಾಲೀನ ಸಮಸ್ಯೆಯೊಂದನ್ನು ಬಲವಂತವಾಗಿ ನಾಟಕದ ಚೌಕಟ್ಟಿಗೆ ಎಳೆದು ತಂದಿರುವುದರ ಫಲವಾಗಿಯೇ ಹೀಗಾಯ್ತು ಎನ್ನುತ್ತಾರೆ. ಅದರ ಜೊತೆಗೆ ನಾಟಕದ ನಿರೂಪಣೆಗೆ ಜಾನಪದದ ಶೈಲಿಯನ್ನೇ ಅಳವಡಿಸಿದ್ದು ಒಟ್ಟಾರೆ ನಾಟಕದ ಯಶಸ್ಸಿಗೆ ಕಾರಣ ಎನ್ನಲು ಅವರು ಮರೆಯುವುದಿಲ್ಲ.

## ನಾಟಕ ಅಕಾಡೆಮಿ

ನಾಟಕ ಅಕಾಡೆಮಿಗೆ ಅಧ್ಯಕ್ಷರಾದವರಲ್ಲೇ ವೈಕುಂಠರಾಜು ಅವರು ತುಸು ಭಿನ್ನ. ಕೈಯಲ್ಲಿ ಎರಡೆರಡು ಪತ್ರಿಕೆಗಳ ವಿಪರೀತ ಕೆಲಸವಿದ್ದರೂ ಪ್ರತಿ ಗುರುವಾರವೂ ತಪ್ಪದೆ ಅಕಾಡೆಮಿ ಕಚೇರಿಗೆ ಹಾಜರಾಗುತ್ತಿದ್ದರು.

ಇತರರಂತೆ ದುಂದುವೆಚ್ಚವಿಲ್ಲ. ಅಗತ್ಯವಿದ್ದಾಗ ಮಾತ್ರ ವಾಹನದ ಬಳಕೆ. ಇಲ್ಲವಾದರೆ ಸ್ವಂತ ಖರ್ಚಿನಲ್ಲಿಯೇ ಆಟೋ ಪ್ರಯಾಣ. ಸಂಭಾವನೆಯೆಂದು ಹಣ ಪಡೆಯಲಿಲ್ಲ.

ನಾರಾಯಣ ರಾಯಚೂರ್ ಹೇಳುವಂತೆ, ವೈಕುಂಠರಾಜು ಅವರ ಕಾಲ ಅಕಾಡೆಮಿಯಲ್ಲಿ ಸಂಕ್ರಮಣ ಕಾಲ. ಅವರ ಅವಧಿಯಲ್ಲಿ (31–07–1987 ರಿಂದ 03–05–1989) ಅತಿ ಹೆಚ್ಚು ಕಾರ್ಯಕ್ರಮಗಳು ನಡೆದವು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ವಿ. ರಾಮಮೂರ್ತಿ ನೇತೃತ್ವದಲ್ಲಿ ಹುಬ್ಬಳಿಯಲ್ಲಿ, ತೆರೆಯ ಹಿಂದಿನ ಕಲಾವಿದರಿಗಾಗಿಯೇ ಏರ್ಪಡಿಸಿದ್ದ 'ನೇಪಥ್ಯ ಶಿಲ್ಪ' ವಿನೂತನ ಕಾರ್ಯಕ್ರಮ.

ಕೈಗಾರಿಕಾ ನಾಟಕ ಸ್ಪರ್ಧೆಗೆ ಚಾಲನೆ ಕೊಟ್ಟರು. ಮೈಸೂರಿನಲ್ಲಿ ಮಕ್ಕಳ ನಾಟಕೋತ್ಸವ, ರಂಗಾಯಣದಲ್ಲಿ ಬಿ.ವಿ. ಕಾರಂತರ ನಿರ್ದೇಶನದಲ್ಲಿ ಶಿಕ್ಷಕರಿಗಾಗಿ ರಂಗ ಶಿಬಿರ, ಕಾಸರಗೋಡಿನಲ್ಲಿ ನಾಟಕ ರಚನಾ ಶಿಬಿರ, ರಂಗ ಜೈತ್ರೋತ್ಸವ (32 ದಿನಗಳ ರಂಗೋತ್ಸವ) ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಹೊರನಾಡ ಕನ್ನಡ ನಾಟಕೋತ್ಸವ ಹಾಗೂ ಇವೆಲ್ಲವುಗಳ ಜೊತೆಗೆ ಜಿಲ್ಲಾ ಮಟ್ಟದ ಅಸಂಖ್ಯ ನಾಟಕೋತ್ಸವಗಳು.

## ಪ್ರಕಟಣೆಗಳು

ಸಂಸರ ನಾಟಕಗಳ ಸಂಗ್ರಹ ಅದುವರೆಗೂ ಲಭ್ಯವಿರಲಿಲ್ಲ. ಮೊದಲು ಅವರ ನಾಟಕಗಳನ್ನು ಸಂಗ್ರಹಿಸಿ 'ಸಂಸ ನಾಟಕಗಳು' ಪ್ರಕಟಿಸಿದ್ದು ಇವರ ಕಾಲದಲ್ಲಿಯೇ. ಇದರ ಜೊತೆಗೆ 'ರತ್ನಾವಳಿ', 'ರಂಗ ಮಂದಿರಗಳು' ಕೃತಿಗಳೂ ಪ್ರಕಟವಾದವು. ರಂಗ ಗೀತೆಗಳನ್ನು ಸಂಗ್ರಹಿಸಿ ಸ್ವರ ಪ್ರಸ್ತಾರದೊಂದಿಗೆ ಪ್ರಕಟಿಸಲಾಯಿತು. ಚುರುಮುರಿ ಶೇಷಗಿರಿರಾಯರು ಅನುವಾದಿಸಿದ 'ಶಾಕುಂತಲ ನಾಟಕ' ಪ್ರಕಟಿಸಿದ ಹೆಮ್ಮೆ ಇವರಿಗೆ ಸಲ್ಲಬೇಕು.

ವೈಕುಂಠರಾಜು ಅವಧಿಯಲ್ಲಿ ಅಕಾಡೆಮಿ ಪ್ರಶಸ್ತಿಗಳನ್ನು ಡಾ. ಚಂದ್ರಶೇಖರ ಕಂಬಾರ, ಎಲಿವಾಳ ಸಿದ್ದಯ್ಯ, ವಿ.ಕೆ. ಮೂರ್ತಿ, ಗಜಾನನ ಮಹಾಲೆ, ಆರ್ ನಾಗರತ್ನಮ್ಮ, ಸೋನುಬಾಯಿ ದೊಡ್ಡಮನಿ, ಶ್ರೀನಿವಾಸ ಗೋವಿಂದರಾವ್ ತಾವರಗೀರಿ, ಗೌಸ್ ಮಾಸ್ತರ್, ಮಾಸ್ಟರ್ ಹಿರಣ್ಣಯ್ಯ ಹಾಗೂ ನಾಗೇಶರಾವ್‌ರವರಿಗೆ ನೀಡಲಾಗಿತ್ತು. ಈ ಆಯ್ಕೆ ಎಲ್ಲ ಶ್ರೇಷ್ಠ ಆಯ್ಕೆಯೆಂದು ಅನೇಕರು ಅಭಿಪ್ರಾಯಪಡುತ್ತಾರೆ.

## ಪತ್ರಿಕೋದ್ಯಮ

2003ರ ಫೆಬ್ರವರಿ ತಿಂಗಳಲ್ಲಿ ಚಿತ್ರದುರ್ಗದ ಕಬೀರಾನಂದ ಆಶ್ರಮದಲ್ಲಿ ವೈಕುಂಠರಾಜು ಅವರಿಂದ ಒಂದು ಉಪನ್ಯಾಸ ಏರ್ಪಟ್ಟಿತ್ತು. ಸಂಘಟಕರು ನೀಡಿದ ವಿಷಯ 'ಇಂದಿನ ಪತ್ರಿಕೆಗಳು ಮತ್ತು ಧರ್ಮ' ಆದರೆ ಮಾತನಾಡಲು ನಿಂತ ವೈಕುಂಠರಾಜು ಅವರು ಹೊರಳಿದ್ದು 'ಪತ್ರಿಕೋದ್ಯಮ ಒಂದು ಧರ್ಮ'ದ ಕಡೆಗೆ. ಅವರಿಗೆ ಧರ್ಮ ಎಂದರೆ ಪತ್ರಿಕೋದ್ಯಮ. ಅವರಿಗೊಂದು ವ್ಯಕ್ತಿತ್ವ ಕಟ್ಟಿಕೊಟ್ಟದ್ದೇ ಪತ್ರಿಕೋದ್ಯಮ. ಆ ಕಾರಣಕ್ಕಾಗಿಯೇ ಅವರು ಬೇರಾವುದೋ ಧರ್ಮದ ಬಗ್ಗೆ ಮಾತನಾಡದೆ ತಾವು ಒಪ್ಪಿಕೊಂಡಿರುವ 'ಧರ್ಮ'ದ ಬಗೆಗೆ ಮಾತನಾಡಲಾರಂಭಿಸಿದರು.

ಪದವಿ ವ್ಯಾಸಂಗ ವೇಳೆಯಿಂದಲೂ ಪತ್ರಿಕೋದ್ಯಮಿ ಅಥವಾ ಪತ್ರಕರ್ತ ಆಗಬೇಕೆಂದೇ ಗುರಿ ಇಟ್ಟುಕೊಂಡವರು. ಆಗಲೇ ಕಾಲೇಜಿನಲ್ಲಿ ಗೋಡೆ ಪತ್ರಿಕೆ ಮಾಡಿ ತಮ್ಮ ವೃತ್ತಿಯನ್ನು ಆರಂಭಿಸಿದ್ದರು. ಆನರ್ಸ್ ಮುಗಿದು ಎಂ.ಎ. ಸೇರಿಕೊಂಡರು. ಅಲ್ಲಿ ಕೆಲವರ 'ಕೈಚಳಕ'ದಿಂದ ಅನುತ್ತೀರ್ಣರಾಗಬೇಕಾಯಿತು. ಹಾಗಾಗಲು ಕಾರಣರಾದವರ ಎದುರೇ 'ನೀವು ನನ್ನನ್ನು ಲೆಕ್ಚರರ್ ಆಗದಂತೆ ನೋಡಿಕೊಳ್ಳಲು ಸಾಧ್ಯವಿಲ್ಲ. ನೀವು ನಾಳೆ ರಿಟೈರ್ ಆದ ಮೇಲೆ ಯಾವ ನಾಯಿಯೂ ಬಂದು ನಿಮ್ಮನ್ನು ಮೂಸುವುದಿಲ್ಲ' ಎಂದು ದಬಾಯಿಸಿದರು. ಅದರಂತೆ

ಒಂದು ವರ್ಷಕಾಲ ಉಪನ್ಯಾಸಕನಾಗಿ ವೃತ್ತಿಮಾಡಿ ನಂತರವೇ ಪತ್ರಕರ್ತನಾಗುವುದೆಂದು ನಿರ್ಧರಿಸಿದರು. ಆನರ್ಸ್ ಪದವಿ ಆಧಾರದ ಮೇಲೆ ತುಮಕೂರಿನ ಕಾಲೇಜಿನಲ್ಲಿ ಉಪನ್ಯಾಸಕ ಹುದ್ದೆ ಪಡೆದರು.

ಅಲ್ಲಿ ಕೊನೇ ಬೆಂಚಿನ ಹುಡುಗರೆಲ್ಲ ಇವರಿಗಿಂತ ಹಿರಿಯರು. ವಯಸ್ಸಿನಲ್ಲಿ ತನಗಿಂತ ದೊಡ್ಡವರಿಗೆ ಪಾಠ ಮಾಡಬೇಕಾಯಿತು. ಅಂತೆಯೇ ಇವರು ಸಿಗರೇಟ್ ಸೇದುವಾಗ ಕೆಲವು ಹುಡುಗರನ್ನೂ ಜೊತೆಗೆ ಸೇರಿಸಿಕೊಳ್ಳುತ್ತಿದ್ದರು. ಇದರಿಂದ ಕಾಲೇಜಿನ ಇತರರು ಆಕ್ಷೇಪಿಸಿದ್ದೂ ಉಂಟು. ಆದರೆ ವಿದ್ಯಾರ್ಥಿಗಳೊಂದಿಗೆ ಆಪ್ತನಾಗಿದ್ದರೆ ಇವರಿಗೇನು ತೊಂದರೆ ಎಂಬುದು ಇವರ ವಾದ.

ಒಂದು ವರ್ಷದ ನಂತರ ಬೆಂಗಳೂರಿಗೆ. ಬೆಂಗಳೂರಿಗೆ ಹೊರಡಲು ಕಾರಣವಾಗಿದ್ದು ಗೋಪಾಲಕೃಷ್ಣ ಅಡಿಗರ 'ಟೆಲಿಗ್ರಾಂ'. ತಕ್ಷಣ ಪ್ರಜಾವಾಣಿ ಸಂಪರ್ಕಿಸು ಎಂಬುದು ಅದರ ಒಕ್ಕಣೆ. ಅವರು ಪ್ರಜಾವಾಣಿಗೆ ನಡೆದರು. ಅಂದು 1962ರ ಜೂನ್ 24. ಸಂಪಾದಕ ಟಿ.ಎಸ್. ರಾಮಚಂದ್ರರಾವ್‌ರನ್ನು ಭೇಟಿಯಾದರು. ಕೆಲಸ ಫಲಿಸಲಿಲ್ಲ. ಒಂದು ಕ್ಷಣ ಬೇಸರ. ಅದೇ ಹೊತ್ತಿನಲ್ಲಿ 270 ರೂ. ಸಂಬಳದ ನೌಕರಿ ಬಿಟ್ಟುಬಂದಿದ್ದರು.

ಬೆಂಗಳೂರಿನಲ್ಲಿ ಅಲೆದು ಸುಸ್ತಾದರು. ಒಂದು ಕಪ್ ಟೀಗಿರಲಿ, ಸಿಗರೇಟಿಗೂ ಕಾಸಿಲ್ಲ. ಆಗಲೇ ಅವರು ಎರಡು ದಿನಗಳ ಉಪವಾಸ ಇದ್ದರು! ಗುರುಗಳಾದ ಡಿ.ಎಲ್.ಎನ್. ಅದೇ ವೇಳೆಗೆ ಭೇಟಿಯಾದರು. ಅವರೆದುರು ಕಷ್ಟ ಹೇಳಿಕೊಂಡು ಗಳಗಳನೆ ಅತ್ತುಬಿಟ್ಟರು. ಆಗ ಮತ್ತೆ ಮತ್ತೆ ಕಾಡುತ್ತಿದ್ದ ಪ್ರಶ್ನೆ 'ಮುಂದೇನು?'.

ತಕ್ಷಣಕ್ಕೆ ಕೆಲಸ ಸಿಕ್ಕಿದ್ದು 'ತಾಯಿನಾಡು'ನಲ್ಲಿ. ಸಂಪಾದಕರಾಗಿದ್ದ ಸಿದ್ದಪ್ಪ ಇವರಿಗೆ ಸಂಪಾದಕೀಯ ಪುಟದ ಜವಾಬ್ದಾರಿ ವಹಿಸಿದರು. ಎರಡು ವರ್ಷಗಳ ಕಾಲ ಮಾತ್ರ ಅಲ್ಲಿ ದುಡಿದದ್ದು. 1962ರ ಜೂನ್ 24 ರಂದು ಮೊದಲ ಬಾರಿಗೆ ಟಿ.ಎಸ್.ಅರ್. ರವರನ್ನು ಭೇಟಿಯಾದ ಎರಡೇ ವರ್ಷಗಳ ತರುವಾಯ ಅಂದರೆ ಸರಿಯಾಗಿ 1964 ಜೂನ್ 24ರಂದು ಪ್ರಜಾವಾಣಿ ಸೇರಿದರು. ಮೊದಲ ದಿನವೇ ಕಚೇರಿಯ ಎಲ್ಲರೆದುರಿಗೂ ನಿಲ್ಲಿಸಿ 'Dear friends, here is your new collegue' ಎಂದರು. ಅಲ್ಲಿಂದ ನವ ಶಕೆ ಆರಂಭ.

ನಂತರ ಸತತ 20 ವರ್ಷಗಳ ಕಾಲ ಪ್ರಜಾವಾಣಿ ಬೆಳೆದಂತೆ ಇವರೂ ಬೆಳೆದರು. ಇಬ್ಬರ ಬೆಳವಣಿಗೆಯೂ ಒಂದಕ್ಕೊಂದು ಪೂರಕ.

ಪ್ರಜಾವಾಣಿಯಲ್ಲಿನ ಆರಂಭದ ದಿನಗಳಲ್ಲಿ ಮಾತ್ರ 'ವರದಿಗಾರಿಕೆ'. ಅದರಲ್ಲೂ ವಿಧಾನಪರಿಷತ್‌ನ ವರದಿ ಮಾಡುತ್ತಿದ್ದುದೇ ಹೆಚ್ಚು. ಕೆಲವೇ ದಿನಗಳಲ್ಲಿ 'ಸಾಪ್ತಾಹಿಕ

ಪುರವಣಿಗೆ' ಶಿಫ್ಟ್ ಆದರು. ಸಾಪ್ತಾಹಿಕ ಪುರವಣಿಯ ನೇತೃತ್ವ ವಹಿಸಿದ್ದು ಮಹತ್ವದ ಘಟ್ಟ. ಆಗ 'ನವ್ಯ' ಉಚ್ಛಾಯ ಸ್ಥಿತಿಯಲ್ಲಿದ್ದ ಕಾಲ. ಅಡಿಗರ ಹಿಂದೆ ಒಂದು ದೊಡ್ಡ ದಂಡೇ ಇತ್ತು. ಅವರ ಜೊತೆಗಿದ್ದವರೆಲ್ಲಾ ಮುಖ್ಯವಾಗಿ ಇಂಗ್ಲಿಷ್ ಮೇಷ್ಟ್ರುಗಳು. ಪಾಶ್ಚಿಮಾತ್ಯ ಸಾಹಿತ್ಯ ಅವರನ್ನು ಬಹುವಾಗಿ ಕಾಡಿತ್ತು. ಅಡಿಗರಂತಹವರು 'ಕುವೆಂಪು ಕವಿಯೇ ಅಲ್ಲ' ಎಂದು ಘೋಷಿಸಿದ್ದ ಕಾಲ ಅದು. ಎಲಿಯಟ್, ಕಾಮು, ಕಾಫ್ಕಾ, .. ಹೀಗೆ ಅನೇಕರು ಕನ್ನಡದ ರೂಪಹೊತ್ತು ಬರುತ್ತಿದ್ದರು.

ಮುಖ್ಯವಾಗಿ ಅದು 'ವಾದ'ಗಳ ಪರ್ವಕಾಲ. ಬರಹಗಾರರೆಲ್ಲ ಒಂದಲ್ಲ ಒಂದು ವಾದದ ಪ್ರತಿಪಾದಕರೆಂದೇ ಬರೆಯಲು ಶುರುಹಚ್ಚಿದವರು. ಅವರ ಅಭಿವ್ಯಕ್ತಿ ಭಿನ್ನವಾಗಿತ್ತು. ಒಂದರ್ಥದಲ್ಲಿ ಕಾವ್ಯ ಮುಟೇಶನ್‌ಗೆ (ತ್ವರಿತ ಬದಲಾವಣೆ) ಒಳಗಾಗಿತ್ತು. ಸಿದ್ಧ ಮಾದರಿಗಳನ್ನೆಲ್ಲ ಪ್ರಶ್ನಿಸುವ ಮನೋಭಾವ ಸಹಜವಾಗಿಯೇ ಎಲ್ಲರಲ್ಲೂ ಮನೆಮಾಡಿತ್ತು. ರಾಜ್ಯದ ಅತ್ಯಧಿಕ ಪ್ರಸಾರವುಳ್ಳ ಪತ್ರಿಕೆಯೊಂದು ಕಾಲಘಟ್ಟದ ಸಾಹಿತ್ಯದ ಬದಲಾವಣೆಗಳಿಗೆ ಸ್ಪಂದಿಸಲೇ ಬೇಕಾಗಿತ್ತು. ಆ ಕೆಲಸವನ್ನು 'ಪ್ರಜಾವಾಣಿ'ಯಲ್ಲದೆ ಮತ್ತಾರುತಾನೆ ಮಾಡಲು ಸಾಧ್ಯ? ಟಿ.ಎಸ್.ಆರ್ ಪ್ರೋತ್ಸಾಹ ಇದ್ದೇ ಇತ್ತು. ವೈ.ಎನ್.ಕೆ. ನಾನಾ ದೇಶಗಳ, ನಾನಾ ಭಾಷೆಯ ಸಾಹಿತ್ಯ ಓದಿಕೊಂಡವರು. ಇವರೆಲ್ಲ ನವ್ಯಕ್ಕೆ ಬೆಂಬಲವಾಗಿ ನಿಂತರು. ಆ ಹೊತ್ತಿಗೆ ವೈಕುಂಠರಾಜು 'ಮ್ಯಾಗಜೀನ್ ಎಡಿಟರ್'. ಪ್ರಜಾವಾಣಿಯಲ್ಲಿ ಒಂದು 'ಕತೆ' ಅಥವಾ ಒಂದು 'ಕವನ' ಪ್ರಕಟವಾಯಿತೆಂದರೆ ಅಂದಿನಿಂದ ಆ ಬರಹಗಾರರನ್ನು ಅಧಿಕೃತವಾಗಿ ಕತೆಗಾರ/ಕವಿ ಎಂದು ಘೋಷಿಸಬಹುದಿತ್ತು. ಇದಕ್ಕೆ ಕಾರಣ ವೈಕುಂಠರಾಜು ಅವರು ಕತೆ/ಕವನಗಳ ಆಯ್ಕೆಗೆ ನೀಡುತ್ತಿದ್ದ ಮಹತ್ವ.

ಮೌಲ್ಯದ ಬಗ್ಗೆ ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಕಾದಂಬರಿಕಾರ ಹಾಗೂ ಚಿತ್ರ ಸಾಹಿತಿ ಬಿ.ಎಲ್. ವೇಣು ಆಗಾಗ ಹೇಳುತ್ತಿದ್ದ ಮಾತನ್ನು ಇಲ್ಲಿ ಸ್ಮರಿಸಬಹುದು. 'ನಾನು ಪ್ರಜಾವಾಣಿಗೆ 35 ಕತೆ ಕಳುಹಿಸಿದೆ. ಒಂದೂ ಪ್ರಕಟವಾಗಲಿಲ್ಲ. ನನ್ನ 36ನೇ ಕತೆ ಪ್ರಕಟವಾಯಿತು ಆ ಹೊತ್ತಿಗೆ ವೈಕುಂಠರಾಜು ಪ್ರಜಾವಾಣಿಯಲ್ಲಿ ಇರಲಿಲ್ಲ!'

ವೇಣು ಅವರ ಈ ಮಾತಿನಲ್ಲಿ ಕತೆ ಆಯ್ಕೆಗೆ ನೀಡುತ್ತಿದ್ದ ಮಹತ್ವ ಅರ್ಥವಾಗುತ್ತದೆ. ಸಮಕಾಲೀನ ಸ್ಪಂದನಗಳಿಗೆ ವೇದಿಕೆಯಾಗಿದ್ದ ಪ್ರಜಾವಾಣಿಯ ಕೊಡುಗೆ ಅಪಾರ. ವಿಮರ್ಶಕ ಪ್ರೊ.ಜಿ.ಹೆಚ್. ನಾಯಕ ಪದೇ ಪದೇ ಹೇಳುತ್ತಾರೆ. '60–70ರ ದಶಕಗಳಲ್ಲಿ ಪ್ರಜಾವಾಣಿ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯೇ ಒಂದು ಪಿ.ಎಚ್.ಡಿ. ಪ್ರಬಂಧದ ವಸ್ತುವಾಗಬಲ್ಲದು! ಅಂದಿನ ಪ್ರಜಾವಾಣಿ

ನೂರಾರು ಗಟ್ಟಿ ಲೇಖಕರನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದೆ. ಅನೇಕ ಕವಿಗಳು ಹುಟ್ಟಿಕೊಂಡಿದ್ದೇ ಪ್ರಜಾವಾಣಿಯ ಸಾಪ್ತಾಹಿಕದಲ್ಲಿ. 'ಪ್ರಜಾವಾಣಿಯ ದೀಪಾವಳಿ ವಿಶೇಷಾಂಕದ 'ಕಥಾ ಸ್ಪರ್ಧೆ'ಯಲ್ಲಿ ಬಹುಮಾನ ಪಡೆದ ಅನೇಕರು 'ಶತಮಾನದ ಕತೆಗಾರರು' ಪಟ್ಟ ಸೇರಿದ್ದಾರೆ. ಪ್ರಜಾವಾಣಿಯಲ್ಲಿ ಬಹುಮಾನ ಬಂತೆಂದರೆ, ಅದಕ್ಕಿಂತ ಮನ್ನಣೆ ಬೇಕೆ?

ವೈಕುಂಠರಾಜು ಅವರನ್ನೇ ಕತೆಗಳ ಆಯ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದಾಗ 'ಅದು ನವ್ಯದ ಕಾಲ. ನವ್ಯ ಕತೆ, ಕವನಗಳನ್ನು ಬರೆಯುವ ಒಂದು ಪೀಳಿಗೆಯೇ ನಿರ್ಮಾಣವಾಗಿತ್ತು. ಇವರು ಪೈಪೋಟಿಯಿಂದ ಕತೆ ಬರೆಯುತ್ತಿದ್ದರು. ಆದರೆ ಬರೆಯಬೇಕು ಎನ್ನುವ ಕಾರಣಕ್ಕಾಗಿಯೇ ಬರೆಯುತ್ತಿದ್ದವರು ತೀರಾ ಕಡಿಮೆ. ಕತೆ ಅಥವಾ ಕವನ ತಮಗೆ ತೃಪ್ತಿಯಾಗದ ಹೊರತು ನಾಲ್ಕು ಜನರಿಗೆ ತೋರಿಸುತ್ತಿರಲಿಲ್ಲ. ಹಸ್ತ ಪ್ರತಿ ಓದಿದವರಲ್ಲಿ ಹೆಚ್ಚಿನವರು 'ಚೆನ್ನಾಗಿದೆ' ಎಂದರೆ ಮಾತ್ರ ಪ್ರಕಟಣೆಗೆ ಕಳುಹಿಸುತ್ತಿದ್ದರು. ನಾನು 'ಪ್ರಜಾವಾಣಿ' ಸೇರುವುದಕ್ಕೆ ಮುಂಚೆಯೇ 'ಸಾಪ್ತಾಹಿಕ ಪುರವಣಿ' ಎಲ್ಲರ ಮನ್ನಣೆ ಗಳಿಸಿತ್ತು. 'ಪ್ರಜಾವಾಣಿ' ಹೊಸ ಪ್ರವೃತ್ತಿಗಳಿಗೆ ಮನ್ನಣೆ ನೀಡುತ್ತದೆ ಎನ್ನುವ ಭಾವನೆಯಿಂದಾಗಿಯೇ ಅನೇಕರು ಕತೆ ಕಳುಹಿಸುತ್ತಿದ್ದರು. ಪ್ರತಿ ವಾರವೂ ಕತೆಯ ರಾಶಿಯೇ ಬಂದು ಬೀಳುತ್ತಿತ್ತು. ಅಂತಹ ರಾಶಿಯ ಮಧ್ಯದಿಂದ ಒಂದು ಕತೆ ಆರಿಸಬೇಕಿತ್ತು' ಎನ್ನುತ್ತಾರೆ.

ಕತೆ, ಕವಿತೆಗಳಷ್ಟೇ ಅಲ್ಲದೆ ವಿಮರ್ಶಾ ಲೇಖನಗಳಿಗೂ ಅದು ಸೂಕ್ತ ಅವಕಾಶ ಕಲ್ಪಿಸಿಕೊಟ್ಟಿತ್ತು. ಇಂದಿನ ದಿನಗಳಲ್ಲಿ ಪುಸ್ತಕ ಪರಿಚಯವೇ ವಿಮರ್ಶೆಯಾಗಿಬಿಟ್ಟಿರುವಾಗ ಪ್ರಜಾವಾಣಿಯ ಅಂದಿನ ದಿನಗಳ ಕೊಡುಗೆಯನ್ನು ಎಲ್ಲರೂ ಪ್ರಶಂಸಿಸಬೇಕು. ವಿಶ್ವ ವಿದ್ಯಾನಿಲಯಗಳಲ್ಲಿ ಉಪನ್ಯಾಸಕ ಹುದ್ದೆಗಳಿಗೆ ಸಂದರ್ಶನ ನಡೆಯುವಾಗ ಅಭ್ಯರ್ಥಿಯ ವಿಮಾರ್ಶಾ ಲೇಖನವೊಂದು ಪ್ರಜಾವಾಣಿಯ ಸಾಪ್ತಾಹಿಕದಲ್ಲಿ ಪ್ರಕಟಗೊಂಡಿದ್ದರೆ ಅದು ಅಭ್ಯರ್ಥಿಗೆ ಪ್ಲಸ್ ಪಾಯಿಂಟ್.

ವೈಕುಂಠರಾಜು ಸಾಪ್ತಾಹಿಕದಲ್ಲಿದ್ದಾಗ ಹೆಚ್ಚಿನದಾಗಿ ಗಮನಹರಿಸಿದ್ದು ರಂಗಭೂಮಿ ಮತ್ತು ಸಿನಿಮಾ ಕಡೆಗೆ. 'ಸಿನಿಮಾತು' ಮತ್ತು 'ರಂಗಭೂಮಿ' ಅಂಕಣಗಳು ಆರಂಭವಾದವು. 'ರಂಗ ವಿಮರ್ಶೆ' ಮತ್ತು 'ಸಿನಿಮಾ ವಿಮರ್ಶೆ'ಗೆ ಹೆಚ್ಚಿನ ಒತ್ತು ನೀಡಲಾಗುತ್ತಿತ್ತು. ರಂಗದ ಮೇಲೆ ನಡೆದ ಪ್ರಯೋಗಗಳು ಇಲ್ಲಿ ವಿಮರ್ಶೆಗೆ ಒಳಪಡುತ್ತಿದ್ದವು. ರಂಗ ನಿರ್ದೇಶಕರೆಲ್ಲ ತಮ್ಮ ಪ್ರದರ್ಶನ ಮುಗಿಯುತ್ತಿದ್ದಂತೆಯೇ ವೈಕುಂಠರಾಜು ಅವರು ವಿಮರ್ಶೆಗೆ ಕಾಯುತ್ತಿದ್ದರಂತೆ. ಇವರೊಟ್ಟಿಗೆ ಸಾಪ್ತಾಹಿಕದ ಸಮೃದ್ಧ ಬೆಳವಣಿಗೆಗೆ ಕಾರಣರಾದವರು ಕತೆಗಾರ ಜಿ.ಎಸ್. ಸದಾಶಿವ ಮತ್ತು ಜಿ.ಎನ್. ರಂಗನಾಥರಾವ್.

ಪ್ರಜಾವಾಣಿಯಲ್ಲಿ ದುಡಿಯುತ್ತಿದ್ದ ಸಂದರ್ಭದಲ್ಲಿಯೇ ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿದ್ದ ಅವ್ಯವಹಾರಗಳ ಬಗ್ಗೆ ಬರೆದ ಲೇಖನ ಸರಣಿ ಸಂಚಲನ ಉಂಟುಮಾಡಿತ್ತು. ಆಗ ದೇ. ಜವರೇಗೌಡರು ಮೈಸೂರು ವಿ.ವಿಯ ಕುಲಪತಿ. ಅವರ ಜಾತಿನಿಷ್ಠೆ, ವಿವಿಧ ಸ್ಥಾನಗಳಿಗೆ ಆಯ್ಕೆಮಾಡುವಾಗ ನಡೆಯುತ್ತಿದ್ದ 'ಲಾಬಿ' ಎಲ್ಲವನ್ನೂ ವೈಕುಂಠರಾಜು ಅವರು ವಿವರವಾಗಿ ದಾಖಲಿಸಿದರು. ಮೈಸೂರು ವಿ.ವಿಗೆ ಸಂಬಂಧಿಸಿದಂತೆ ವಿಷಯ ಸಂಗ್ರಹಿಸಲು ಅನೇಕ ದಿನಗಳ ಕಾಲ ಮೈಸೂರಿನಲ್ಲೇ ಜಾಂಡಾ ಹೂಡಿದ್ದರು. ರಾತ್ರಿ ಯಾವಾಗಲೋ ಜಿ.ಎಚ್. ನಾಯಕರ ಮನೆಗೆ ಬಂದು ತಂಗುತ್ತಿದ್ದರಂತೆ. ಅನೇಕ ವೇಳೆ ನಾಯಕರೂ, ಮಿತ್ರನಿಗೆ ಸುದ್ದಿ ಸಂಗ್ರಹದ ವೇಳೆ ಅದೆಲ್ಲಿ ಅಪಾಯವಾಗುತ್ತದೋ ಎಂದು ಗಾಬರಿಯಾಗಿದ್ದೂ ಉಂಟು.

## ಪ್ರಜಾವಾಣಿಗೆ ವಿದಾಯ

ಟಿ.ಎಸ್.ಆರ್ ನಿಧನದ ನಂತರ ಪ್ರಜಾವಾಣಿಯಲ್ಲಿ ಅನೇಕ ಬದಲಾವಣೆಗಳಾದವು. ನೆಟ್ಟಕಲ್ಲಪ್ಪ ಪುತ್ರ ಹರಿಕುಮಾರ್ ಆಡಳಿತದ ಚುಕ್ಕಾಣಿ ಹಿಡಿದರು. ಒಂದು ದಿನ ಇದ್ದಕ್ಕಿದ್ದಂತೆಯೇ ವೈಕುಂಠರಾಜು ಅವರ ಮ್ಯಾಗಜೀನ್ ಎಡಿಟರ್ ಹುದ್ದೆ ಬದಲಿಗೆ 'ವಿಶೇಷ ಚಿತ್ರ ಲೇಖನ ಬರಹಗಾರ' (Special feature writer) ಎಂದು ನಮೂದಿಸಿ ಬೇರೆಡೆ ಸ್ಥಾನ ತೋರಿದರು. ಯಾವುದೇ ಬದ್ಧತೆಯುಳ್ಳ ಪತ್ರಕರ್ತ ಕೆಲಸವಿಲ್ಲದೆ ಬದುಕಲಾರ. ಇವರಿಗಾದದ್ದೂ ಹಾಗೆಯೇ. ಏನೇನೂ ಕೆಲಸವಿಲ್ಲದ ಹುದ್ದೆ ಕೊಟ್ಟು ಮಾಡು ಎಂದರೆ? ರಾಜೀನಾಮೆ ನೀಡಿ ಹೊರಬಂದರು. ಆಗ ಹುಟ್ಟಿಕೊಂಡದ್ದೇ 'ವಾರಪತ್ರಿಕೆ'.

## ವಾರಪತ್ರಿಕೆ

ಮೊದಲ ಸಂಚಿಕೆ ಬಿಡುಗಡೆಯಾದದ್ದು 1984ರ ಜನವರಿ 29 ರಂದು. (ಭಾರತದ ಮೊದಲ ಪತ್ರಿಕೆ 'ಹಿಕ್ಕಿ ಗೆಜೆಟ್' ಆರಂಭವಾದದ್ದೂ 1780ರ ಜನವರಿ 29 ರಂದು). ಪತ್ರಿಕೆಯನ್ನು ಬಿಡುಗಡೆ ಮಾಡಿದವರು ಯು.ಅರ್. ಅನಂತಮೂರ್ತಿ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಕೂಡ ಅಧ್ಯಕ್ಷತೆ ವಹಿಸಿದ್ದರು.

ವಾರಪತ್ರಿಕೆ ಭಾರಿ ಯಶಸ್ಸು ಕಂಡಿತು. ಅರವತ್ತು ಸಾವಿರಗಳವರೆಗೆ ಇದರ ವಿತರಣೆ ಮುಟ್ಟಿದ್ದೂ ಉಂಟು. ವೈಕುಂಠರಾಜು ಅವರಿಗೆ ಬರಹದ ಕಡೆಗೆ ಇದ್ದಷ್ಟು ಗಮನ ಲೆಕ್ಕಾಚಾರದ ಕಡೆಗಿರಲಿಲ್ಲ. ಅವರ 'ಡೈರಿ' ಇತರೆ ಅಂಕಣಗಳು, ಪತ್ರಿಕೆಯ ಪುಟಗಳು ಇಷ್ಟರಲ್ಲೇ ಸದಾ ಮುಳುಗಿರುತ್ತಿದ್ದರು. ಹಣಕಾಸು ಕಡೆ ಲಕ್ಷ್ಯ ವಹಿಸಲಿಲ್ಲ. ಅದೇ ಕಾರಣಕ್ಕೆ ಪತ್ರಿಕೆ ನಷ್ಟ ಅನುಭವಿಸಲಾರಂಭಿಸಿತು.

ನಷ್ಟ ಆರಂಭವಾಗುತ್ತಿದ್ದಂತೆಯೇ ಸಾಲ ತರಲು ಶುರುಹಚ್ಚಿದರು. ನಷ್ಟದ ಜೊತೆ ಜೊತೆಗೆ ಸಾಲದ ಪಟ್ಟಿಯೂ ಹನುಮಂತನ ಬಾಲ. ಅದೇ ಕಾರಣಕ್ಕೆ ಪತ್ರಿಕೆಯನ್ನು ಹದಿನೆಂಟು ವರ್ಷಗಳ ನಂತರ ಮುಚ್ಚಬೇಕಾಯಿತು. ದಿನದ ಇಪ್ಪತ್ನಾಲ್ಕು ಗಂಟೆಗಳು ಎಂಗೇಜ್ ಆಗಿರುತ್ತಿದ್ದ ವ್ಯಕ್ತಿ ಏಕಾಏಕಿ 'ನಿರುದ್ಯೋಗಿ'ಯಾಗಿಬಿಟ್ಟರು!

ವೈಕುಂಠರಾಜು ಅವರು ಈ ಸಂದರ್ಭದಲ್ಲಿಯೇ ಧೃತಿಗೆಟ್ಟಿದ್ದು. ಹಲವು ಬಾರಿ ಆತ್ಮಹತ್ಯೆ ಆಲೋಚನೆಗಳು ಬಂದಿದ್ದವಂತೆ. ಆದರೆ ಧೈರ್ಯ ಅದಕ್ಕೆ ಅನುವು ಮಾಡಿಕೊಡಲಿಲ್ಲ. ಸಾಲಗಾರರ ಕಾಟದ ಮಧ್ಯೆಯೇ, ಅಭಿಮಾನಿವೃಂದದ ಪ್ರೀತಿ ಬದುಕನ್ನು ಪ್ರೀತಿಸುವಂತೆ ಮಾಡುತ್ತಿತ್ತು.

ಪತ್ರಿಕೆ ನಿಲ್ಲುವ ಹೊತ್ತಿಗೆ ವೈಕುಂಠರಾಜು ಅವರಿಗೆ ಹೆಚ್ಚಾಗಿ ಕಾಡಿದ ಸಂಗತಿ 'ತಾನು ಈ ಜಗತ್ತಿಗೆ ಅಪ್ರಸ್ತುತನಾಗಿಬಿಟ್ಟೆನೆ?' ಅವರು ಇದೇ ಪ್ರಶ್ನೆಯನ್ನೂ ಮತ್ತೆ ಮತ್ತೆ ತಮ್ಮ ಆಪ್ತವಲಯದಲ್ಲಿ ಕೇಳಿದ್ದಾರೆ. ಆದರೆ ಅವರ ಆಲೋಚನೆಗಳಾವುವೂ ಅಪ್ರಸ್ತುತವಾಗಿರಲಿಲ್ಲ. ಸುತ್ತ ಮುತ್ತಲಿದ್ದ ಕೆಲವರು ಮಾತ್ರ 'ಈ ಕಾಲಕ್ಕಲ್ಲ' ಎಂದು ಕಡೆಗಣಿಸಿದ್ದರು!

ಯಶಸ್ವಿ ಪತ್ರಕರ್ತ, ಕಾಲದ ಸ್ಪಂದನೆಯೊಂದಿಗೆ ನಿಕಟ ಸಂಬಂಧ ಇಟ್ಟುಕೊಂಡಿರುತ್ತಾನೆ. ವೈಕುಂಠರಾಜು ವಯಸ್ಸು ಅರವತ್ತೇಳಾದರೂ ಇಂದಿನ ಹದಿನೇಳು ವಯಸ್ಸಿನ ಹುಡುಗನ ಜೊತೆ, ಥೇಟ್ ಹುಡುಗನಂತಾಗಿಯೇ ವ್ಯವಹರಿಸುವ ಚೈತನ್ಯ ಉಳಿಸಿಕೊಂಡಿದ್ದಾರೆ. ಮೈಸೂರು ವಿಶ್ವ ವಿದ್ಯಾನಿಲಯದ ಅತಿಥಿ ಗೃಹದ ಚರ್ಚೆಗಳೇ ಅದಕ್ಕೆ ಸಾಕ್ಷಿ. ಇಂತಹ ಬರಹಗಾರನನ್ನು ಓದುಗ ತಿರಸ್ಕರಿಸಲಿಲ್ಲ ಆದರೆ 'ಹಣಕಾಸು' ಮುನಿಸಿಕೊಂಡಿತ್ತು. ಅದೇ ಕಾರಣಕ್ಕೆ ಪತ್ರಿಕೆ ನಿಂತದ್ದು.

ಪತ್ರಕರ್ತ ಪತ್ರಿಕೋದ್ಯಮಿಯಾದರೆ, ಆತ ಸಹಜವಾಗಿ ಎಲ್ಲ ವ್ಯಾಪಾರಿಗಳಂತೆ ಯೋಚಿಸುವುದಿಲ್ಲ. ಪತ್ರಿಕೆಯಿಂದ ಲಾಭ ಬಂದರೆ ಇನ್ನೊಂದು ಪತ್ರಿಕೆ ಮಾಡಿದರೆ ಹೇಗೆ? ಎಂಬ ಆಲೋಚನೆ ಬರುತ್ತದೇ ವಿನಾ ಮನೆ ಕಟ್ಟಿಸಿ ಬಾಡಿಗೆ ಕೊಡುವ ಐಡಿಯಾ ಹೊಳೆಯುವುದೇ ಇಲ್ಲ. ವೈಕುಂಠರಾಜು ಅವರೇ ಇದಕ್ಕೆ ಉದಾಹರಣೆ. ವಾರಪತ್ರಿಕೆ ಯಶಸ್ವಿಯಾಗುತ್ತಿದ್ದಂತೆ 'ರಾಜು ಪತ್ರಿಕೆ' ಆರಂಭವಾಯಿತು. ಇದು ಕನ್ನಡದ ಮೊಟ್ಟ ಮೊದಲ ಕ್ರೀಡಾ ಪತ್ರಿಕೆ. ಅದೂ ಗೆಲ್ಲುತ್ತಿದ್ದಂತೆಯೇ ಮಹಿಳೆಯರಿಗಾಗಿ 'ಹರಿಣಿ' ಹೊರಬಂತು. ಊಹುಂ ಅಷ್ಟಕ್ಕೇ ನಿಲ್ಲಲಿಲ್ಲ. ಇವೆಲ್ಲ ವೃತ್ತ ಪತ್ರಿಕೆಗಳಾದರೆ, ದೈನಿಕ ಬೇಕಲ್ಲ! ಆಗ ಮೂಡಿ ಬಂದದ್ದೇ 'ಗೋಧೂಳಿ' ಇದು ಸಂಜೆ ದಿನಪತ್ರಿಕೆ.

ವೈಕುಂಠರಾಜು ಕೇವಲ ಪತ್ರಿಕೋದ್ಯಮಿಯಾಗಿದ್ದರೆ, ಹೀಗೆ ಒಂದರ ಲಾಭವನ್ನು ಮತ್ತೊಂದರ ಮೇಲೆ ಹಾಕಿ ನಷ್ಟ ಅನುಭವಿಸುತ್ತಿರಲಿಲ್ಲ. ಬದಲಿಗೆ ಜೀವನಕ್ಕೆಂದು ಗಂಟು ಮಾಡುತ್ತಿದ್ದರು. ಅವರೇ ಒಪ್ಪಿಕೊಳ್ಳುವಂತೆ 'ಗೋಧೂಳಿ' ಆರಂಭವಾಗುತ್ತಿದ್ದಂತೆ ಕತ್ತಲೂ ಆರಂಭವಾಯಿತು. ನಷ್ಟ ಮಿತಿಮೀರುತ್ತಿತ್ತು. ಪರಿಣಾಮವಾಗಿ ಒಂದೊಂದೇ ಪತ್ರಿಕೆಗಳು ಕತ್ತಲಲ್ಲಿ ಕರಗಿ ಹೋದವು.

ವಾರಪತ್ರಿಕೆಯ ಆರಂಭದೊಂದಿಗೆ ವೈಕುಂಠರಾಜು ಅವರು ಹೊಸ ಜೀವನವೂ ಆರಂಭವಾಯಿತೆನ್ನಬೇಕು. ಪ್ರಜಾವಾಣಿಯ ದಿನಗಳಲ್ಲಿ ಅವರು ರಾಜಕೀಯ ಬೆಳವಣಿಗೆಯ ಕಡೆ ಗಮನ ಹರಿಸಿದ್ದು ಕಡಿಮೆ. ಕೇವಲ ಸಾಂಸ್ಕೃತಿಕ ರಂಗದಲ್ಲಿ ಅವರು ಹೆಚ್ಚು ಆಸಕ್ತರಾಗಿದ್ದರು. ಆದರೆ ಒಂದು ಸ್ವತಂತ್ರ ಪತ್ರಿಕೆಯಾದ ತಕ್ಷಣ ರಾಜಕೀಯದೆಡೆಗೆ ಲಕ್ಷ್ಯಹರಿಸಲೇ ಬೇಕಾಯಿತು. ಅಂತೆಯೇ ಅಂದಿನಿಂದ ಆರಂಭವಾದ ಅವರ ರಾಜಕೀಯ ಬರವಣಿಗೆ ಇಂದಿಗೂ ನಿಂತಿಲ್ಲ. 'ಸಂಪಾದಕ ಡೈರಿ', 'ರಾಜಕೀಯ ಸ್ವಾರಸ್ಯ', 'ಚುಚ್ಚು ಮದ್ದು' ಅಂಕಣಗಳು ಮನೆ ಮಾತಾದವು.

ಇವರ ರಾಜಕೀಯ ಬರಹಗಳು ಎಂತಹ ಪರಿಣಾಮ ಸೃಷ್ಟಿಸಿದ್ದವು ಎನ್ನುವುದಕ್ಕೆ ಎರಡು ಉದಾಹರಣೆ ನೀಡಬಹುದು. ಆಗ ಹೆಗಡೆ ಮುಖ್ಯಮಂತ್ರಿ, ಅವರೊಂದಿಗೆ ರಾಜು ಅವರ ಸ್ನೇಹವಿತ್ತು. ಹೆಗಡೆಯ 'ಥಿಂಕ್ ಟ್ಯಾಂಕ್'ನ ಪ್ರಮುಖರೆಂಬ ಮಾತೂ ಇತ್ತು. ಅದೇ ವೇಳೆಗೆ ಜನತಾದಳದ ಅಧ್ಯಕ್ಷರನ್ನು ಚುನಾಯಿಸುವ ಸಂದರ್ಭಬಂತು. ಒಂದೆಡೆ ನಜೀರ್ ಸಾಬ್ ಮತ್ತೊಂದೆಡೆ ದೇವೇಗೌಡ ಆ ಸ್ಥಾನಕ್ಕೆ ಪೈಪೋಟಿ ನಡೆಸುತ್ತಿದ್ದರು. ಈ ಮಧ್ಯೆ ಯುವಕರ ಗುಂಪು ಎಂ.ಪಿ. ಪ್ರಕಾಶ್ ಆಗಬೇಕೆಂದು ಇಚ್ಛಿಸಿತ್ತು.

ಈ ಮೂರು ಸಾಧ್ಯತೆಗಳನ್ನು ಅರಿತಿದ್ದ ರಾಜು ಅವರು ತಮ್ಮ ಡೈರಿಯಲ್ಲಿ ಅದೇ ವಿಚಾರ ಬರೆದು, ಉತ್ಸಾಹದ ಯುವಕ ಎಂ.ಪಿ. ಪ್ರಕಾಶ್‌ರಿಗೇಕೆ ಅವಕಾಶ ಕಲ್ಪಿಸಬಾರದು? ಎಂದು ಕೇಳಿದರು. ಪತ್ರಿಕೆ ಮಾರಕಟ್ಟೆಗೆ ಬಂದ ತಕ್ಷಣವೇ ಹೆಗಡೆಯವರಿಂದ ಕರೆ ಬಂತು. 'ಎಂ.ಪಿ. ಪ್ರಕಾಶ್‌ರನ್ನು ಅಧ್ಯಕ್ಷರನ್ನಾಗಿಸುವುದು ನಿಮ್ಮ ಉದ್ದೇಶವಾ?' ಎಂದರು. 'ಹೌದು' ಎಂದರು ರಾಜು. ತಕ್ಷಣ ನಿಮ್ಮೊಂದಿಗೆ ಚರ್ಚಿಸಬೇಕು ಮನೆಗೆ ಬನ್ನಿ ಎಂಬ ಆಹ್ವಾನ. ಹೆಗಡೆಯವರಿಗೆ ಪ್ರಕಾಶ್‌ರನ್ನು ಅಧ್ಯಕ್ಷರನ್ನಾಗಿ ನೇಮಿಸುವ ರೀತಿ ಕುರಿತು ದ್ವಂದ್ವವಿತ್ತು. ಕಾರಣ ಆಗಲೇ ಇಬ್ಬರು ಆ ಸ್ಥಾನಕ್ಕಾಗಿ ಪೈಪೋಟಿಗಿಳಿದಿದ್ದಾರೆ. ರಾಜು ಅವರ ಬಳಿ ಪರಿಹಾರ ಸಿದ್ಧವಿತ್ತು. 'ಅಧ್ಯಕ್ಷರ ಆಯ್ಕೆ ಚರ್ಚೆಗೆ ಬಂದಾಗ ಸಹಜವಾಗಿ ನಜೀರ್‌ಸಾಬ್ ಮತ್ತು ದೇವೇಗೌಡರ ನಡುವೆ ಹೋರಾಟ ನಡೆಯುತ್ತದೆ. ಆ ಕಾರಣ ಅವರಿಬ್ಬರೂ ಅಧ್ಯಕ್ಷರಾಗುವುದು ಕಷ್ಟ. ಈ ಮಧ್ಯೆ ಎಂ.ಪಿ. ಪ್ರಕಾಶ್ ಅವರದೂ ಒಂದು

ನಾಮಪತ್ರ ಹಾಕಿಸಿ. ಆಗ ಪ್ರಕಾಶ್ ಸುಲಭವಾಗಿ ಅಧ್ಯಕ್ಷರಾಗುತ್ತಾರೆ' ಎಂದರು. ಹೆಗಡೆಗೆ ಈ ದಾರಿ ಸರಿ ಎನ್ನಿಸಿತು. ಮಾರನೇ ದಿನ ಪ್ರಕಾಶ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು!

ಇಂಥದೇ ಇನ್ನೊಂದು ಪ್ರಕರಣ ಕೋಲಾರದ ಕೆ.ಎಚ್. ಮುನಿಯಪ್ಪ ಮಂತ್ರಿಯಾದದ್ದು. ಮುನಿಯಪ್ಪ ಶಾಸಕರಾಗಿ ಆಯ್ಕೆಯಾಗಿದ್ದರು. ಅದು ಅವರು ಮೊದಲ ಬಾರಿಗೆ ವಿಧಾನ ಸಭೆ ಪ್ರವೇಶಿಸಿದ್ದು. ರಾಜು ಅವರು, ಮಂತ್ರಿಮಂಡಲ ನೇಮಿಸುವ ಸಂದರ್ಭದಲ್ಲಿ ಹೊಸದಾಗಿ ಆಯ್ಕೆಯಾಗಿರುವ ಮುನಿಯಪ್ಪನನ್ನು ಮಂತ್ರಿಯನ್ನಾಗಿಸಿದರೆ ಒಳಿತು. ಉತ್ಸಾಹಿ ಯುವಕ ಉತ್ತಮ ಕೆಲಸ ಮಾಡಬಹುದು ಎಂದು ಬರೆದರು. ಅದುವರೆಗೂ ರಾಜು ಅವರು ಮುನಿಯಪ್ಪನ ಮುಖವನ್ನೇ ನೋಡಿರಲಿಲ್ಲ. ಕೇವಲ ಚುನಾವಣೆ ಫಲಿತಾಂಶವನ್ನೂ ಆಧಾರವಾಗಿಟ್ಟುಕೊಂಡು ಹೀಗೆ ಬರೆದಿದ್ದರು. ಹೆಗಡೆ ಮುನಿಯಪ್ಪನನ್ನು ಮಂತ್ರಿಯನ್ನಾಗಿ ನೇಮಿಸಿದರು. ಬಹುಶಃ ಮುನಿಯಪ್ಪನೂ ಮಂತ್ರಿಯಾಗುತ್ತೇನೆಂದು ಕನಸು ಕಂಡಿರಲಿಲ್ಲ!

ಈ ಪ್ರಕರಣಗಳು ಕೇವಲ ಉದಾಹರಣೆ ಅಷ್ಟೆ. ಇಂತಹ ನೂರಾರು ಘಟನೆಗಳಿವೆ. ಪತ್ರಿಕೆಯೊಂದು ರಾಜಕೀಯ ಬದಲಾವಣೆಗಳಿಗೆ ಎಂತಹ ಪ್ರಭಾವ ಬೀರಬಹುದೆನ್ನುವುದನ್ನು ಇಲ್ಲಿ ಗಮನಿಸಬಹುದು.

'ವಾರಪತ್ರಿಕೆ' ಮಾತ್ರ ಈ ಮಾತಿಗೆ ಅಪವಾದ. ಇದು ಮತ್ತೆ ಮತ್ತೆ ಜೀವ ಕಂಡಿದೆ. ಪತ್ರಿಕೆ ನಿಂತು ಎರಡು ವರ್ಷಗಳ ನಂತರ ಉದ್ಯಮಿಯೊಬ್ಬ ಮುಂದೆ ಬಂದು ಪತ್ರಿಕೆ ಮಾಡುತ್ತೇನೆ ಎಂದ. ವೈಕುಂಠರಾಜು ಎಲ್ಲಾ ಹಕ್ಕುಗಳನ್ನು ನೀಡಿ ಕೈ ತೊಳೆದುಕೊಂಡರು. ಇವರು 'ಗೌರವ ಸಂಪಾದಕರಾಗಿ' ಉಳಿದುಕೊಂಡರೂ ಪತ್ರಿಕೆ ಮೊದಲಿನಂತೆ ಹೊರಬರಲಿಲ್ಲ. ಅದು ಹಾಳಾಗಲಿ, ಎರಡೇ ಸಂಚಿಕೆಗಳಿಗೆ ಮತ್ತೆ ಮಲಗಿತು. ರಾಜಕೀಯ ಲಾಭಗಳಿಗಾಗಿ ಪತ್ರಿಕೆ ಮಾಡಬಯಸಿದರೆ ಹೀಗೇ ಆಗುವುದು ಎನ್ನುವುದು ಆಗ ಆ 'ಪ್ರಕಾಶಕ (ಉದ್ಯಮಿ)ನಿಗೆ ಅರ್ಥವಾಯಿತೇನನ್ನ !

'ವಾರಪತ್ರಿಕೆ' ನಿಂತು ಆರಂಭವಾಗಿ ಮತ್ತೆ ನಿಂತು... ಹೀಗೆ ಏನೇ ಆದರೂ ಇವರು ಬರವಣಿಗೆಗೆ ಇತಿ ಶ್ರೀ ಹಾಡಿಲ್ಲ. ವಾರಪತ್ರಿಕೆ ನಿಂತ ಮೇಲೆ 'ಕನ್ನಡ ರಂಗಭೂಮಿ' ಕೃತಿ ಹೊರತಂದು ಮೈಸೂರು ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಪದವಿ ಪಡೆದರು. 'ಸಾಹಿತ್ಯ ಸಂವಾದ' ಕೃತಿ ಹೊರಬಂತು. 'ಉದ್ಭವ' ಕಾದಂಬರಿಯನ್ನು ತಾವೇ ನಾಟಕಕ್ಕೆ ರೂಪಾಂತರಿಸಿದರು. ಇದೆಲ್ಲದರ ಜೊತೆಗೆ ಒಂದೆರಡು ಕತೆ ಬರೆದು ಸೃಜನಶೀಲ ಲೇಖಕ ಎನ್ನುವುದನ್ನು ಮತ್ತೆ ತೋರಿಸಿದ್ದಾರೆ. ಇವರು ಇತ್ತೀಚೆಗೆ ಬರೆದ ಕತೆ 'ಪ್ರತಿಷ್ಠೆ'. ಇದರಲ್ಲಿ ಸಂಬಂಧಗಳ ಸೂಕ್ಷ್ಮವನ್ನು ಸೊಗಸಾಗಿ ಬಿಡಿಸಿದ್ದಾರೆ.

ಅದರೊಟ್ಟಿಗೆ ಕೆಲವು ಕಾಲ 'ವಿಜಯ ಕರ್ನಾಟಕ' ದಿನಪತ್ರಿಕೆಗೆ 'ಗ್ರಹಣ, ಸಂಸ್ಕೃತಿ' ಎಂಬ ಅಂಕಣಗಳನ್ನು ಬರೆದರು.

ಬದುಕಿನ ತಿರುವುಗಳೇ ಹಾಗೆ. ಯಾವುದೇ ಮುನ್ಸೂಚನೆ ಕೊಡದೆ ಪ್ರಪಾತವೊಂದರ ಮುಂದೆ ತಂದು ನಿಲ್ಲಿಸಿಬಿಡುತ್ತವೆ. ಇಲ್ಲವಾದರೆ, ಪ್ರಸಿದ್ಧಿಯ ಉತ್ತುಂಗಕ್ಕೆ ಕರೆದೊಯ್ದು ತನ್ನ ಮುಂದೆ ಜಗತ್ತಿನಲ್ಲೇ ಯಾರೂ ಇಲ್ಲ ಎನಿಸಿಬಿಡುತ್ತದೆ. ಆದರೆ, ಈ ಎಲ್ಲಾ ಹಂತಗಳು ಕೇವಲ ಕ್ಷಣಿಕ ಎಂಬ ಸತ್ಯ ಕೆಲವರಿಗೆ ಮಾತ್ರ ತಿಳಿದಿರುತ್ತದೆ.

ವೈಕುಂಠರಾಜು, ಪ್ರಜಾವಾಣಿ ಪತ್ರಿಕೆಯಿಂದ ಹೊರಬಂದ ನಂತರ ಅವರ ಪಾಲಿಗೆ ಇನ್ನೇನು ಜೀವನ ಮುಗಿದಂತೆಯೇ ಎಂದು ಉದ್ಗರಿಸಿದವರು ಹಲವರು. ಆದರೆ ಆ ಸಂದಿಗ್ಧ ಪರಿಸ್ಥಿತಿಯಲ್ಲೇ ಎದ್ದು ನಿಂತವು 'ವಾರಪತ್ರಿಕೆ' ಹಾಗೂ 'ರಾಜುಪತ್ರಿಕೆ'. ಕನ್ನಡದ ಸಾಂಸ್ಕೃತಿಕ ಹಾಗೂ ಕ್ರೀಡಾ ಜಗತ್ತನ್ನು ಅನಾಮತ್ತಾಗಿ ಕೆಲವು ದಿನಗಳ ಮಟ್ಟಿಗಾದರೂ ಇವು ಆಳಿದವು. ಆದರೆ, ಇವರಿಗೆ ಅವಡುಗಚ್ಚಿ ಒಂದೇ ನಿಲುವಿಗೆ ಬರೆಯುವುದು ಗೊತ್ತಿತ್ತೇ ಹೊರತು, ಹಣಕಾಸಿನ ವ್ಯವಹಾರದ ಕಡೆ ಗಮನಕೊಡಲಾಗಲಿಲ್ಲ. ತಾವು ನಂಬಿದವರು ಎಂದಿಗೂ ಮೋಸ ಮಾಡುವುದಿಲ್ಲ ಎಂಬುದೇ ಅವರ ನಂಬಿಕೆಯಾಗಿತ್ತು. ಊಹ್ಞೂಂ, ಅದು ಹಾಗಾಗಲಿಲ್ಲ. ಪತ್ರಿಕೆಗೆ ಉನ್ನತ ಮಟ್ಟದ ಬೇಡಿಕೆ ಇದ್ದರೂ ಲಾಭ ಎನ್ನುವುದು ದೂರವೇ ಉಳಿಯಿತು. ಅಚ್ಚಾಗಿಸಿದ ಪ್ರತಿಗಳೆಲ್ಲಾ ಖರ್ಚಾದರೂ, ಹಣ ಮಾತ್ರ ಕಚೇರಿಗೆ ತಲುಪುತ್ತಿರಲಿಲ್ಲ. ಕ್ರಮೇಣ ಸಾಲದ ಮೊತ್ತ ವೃದ್ಧಿಯಾಯಿತು. ಅದೇ ರೀತಿ, ಸಾಲದ ಮೂಲಗಳು ಒಂದೊಂದಾಗಿ ಬಂದ್ ಆದವು. ಅನಿವಾರ್ಯವಾಗಿ ಪತ್ರಿಕೆಗೆ ಕದ ಹಾಕಲಾಯಿತು.

ಆಗಲೇ ಆರೋಗ್ಯವೂ ಹದಗೆಟ್ಟಿತು. ಬೆಂಗಳೂರಿನ ಮಲ್ಲಿಗೆ ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯೆ ಹೋರಾಟ ನಡೆಯುತ್ತಿತ್ತು. ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಕೋಮ ಹಂತಕ್ಕೆ ತಲುಪಿತು. ಬದುಕು ತನ್ನೆಲ್ಲಾ ಚಕ್ರಗಳನ್ನು ಸವೆಸಿಕೊಂಡು, ವಿಶ್ರಾಂತಿಗೆ ಮರಳುತ್ತಿದೆ ಎಂದು ಎಲ್ಲರೂ ಭಾವಿಸಿದರು. ವೈದ್ಯರು ಮಾಡಬಹುದಾದ ಪ್ರಯತ್ನಗಳನ್ನೆಲ್ಲ ಮಾಡಿ, ನಿಟ್ಟುಸಿರು ಬಿಟ್ಟರು. ಮಗ, ಅಪ್ಪನ ಕಣ್ಣುಗಳು, ಮತ್ತಾರಿಗಾದರೂ ದೃಷ್ಟಿ ನೀಡುವಂತಾಗಲಿ ಎಂದು ಐ ಬ್ಯಾಂಕ್‌ನ್ನು ಸಂಪರ್ಕಿಸಲಾರಂಭಿಸಿದ. ಹಿರಿಯ ಜೀವವನ್ನು ಕೊನೇ ಬಾರಿಗಾದರೂ ನೋಡಿಕೊಂಡು ಬರೋಣ ಎಂದು ಆಸ್ಪತ್ರೆಗೆ ಎಡತಾಕಿದರು ನೂರಾರು ಮಂದಿ. ಬಂದವರೆಲ್ಲಾ, ಇವರ ಕೊನೇಗಾಲದಲ್ಲಾದರೂ ಸಹಾಯವಾಗಲೆಂದು ಕೈಲಾದಷ್ಟು ಹಣ ನೀಡಿ ಹೋಗುತ್ತಿದ್ದರು. ಇವರು ಸಾಯುವುದು ಇನ್ನೇನು ಖಚಿತ ಎಂದೇ ಭಾವಿಸಿಕೊಂಡಿದ್ದ ಆಪ್ತ ಸಹಾಯಕನೊಬ್ಬ, ಹೀಗೆ ಬಂದ ಹಣವನ್ನೆಲ್ಲಾ

ಜೇಬಿಗಿಳಿಸಲಾರಂಭಿಸಿದ. ಇದೇ ಮನುಷ್ಯನನ್ನು ವೈಕುಂಠರಾಜು, ಮಗನಿಗಿಂತ ಹೆಚ್ಚೆಂದು ಭಾವಿಸಿದ್ದರು. ಆದರೆ ಆ 'ಮಗ' ಇವರನ್ನು ಅಪ್ಪ ಎಂದು ಭಾವಿಸಲೇ ಇಲ್ಲ. ಇವನೇನು ಮೊದಲಿಗನಲ್ಲ, ಇಂಥವರು ನೂರಾರು ಮಂದಿ ಇವರ ಬದುಕಿನಲ್ಲಿ!

ಇಷ್ಟೆಲ್ಲಾ ಆದರೂ ಬದುಕುಳಿದರು. ಸಾಲಗಾರರ ಒತ್ತಡಕ್ಕೆ ಮಣಿದು, ಯಮಧರ್ಮರಾಯ ಹಿಂದಕ್ಕೆ ಕಳುಹಿಸಿದನೇನೋ ಎಂದು ತಮಾಷೆ ಮಾಡಿಕೊಂಡರು.

ಈ ಬೆಳವಣಿಗೆ, ನಿಜ ಅರ್ಥದಲ್ಲಿ ಹೊಸ ಜೀವನಕ್ಕೆ ನಾಂದಿ ಹಾಡಿತು. ಕೆಲವೇ ದಿನಗಳಲ್ಲಿ ಚೇತರಿಸಿಕೊಂಡವರು, ಸುಮ್ಮನೆ ಕೂರಲಾಗಲಿಲ್ಲ. ಅದೇ ಹೊತ್ತಿನಲ್ಲಿ ಇವರ 'ಕನ್ನಡ ರಂಗಭೂಮಿ' ಕೃತಿಗೆ, ಮೈಸೂರು ವಿಶ್ವವಿದ್ಯಾನಿಲಯ ಡಿ.ಲಿಟ್ ಪದವಿ ನೀಡಿತು. ಅಂದಿನಿಂದ ಇವರು ಡಾ.ಬಿ.ವಿ. ವೈಕುಂಠರಾಜು ಆದರು.

ಸದಾ ಬದಲಾವಣೆಗಳನ್ನು ಬಯಸುವ ವೈಕುಂಠರಾಜು, ಅರ್ಧ ಶತಮಾನದಿಂದ ಉಳಿಸಿಕೊಂಡು ಬಂದಿರುವ ಏಕೈಕ ಸಂಗಾತಿ ಸಿಗರೇಟ್. ದಿನವೊಂದಕ್ಕೆ ನಲವತ್ತರಿಂದ, ಅರವತ್ತು ದಾಟುತ್ತದೆ ಇವರ ಸಿಗರೇಟ್ ಲೆಕ್ಕಾಚಾರ. ಯಾವುದೇ ಆದಾಯದ ಮೂಲವಿಲ್ಲದಾಗ ಒಂದೇ ಒಂದು ಸಿಗರೇಟ್ ಪ್ಯಾಕ್‌ಗೂ ಹಣವಿಲ್ಲದೆ ಕಾಲ ನೂಕಿದ್ದಾರೆ. ಆದರೆ ಎಂದಿಗೂ ಎದೆಗುಂದಲಿಲ್ಲ. ಎಂದಿಗೂ ಯಾರ ಮುಂದೆಯೂ 'ದೇಹಿ' ಎಂದ ಜಾಯಮಾನ ಇವರದಲ್ಲ. ಸ್ವಾಭಿಮಾನ ಒಂದಿದ್ದರೆ, ಎಂಥಹ ಸಂಕಷ್ಟದ ಸ್ಥಿತಿಯಲ್ಲೂ ಬದುಕುಬಹುದು ಎಂದು ನಂಬಿದ್ದಾರೆ. ಅದನ್ನೇ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದಾರೆ.

ಇಂಥದೇ ಪರಿಸ್ಥಿತಿಯಲ್ಲಿ, ಇವರಿಗೆ ಒಂದಗಿ ಬಂದದ್ದು, ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕ ಹುದ್ದೆ. ಆದರೆ, ಹುದ್ದೆಗೆ ನೇಮಕಾತಿ ಆದೇಶ ಹೊರಡಿಸಿ ಒಂದು ತಿಂಗಳೇ ಆದರೂ, ಇವರಿಗೆ ಅದರ ಸೂಚನೆಯೇ ದೊರಕಲಿಲ್ಲ. ಮತ್ತೆ ಇಲ್ಲಿ ಕುತಂತ್ರಿಗಳ ಪಾತ್ರ! ಇಂಥವರು ತಮ್ಮ ವಿಭಾಗಕ್ಕೆ ಬಂದರೆ, ತಮ್ಮ ಪ್ರಖ್ಯಾತಿಗೆ, ಸ್ಥಾನಕ್ಕೆ ಎಲ್ಲಿ ಕುತ್ತು ಬರುತ್ತದೆಯೋ ಎಂದು ಹಲವರು, ಇವರು ವಿಭಾಗಕ್ಕೆ ಬಾರದಿರುವಂತೆ ತಡೆಯಲು ಯತ್ನಿಸಿದರು. ಆದರೆ, ಅವರ ಪ್ರಯತ್ನಗಳೆಲ್ಲಾ ವಿಫಲವಾದವು.

ಅದೊಂದು ದಿನ ವಿಭಾಗಕ್ಕೆ, ಮೂರು ಮಹಡಿಗಳ ಮೆಟ್ಟಲುಗಳನ್ನೇರಿ ನಡೆದೇ ಬಿಟ್ಟರು. ವಿದ್ಯಾರ್ಥಿ ಸಮೂಹದಲ್ಲಿ ಕೆಲವರಿಗಾದರೂ ಇವರ ಬಗ್ಗೆ ವಿಶೇಷ ಆಸಕ್ತಿ ಇತ್ತು. ಇವರ ಪತ್ರಿಕೆಯನ್ನು ಓದಿ ತಿಳಿದವರಿದ್ದರು. ಬರೀ ಥಿಯರಿ ಬೋಧಿಸುವ ಉಪನ್ಯಾಸಕರ ಮುಖಗಳನ್ನು ನೋಡಿ ಬೇಸತ್ತಿದ್ದ ಮಂದಿಗೆ, ಒಬ್ಬ ಅಪ್ಪಟ,

ಪತ್ರಿಕೋದ್ಯಮದ ಅನುಭವ ಹೊಂದಿರುವರೊಬ್ಬರು ವಿಭಾಗಕ್ಕೆ ಬಂದದ್ದು ಕೆಲವು ವಿದ್ಯಾರ್ಥಿಗಳಿಗಾದರೂ ಸಂತಸ ತಂದಿತು.

ಸಂದರ್ಶಕ ಪ್ರಾಧ್ಯಾಪಕ ಎನ್ನುವುದು ಗೌರವದ ಹುದ್ದೆ. ಅವರು, ತಿಂಗಳಿಗೆ ಇಷ್ಟು ತರಗತಿಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಲೇ ಬೇಕೆಂಬ ನಿಯಮವೇನಿಲ್ಲ. ಆದರೂ ಇವರು ತಿಂಗಳಿಗೆ ಕನಿಷ್ಠ ಎರಡು ಬಾರಿಯಾದರೂ, ಬೆಂಗಳೂರಿನಿಂದ ಬಂದು, ಪಕ್ಕಾ ಪ್ರಾಕ್ಟಿಕಲ್ ಸಂಗತಿಗಳನ್ನು ಬೋಧಿಸಲಾರಂಭಿಸಿದರು. ಹೀಗೆ ಮೈಸೂರಿಗೆ ಬಂದಾಗೆಲ್ಲ, ವಿವಿಯ ಅತಿಥಿ ಗೃಹದಲ್ಲಿ ಉಳಿದುಕೊಳ್ಳುತ್ತಿದ್ದರು. ಅವರು ಮೈಸೂರಿಗೆ ಬರಲಾರಂಭಿಸಿದಂತೆ, ಕ್ರಮೇಣ ವಿದ್ಯಾರ್ಥಿಗಳ ಸಮೂಹ ಅವರ ಸುತ್ತ ಹೆಚ್ಚಾಯಿತು. ಪತ್ರಿಕೋದ್ಯಮ ವಿಭಾಗ ಅಷ್ಟೇ ಅಲ್ಲದೆ, ನನ್ನಂಥ, ಇಂಗ್ಲಿಷ್ ವಿಭಾಗದ ಅನೇಕರು, ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳು ಬರಲಾರಂಭಿಸಿದರು. ಎಲ್ಲರೊಂದಿಗೂ ಹೊಂದಿಕೊಂಡು, ಪ್ರೀತಿ, ಪ್ರೇಮದಂಥ ಸಂಗತಿಗಳಿಂದ ಹಿಡಿದು ರಾಷ್ಟ್ರ ರಾಜಕಾರಣದವರೆಗೂ ಹರಟೆ ಹರಡುತ್ತಿತ್ತು. ಖ್ಯಾತ ಜ್ಞಾನಪೀಠ ಪ್ರಶಸ್ತಿ ವಿಜೇತ ಅನಂತಮೂರ್ತಿ, ಎರಡನೇ ವರ್ಷದ ಬಿ.ಎ.ಯಲ್ಲಿ ಸಾಕಷ್ಟು ಹಾಜರಾತಿ ಇಲ್ಲದೆ, ಪರೀಕ್ಷೆಗೆ ಕೂರಲಾಗದ್ದು, ದೇವರಾಜ ಅರಸು, ಮೊದಲ ಬಾರಿಗೆ ಹುಣಸೂರಿನಲ್ಲಿ ತೋಟ ಮಾಡಿದ್ದು, ಇಂದಿರಾಗಾಂಧಿ ತನ್ನ ಸೊಸೆ ಮೆನಕಾ ಗಾಂಧಿ ಸಿಗರೇಟ್ ಸೇದುತ್ತಾಳೆ, ರಾತ್ರಿ ಹೊತ್ತು ಹಾಸಿಗೆ ಸುತ್ತ ಸಿಗರೇಟ್ ತುಂಡುಗಳು ಬಿದ್ದಿರುತ್ತವೆ ಎನ್ನುವ ಸಂಗತಿ, ಇತರರಿಗೂ ಗೊತ್ತಾಗಲಿ ಎಂದು ಬೂಟಾಸಿಂಗ್‌ನನ್ನು ಕರೆದು ತೋರಿಸಿದ್ದು, ಅದೇ ಬೂಟಾಸಿಂಗ್ ಆ ಸಂಗತಿಯನ್ನು ಜೀವರಾಜ್ ಆಳ್ವಾಗೆ ಹೇಳಿದ್ದು, ಮತ್ತು ಆಳ್ವಾ ಅದೇ ವಿಚಾರವನ್ನು ಇವರಿಗೆ ಹೇಳಿದ್ದು, ಪಟ್ಟಾ ಶಿಷ್ಯನಂತಿದ್ದ ಆಳ್ವಾ ಒಮ್ಮೆ ಇವರ ವಿರುದ್ಧವೇ ಪತ್ರಿಕಾ ಕಾರ್ಯಾಲಯದ ಮುಂದೆ ಧರಣಿ ಕೂತಿದ್ದು, ಕನ್ನಡದ ಮೇರು ಕವಿ ಗೋಪಾಲಕೃಷ್ಣ ಅಡಿಗರು ಬ್ಯಾಂಕ್ ಸಾಲ ತೀರಿಸದೆ, ಶೂರಿಟಿಗೆ ಸಹಿ ಹಾಕಿದ್ದ ಇವರಿಗೆ ಆಪತ್ತು ತಂದಿದ್ದು, ಕನ್ನಡದ ಪ್ರಮುಖ ಸಾಹಿತಿಯೊಬ್ಬರು ಪ್ರಶಸ್ತಿಗೆ ಲಾಬಿನಡೆಸಿದ್ದು, ಇಂಥ ನೂರಾರು ವಿಚಾರಗಳು ನಮ್ಮ 'ಹರಟೆಯ ಯಜ್ಞ'ಕ್ಕೆ ಉರುವಲಾಗುತ್ತಿದ್ದವು.

ಅವರು ತಮ್ಮ ಮಾತುಗಳಲ್ಲಿ ಮತ್ತೆ ಮತ್ತೆ ಸೋಲಿನ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಹೀಗೆ ಪ್ರತಿ ಸೋಲಿಗೂ ಕಾರಣಗಳನ್ನು ಹುಡುಕುತ್ತಾ, ನೀವೂ ಮತ್ತೆ ಇಂಥ ತಪ್ಪುಗಳನ್ನು ಮಾಡಬೇಡಿ ಎಂದು ಉಪದೇಶಿಸುತ್ತಿದ್ದರು. ಆದರೆ, ಇವರು ತಮ್ಮ ಯಾವ ಸೋಲಿನಲ್ಲೂ ಖಿನ್ನರಾಗಲಿಲ್ಲ. ಬದುಕು ಮುಗಿದೇ ಹೋಯಿತೆಂದುಕೊಳ್ಳಲಿಲ್ಲ. ಪ್ರತಿ ಸೋಲು ಅವರಿಗೆ ಪಾಠವಾಗಿತ್ತು. ಅದರ ಜೊತೆ ಜೊತೆಗೆ, ತನ್ನ ಸೋಲುಗಳನ್ನು, ದೌರ್ಬಲ್ಯಗಳನ್ನು ರೋಮಾಂಟಿಸೈಸ್ ಮಾಡುತ್ತ

ಆ ದೌರ್ಬಲ್ಯಗಳನ್ನು ಒಂದರ್ಥದಲ್ಲಿ ಎಂಜಾಯ್ ಮಾಡುತ್ತಿರುವೆನೇನೋ ಎಂದು ಆತಂಕ ವ್ಯಕ್ತಪಡಿಸುತ್ತಿದ್ದರು.

## ಅವರ ಪತ್ನಿ ಸದಾ ಕೇಳುವ ಪ್ರಶ್ನೆ

'ನೀವು ನಿಜವಾಗಿಯೂ ಇಡೀ ಕರ್ನಾಟಕಕ್ಕೇ ದೊಡ್ಡವರು. ಆದರೆ ಈ ಮನೆಗೆ ಏನು?' ಅವರೇ ಹೇಳುವಂತೆ, ಜೀವನದಲ್ಲಿ ಅದೆಷ್ಟೋ ಪ್ರಶ್ನೆಗಳಿಗೆ ಉತ್ತರಿಸಿರುವ ಇವರು ತಮ್ಮ ಪತ್ನಿಯ ಈ ಪ್ರಶ್ನೆಗೆ ಇಂದಿಗೂ ಉತ್ತರಿಸಲಾಗಿಲ್ಲ. ಅವರು ಪದೇ ಪದೇ ಈ ಪ್ರಶ್ನೆಯನ್ನೇ ಕೇಳಿದಾಗ, ಇವರು, 'ಅದೇ ಕೆಸೆಟ್‌ನ್ನು ಎಷ್ಟು ಸಾರ್ತಿ ಹಾಕ್ತೀಯೆ. ಹೋಗ್ಲಿ ಬೇರೆ ಕೆಸೆಟ್ನ್ನಾದರೂ ಹಾಕೇ ಎಂದು ಉತ್ತರ ಹೇಳಲಾಗದ ಅಸಹಾಯಕತೆಯನ್ನು ಹಾಸ್ಯದಿಂದ ಮರೆಮಾಚುತ್ತಾರಂತೆ!

ಸಮಾಜ, ಸಂಸ್ಕೃತಿ, ಕಲೆ ಎಂದು ತಮ್ಮನ್ನು ತಾವು ಹೊರ ಜಗತ್ತಿಗೆ ಸಮರ್ಪಿಸಿಕೊಂಡವರು ಮನೆಯಲ್ಲಿ ಇಂಥ ಪ್ರಶ್ನೆಗಳನ್ನು ಎದುರಿಸುವುದು ಸಾಮಾನ್ಯ ಸಂಗತಿ. ವೈಕುಂಠರಾಜು ಇದಕ್ಕಿಂತ ಭಿನ್ನರಲ್ಲ. ಅವರು ಎಂದೂ ಮನೆಯ ತರಕಾರಿ, ಸೀಮೆಎಣ್ಣೆ, ದಿನಸಿ ಅಂತೆಲ್ಲಾ ತಲೆಕೆಡಿಸಿಕೊಂಡವರಲ್ಲ. ಚಿಕ್ಕಂದಿನಿಂದಲೂ ಮನೆಯ ಜವಾಬ್ದಾರಿ ಹೊತ್ತವರಲ್ಲ. ಅಪ್ಪ, ಅಮ್ಮ, ಮಗ ಚೆನ್ನಾಗಿ ಓದಲಿ ಎಂದು ಹಾರೈಸಿದರಷ್ಟೆ. ಅದೇ ರೀತಿ, ಇವರ ಪತ್ನಿಯೂ ಇವರಿಗೆ ಸಂಸಾರದ ಯಾವ ಜವಾಬ್ದಾರಿಯನ್ನೂ ಹೊರಿಸದೆ, ಅವರ ಬರವಣಿಗೆ, ನಾಟಕ, ಸಾಹಿತ್ಯ, ಪತ್ರಿಕೆಗಳ ಕಡೆ ಸಂಪೂರ್ಣ ಗಮನ ಹರಿಸಲು ಸಹಕರಿಸಿದರು. ಈ ಕಾರಣ, ತಾನು ತನ್ನ ಪತ್ನಿಗೆ ಆಭಾರಿ ಎಂದು ಪದೇ ಪದೇ ಹೇಳುತ್ತಾರೆ.

ಇಂತಹ ವೈಯಕ್ತಿಕ ಸಂಗತಿಗಳನ್ನೂ ನಮ್ಮೊಂದಿಗೆ ಹಂಚಿಕೊಳ್ಳುವಾಗ ಅವರು ಭಾವುಕರಾಗುತ್ತಾರೆ. ಅಷ್ಟೇ ಬೇಗ ಹಾಸ್ಯಕ್ಕೂ ಮರಳುತ್ತಾರೆ. ನಮ್ಮ ಸ್ನೇಹಿತರ ಗ್ಯಾಂಗ್‌ನಲ್ಲಿ ಯಾವುದಾದರೂ ಪ್ರೇಮ ಪ್ರಕರಣವಿದ್ದರೆ, ಅದನ್ನು ತಕ್ಷಣ ಪತ್ತೆ ಹಚ್ಚಿ, ತಮ್ಮ ಪತ್ರಿಕೋದ್ಯಮ ಬುದ್ಧಿಯಂತೆ ಅದನ್ನು ಬಹುರಂಗಪಡಿಸುತ್ತಾರೆ. ವೈಕುಂಠರಾಜು ಅವರಲ್ಲಿ ಮತ್ತೊಂದು ಪ್ರಮುಖ ಸಂಗತಿ ಅಂದರೆ, ಇವರ ಬಳಿ ಯಾವ ಗುಟ್ಟುಗಳೂ ಉಳಿಯುವುದಿಲ್ಲ! ಯಾರಾದರೂ ಮತ್ತೊಬ್ಬರ ಬಗ್ಗೆ ಆರೋಪ ಮಾಡಿದ್ದರೆ, ಅದನ್ನು ನೇರವಾಗಿ, ಯಾವ ಮುಲಾಜಿಲ್ಲದೆ ಅವರ ಬಳಿಯೇ ಹೋಗಿ, ನೀವು ಹೀಗೆ ಮಾಡಿದರಂತೆ ನಿಜವೇ, ಎಂದು ಕೇಳಿಬಿಡುತ್ತಾರೆ. ನೆಮ್ಮದಿಯ ಸಂಗತಿ ಎಂದರೆ, ಕೆಲವೊಮ್ಮೆ, ಆರೋಪ ಮಾಡಿದವರ ಹೆಸರನ್ನು ಅವರ ಮುಂದೆ ಬಹಿರಂಗ ಪಡಿಸುವುದಿಲ್ಲ!

ಹೀಗೆ, ಮೊದಲಿನಿಂದಲೂ ನೇರ, ನಿಷ್ಠುರ ಮಾತು ಇವರದು. ಇದೇ ಕಾರಣಕ್ಕೆ

ಹೋದ ಕಡೆಯಲ್ಲೆಲ್ಲಾ ಒಂದೊಂದು ವಿವಾದ ಸೃಷ್ಟಿಸಿಕೊಳ್ಳುತ್ತಾರೆ. ಇವರು ಇಂಥ ವಿವಾದಗಳನ್ನೂ ಎಂಜಾಯ್ ಮಾಡುತ್ತಾರೇನೋ ಎನ್ನಿಸಿಬಿಡುತ್ತದೆ. ಹಾಗೆಯೇ ಸೃಜನ ಶೀಲ ವ್ಯಕ್ತಿತ್ವ ಯಾವತ್ತಿಗೂ ಸಂಘರ್ಷಗಳನ್ನು ಬಯಸುತ್ತಿರುತ್ತದೆ. ಸಂಘರ್ಷಗಳೇ, ಸೃಜನಶೀಲ ವ್ಯಕ್ತಿತ್ವದ ಅಂತಃಸತ್ವವನ್ನು ಜಾಗೃತದಲ್ಲಿಡುವುದು.

ನೇರ ಮಾತಿನ ಕಾರಣದಿಂದಾಗಿ, ಅನೇಕ ವೇಳೆ ಸಮಸ್ಯೆಗಳನ್ನು ತಾವಾಗಿಯೇ ತಂದುಕೊಂಡಿದ್ದಾರೆ. ಜೊತೆಗೆ, ಇತರರೂ ಸಮಸ್ಯೆಗಳನ್ನು ಎದುರಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ನಿಷ್ಠುರ ವ್ಯಕ್ತಿತ್ವದ ಕಾರಣ, ಪತ್ರಿಕೋದ್ಯಮ ವಿಭಾಗದಲ್ಲೂ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಕೆಲವು ರಾಜಕೀಯ ಪಕ್ಷಗಳ ಪಟ್ಟಭದ್ರ ಹಿತಾಸಕ್ತಿಯನ್ನು, ತರಗತಿಯಲ್ಲಿ ಟೀಕಿಸಿದ ವಿಚಾರವೊಂದು ಮೈಸೂರಿನ ಸಂಘಟನೆಯೊಂದನ್ನು ತಲುಪಿತ್ತು. ಆ ಸಂಘಟನೆಯವರು ಸ್ಥಳೀಯ ಪತ್ರಿಕೆಗಳನ್ನು ಸಂಪರ್ಕಿಸಿ ವೈಕುಂಠರಾಜು ಅವರು ತರಗತಿಗಳಲ್ಲಿ ರಾಜಕೀಯ ಪಕ್ಷ ಕುರಿತು ಮಾತನಾಡುತ್ತಾರೆ. ನೀವು ಅವರ ವಿರುದ್ಧ ಬರೆಯಬಾರದೇಕೆಂದು ತಿದಿಯೊತ್ತಿದ ಪ್ರಸಂಗವೂ ನಡೆಯಿತು. ಆದರೆ, ಯಾವ ಪತ್ರಿಕೆಯೂ, ಈ ಸಂಘಟನೆಯ ಮಾತಿಗೆ ಸೊಪ್ಪು ಹಾಕಲಿಲ್ಲ. ಈ ತರಹ, ಮಾತನ್ನು ತರಗತಿಯಿಂದ ಸಂಘಟನೆಗೆ ತಲುಪಿಸಿದ್ದು ಅದೇ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರೊಬ್ಬರು ಎನ್ನುವುದು ವಿಪರ್ಯಾಸದ ಸಂಗತಿ. ಇದೇ ಉಪನ್ಯಾಸಕರು ಅಷ್ಟಕ್ಕೇ ಸಮಾಧಾನಗೊಳ್ಳದೆ, ದಿನಪತ್ರಿಕೆಯ ಸಂಪಾದಕರೊಬ್ಬರಿಗೆ ಇದೇ ಸುದ್ದಿಯನ್ನು ತಲುಪಿಸಿ ಯಾವುದೋ ಸೇಡು ತೀರಿಸಿಕೊಂಡೆ ಎಂದು ಪೋಜು ಕೊಟ್ಟದ್ದೂ ನಮಗೆಲ್ಲಾ ಹಾಸ್ಯದ ವಿಚಾರವಾಗಿತ್ತು.

ವಿಭಾಗದ ಮತ್ತೊಬ್ಬರದು ಬರೀ ಅಬ್ಬರದ ಮಾತು. ಕಾರ್ಯಕ್ರಮವೊಂದರ ನೀಲನಕ್ಷೆ ಹಾಕುವಾಗಲೆಲ್ಲ ದೊಡ್ಡ–ದೊಡ್ಡ ಭರವಸೆಯ ಮಾತುಗಳನ್ನಾಡುತ್ತಿದ್ದವರು, ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಸಂಪೂರ್ಣ ಸೊನ್ನೆ. ವೈಕುಂಠರಾಜು ಅವರು, ವಿಭಾಗದ ವಿದ್ಯಾರ್ಥಿಗಳು ಪತ್ರಿಕೋದ್ಯಮದಲ್ಲಿ ಪಳಗಲಿ ಎಂಬ ಕಾರಣಕ್ಕೆ ಕ್ಯಾಂಪಸ್‌ನಲ್ಲೇ ವಿವಿಧ ವಿಚಾರಗಳನ್ನು ಸಂಬಂಧಿಸಿದಂತೆ ಸಮೀಕ್ಷೆ ನಡೆಸಲು ಆಸಕ್ತಿ ತೋರಿಸಿದರೂ, ವಿಭಾಗದ ಶಿಕ್ಷಕ ವೃಂದ ಮುಂದೆ ಬರಲಿಲ್ಲ. ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಮೂರ್‍ನಾಲ್ಕು ವಿಚಾರಸಂಕಿರಣಗಳನ್ನಾದರೂ ನಡೆಸೋಣ ಎಂದುಕೊಂಡರೆ, ಅದಕ್ಕೂ ತಕ್ಕ ಪ್ರೋತ್ಸಾಹ ದೊರಕಲಿಲ್ಲ. ಇಂಥ ಕೆಟ್ಟ ಹುಳುಗಳ ಮಧ್ಯೆ ನಾನು ಪಾಠ ಮಾಡಬೇಕಲ್ಲ! ಎಂದು ಅನೇಕ ಬಾರಿ ವ್ಯಥೆಪಟ್ಟಿದ್ದಾರೆ.

ವಿಶ್ವವಿದ್ಯಾನಿಲಯದಲ್ಲಿ, ಇವರಿಗೆ ಕಾಡಿದ ಮತ್ತೊಂದು ಸಂಗತಿ, ಯಾವುದೇ ಸಂಶೋಧನಾ ಕಾರ್ಯಗಳು ನಡೆಯದಿರುವುದು. ಕ್ಯಾಂಪಸ್‌ನ ಹಾದಿಗಳಲ್ಲಿ ಯಾವುದೇ ಉಪನ್ಯಾಸಕರು ಸಿಕ್ಕರೂ, ನಿಮ್ಮ ಸಂಶೋಧನಾ ವಿಚಾರ ಯಾವುದು? ಈಗ ಏನು ಮಾಡ್ತಿದೀರಿ? ನಿಮ್ಮ ವಿಭಾಗದಲ್ಲಿ ಯಾವುದಾದ್ರೂ ಪ್ರಾಜೆಕ್ಟ್ ನಡೀತಿದೆಯಾ? ಎಂದೆಲ್ಲಾ ವಿಚಾರಿಸುತ್ತಿದ್ದರು. ಎದುರಿಗಿರುವವರು, ನಿಜವಾಗಿಯೂ ಸದೃಢರಾಗಿದ್ದರೆ, ಇವರ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಸಮರ್ಥರಾಗಿರುತ್ತಿದ್ದರು. ಇಲ್ಲವಾದಲ್ಲಿ ಬ್ಯಾ ಬ್ಯಾ.. ಎಂದು ರಾಗ ಎಳೆಯುತ್ತಾ, ಏನೋ ನೆಪ ಹೇಳಿ ಪಾರಾಗಿಬಿಡುತ್ತಿದ್ದರು. ತೀರಾ ಕಾಳಜಿಯಿಂದ ಸಂಶೋಧನೆಯಲ್ಲಿ ತೊಡಗಿರುವವರೆಂದರೆ ಇವರಿಗೆ ಅತೀವ ಗೌರವ. ಅಂಥವರನ್ನು ಕುರಿತು ಎಲ್ಲರ ಮುಂದೆಯೂ ಪ್ರಶಂಸೆಯ ಮಾತುಗಳನ್ನಾಡುತ್ತಾರೆ.

ಆದರೆ ಸದ್ಯಕ್ಕೆ ವಿ.ವಿ.ಯಲ್ಲಿ ಉಂಡಾಡಿ ಗುಂಡರಂತೆ, ದಿನಕೊಮ್ಮೆ ವಿಭಾಗಕ್ಕೆ ಬಂದು ಸಹಿ ಹಾಕಿ ಪಾಠ ಮಾಡದೆ ಹೋಗುವ ಅನೇಕರಿದ್ದಾರೆ. ಇಂಥವರ ಬಗ್ಗೆ ಇವರು ಸಾಕಷ್ಟು ಮಾಹಿತಿ ಸಂಗ್ರಹಿಸಿ ಕುಲಪತಿಯವರಿಗೆ ಒಂಬತ್ತು ಪುಟಗಳ ಸುದೀರ್ಘ ಪತ್ರವೊಂದನ್ನು ಬರೆದರು. ಈ ಪತ್ರದಲ್ಲಿ, ಪ್ರಸ್ತುತ ಪಾಠ ಮಾಡದಿರುವ ಉಪನ್ಯಾಸಕರುಗಳಿಗೆ ತಕ್ಕ ಪಾಠ ಕಲಿಸುವಂತೆ ಕೋರಿದ್ದರು. ಈ ಪತ್ರದ ಪರಿಣಾಮವಾಗಿ, ಕೆಲವೇ ದಿನಗಳಲ್ಲಿ ಕುಲಪತಿಯವರು ಎಲ್ಲಾ ವಿಭಾಗಳಿಗೆ ಭೇಟಿ ನೀಡಿದರು. ಭೇಟಿಯ ಫಲವಾಗಿ, ಸೋಮಾರಿಗಳಾಗಿ ಕೂತಿದ್ದ ಉಪನ್ಯಾಸಕರಿಗೆ ಚುರುಕು ಮುಟ್ಟಿಸಿದಂತಾಯ್ತು. ಕರ್ತವ್ಯ ನಿಷ್ಠ ಪತ್ರಕರ್ತ ಎಲ್ಲೇ ಹೋದರೂ ಅನ್ಯಾಯ, ಅಕ್ರಮಗಳ ವಿರುದ್ಧ ದನಿ ಎತ್ತುತ್ತಾನೆ ಎನ್ನುವುದಕ್ಕೆ ಇದೇ ಸಾಕ್ಷಿ.

ಇದೆಲ್ಲದರ ಜೊತೆಗೆ, ಇವರು, ಅತಿಥಿ ಗೃಹದಲ್ಲಿ ತಮ್ಮದೇ ಒಂದು ಶಿಷ್ಯ ಪಡೆಯನ್ನು ಸೃಷ್ಟಿಸಿಕೊಂಡಿದ್ದರು. ಈ ಗುಂಪಿನಲ್ಲಿ, ಸಾಹಿತ್ಯ, ರಂಗಭೂಮಿ, ಪತ್ರಿಕೋದ್ಯಮ ಕುರಿತಂತೆ ಅನೇಕ ವಿಷಯಗಳ ಚರ್ಚೆಗಳಾಗುತ್ತಿದ್ದವು. ನನಗೆ ನೆನಪಿರುವ ಹಾಗೆ, ನಾವು, ಯುವಕರೆಲ್ಲಾ ಪರಿಚಯವಾದ ಮೇಲೆ ಕೇಳಿದ ಪ್ರಶ್ನೆ, ಇವತ್ತಿನ ಹುಡುಗರು ಹೇಗೆ ಬರೆಯುತ್ತಾರೆ? ಯಾವ, ಯಾವ ವಿಚಾರಗಳ ಕಡೆಗೆ ಹೆಚ್ಚಿನ ಆಸಕ್ತಿ ತೋರುತ್ತಾರೆ? ನಮ್ಮಲ್ಲಿ ಯಾರೇ, ಹೊಸ ಕವನ, ಕತೆ ಬರೆದರೆ, ಓದಿ ತಮ್ಮ ಅಭಿಪ್ರಾಯ ಹೇಳುತ್ತಿದ್ದರು. ಒಂದು ಕಾಲದಲ್ಲಿ, ಪ್ರಜಾವಾಣಿ, ಸಾಪ್ತಾಹಿಕ ವಿಭಾಗದ ಮುಖ್ಯಸ್ಥರಾಗಿ, ಕನ್ನಡಕ್ಕೆ ಅನೇಕ ಸತ್ವಯುತ ಬರಹಗಾರರನ್ನು ಪರಿಚಯಿಸಿರುವ ಇವರ ಮುಂದೆ ಪ್ರಶಂಸೆಗಳಿಸುವುದೇ ನಮಗೆ ಹೆಗ್ಗಳಿಕೆಯ ಸಂಗತಿ.

ನಮ್ಮ ಬರವಣಿಗೆಯ ಜತೆ ಜತೆಗೇ, ನಮ್ಮ ವಿದ್ಯಾಭ್ಯಾಸದ ಸಂಗತಿಗಳನ್ನೂ ಕೇಳಿ ತಿಳಿಯುತ್ತಿದ್ದರು. ನನಗೆ ಪಥ್ಯವಾಗಿರುವ ವಿಷಯಗಳು, ಅದನ್ನು

ಭೋಧಿಸುವವರು ಎಲ್ಲರ ಪರಿಚಯವೂ ಅವರಿಗಿದೆ. ಹಾಗೆಯೇ ಎಲ್ಲರ ಬಗ್ಗೆಯೂ ಕಾಳಜಿಯಿಂದ ವಿಚಾರಿಸಿಕೊಳ್ಳುತ್ತಿದ್ದರು. ನಮ್ಮ ಬಳಗದ ಮಿತ್ರನೊಬ್ಬ ಮದ್ರಾಸ್‌ಗೆ ಉನ್ನತ ವ್ಯಾಸಂಗಕ್ಕೆ ತೆರಳಿದ. ಕಾರಣಾಂತರಗಳಿಂದ ಅಲ್ಲಿ ಅವನು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯ್ತು. ಅವನ ಸಮಸ್ಯೆಗಳನ್ನೆಲ್ಲ ಒಮ್ಮೆ ಬೆಂಗಳೂರಿನ ಅವರ ಕಚೇರಿಯಲ್ಲಿ ಕೇಳುತ್ತಿದ್ದವರೇ ಕ್ಷಣಕಾಲ ಮೌನವಾಗಿಬಿಟ್ಟರು. ಅವನ ಸಮಸ್ಯೆ ಪರಿಹಾರಕ್ಕೆ ಏನೆಲ್ಲಾ ತಮ್ಮ ಕೈಯಿಂದ ಮಾಡಲು ಸಾಧ್ಯವಿತ್ತೋ ಅದನ್ನೆಲ್ಲಾ ಮಾಡಿದರು. ಹಿರಿಯ ಜೀವವೊಂದು ನಮ್ಮ ಸಮಸ್ಯೆಗಳಿಗೆ ಹೀಗೆ ಸ್ಪಂದಿಸುವ ಸಂಗತಿ ನಮಗೆ ಅನೇಕ ಬಾರಿ ಅಚ್ಚರಿಯನ್ನುಂಟುಮಾಡಿದೆ.

ಅದೇ ರೀತಿ ಮತ್ತೊಬ್ಬ ಮಿತ್ರನಿಗೆ ವಿಶೇಷ ಮುತವರ್ಜಿಯಿಂದ ಹತ್ತಾರು ಸಮಸ್ಯೆಗಳಿಂದ ಪಾರಾಗುವಂತೆ ಮಾಡಿದರು. ನಮ್ಮಲ್ಲಿ ಹಲವರಿಗೆ, ಅವರೊಂದಿಗೆ ಜಗಳ ಆಡುವಷ್ಟು ಸಾಮಿಪ್ಯವಿದೆ. 'ನಾನು ನಿಮ್ಮಿಂದ ದೂರವಾಗುತ್ತೇನೆ. ನಿಮ್ಮನ್ನು ಮತ್ತೆಂದೂ ಭೇಟಿಯಾಗುವುದಿಲ್ಲ' ಎಂದು ಯಾವುದೋ ಕಾರಣಕ್ಕೆ ವೈಕುಂಠರಾಜು ಅವರಿಗೆ ಪತ್ರ ಬರೆದಿದ್ದ ಮಿತ್ರ ನಾಗರಾಜ, ಮುಂದೆ ಒಂದೇ ವಾರದಲ್ಲಿ ದೂರವಾಣಿ ಕರೆ ಮಾಡಿ, "ಕ್ಷಮಿಸಿ ಸರ್, ಐ ವಾಂಟ್ ಯುವರ್ ಫ್ರೆಂಡ್‌ಶಿಫ್" ಎಂದ. ಇಂಥವರ ಮಧ್ಯೆಯೇ, ಇವರ ಪ್ರಭಾವದಿಂದ ಒಂದಿಷ್ಟು ಲಾಭಗಳಿಸಬಹುದೇನೋ ಎಂದುಕೊಂಡು ಬಂದವರ ಗುಟ್ಟು ಬಯಲಾದದ್ದೂ ಇದೆ.

ನನ್ನ ಹಿತೈಷಿಯೊಬ್ಬರು, ಈ ಹಿಂದೆ, ಇವರ ಬಗ್ಗೆ ಮಾತನಾಡುತ್ತ, ಇವರನ್ನು 'ಯಯಾತಿ'ಗೆ ಹೋಲಿಸಿದರು. ಶುಕ್ರಾಚಾರ್ಯನ ಶಾಪದಿಂದ ವೃದ್ಧಾಪ್ಯವನ್ನು ಭರಿಸಲಾರದೆ, ಯೌವ್ವನವನ್ನೇ ಬಯಸಿ, ತನ್ನ ಮಗ ಪುರುವಿನಿಂದ ಯೌವ್ವನವನ್ನು ಎರವಲು ಪಡೆದವನು ಯಯಾತಿ. ಅದೇ ರೀತಿ ವೈಕುಂಠರಾಜು ಅವರು ಯೌವ್ವನವನ್ನು ಬಯಸದಿದ್ದರೂ ಯುವಕರ ಸಂಗದಲ್ಲಿ ಯುವಕನಾಗಿರಲು ಹಾತೊರೆಯುತ್ತಾರೆ ಎನ್ನುವ ಸಂಗತಿ ಮಾತ್ರ ಸತ್ಯ. 'ಈ ಹೊತ್ತಿನ ಯುವ ಜನಾಂಗದ ಜೊತೆ, ನಾನು ಸಂಪರ್ಕ ಇಟ್ಟುಕೊಳ್ಳದೆ ಹೋದರೆ, ಈ ಜಗತ್ತಿಗೆ ನಾನು ಔಟ್‌ಡೇಟೆಡ್ ಆಗಿಬಿಡುತ್ತೇನೆ' ಎನ್ನುತ್ತಾರೆ. ಹಾಗೆಯೇ, ಇಂದಿನ ಯುವಕರಿಂದ ದೂರವಿದ್ದು, ಇಂದಿನ ಯುವಕರ ಯಾವ ಆಲೋಚನೆಗಳಿಗೂ ಬೆಲೆಕೊಡದೆ, ಈ ಹೊತ್ತಿಗಾಗಲೇ ಔಟ್‌ಡೇಟೆಡ್ ಎನಿಸಿಕೊಂಡಿರುವ ತಮ್ಮ ಅನೇಕ ಗೆಳೆಯರ ಬಗ್ಗೆ ಅವರು ಮರುಕ ವ್ಯಕ್ತಪಡಿಸುತ್ತಾರೆ.

ನಾವೆಲ್ಲಾ ಅವರೊಂದಿಗೆ ಹರಟುವಾಗ, ಹಿರಿಯರೊಂದಿಗೆ ಹರಟುತ್ತಿದ್ದೇವೆ, ಆ ಕಾರಣ, ನಮ್ಮ ಮಾತುಗಳಿಗೆ ಸೆನ್ಸಾರ್ ಅಗತ್ಯವೆಂದು ನಾವೆಂದೂ ಭಾವಿಸಿಲ್ಲ. ಪ್ರೀತಿ, ಪ್ರೇಮ, ಸೆಕ್ಸ್ ವಿಚಾರಗಳನ್ನು ಕುರಿತಂತೆ ದಿನಗಟ್ಟಲೆ ಚರ್ಚಿಸಿದ್ದೇವೆ.

ಅವೆಲ್ಲವೂ ನಮಗೆ ಕೇವಲ ಆಕರ್ಷಣೆಯ ಸಂಗತಿಗಳಾಗದೆ, ಗಂಭೀರ ಆಲೋಚನೆ ಬೇಡುವ ವಿಚಾರಗಳಾಗಿವೆ. ನಮ್ಮ ಯಾವ ಅಭಿಪ್ರಾಯಗಳಿಗೂ ಅವರು ನಿರ್ಲಕ್ಷ್ಯ ತೋರಿಸಲಿಲ್ಲ. ಕೆಲವೊಮ್ಮೆ ಭಿನ್ನಾಭಿಪ್ರಾಯಗಳಿದ್ದರೆ, ಅಂತಹ ವಿಚಾರಗಳನ್ನು ಕೂಲಂಕಷವಾಗಿ ಚರ್ಚಿಸುತ್ತಿದ್ದೆವು. ಈ ಚರ್ಚೆಯ ಫಲವಾಗಿಯೇ ನಮ್ಮ ದೈನಿಂದಿನ ವೈಪರೀತ್ಯಗಳಿಗೆ ತಕ್ಷಣದ ಕಾರಣಗಳನ್ನು ಕಂಡುಕೊಳ್ಳುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದ್ದೇವೆ ಎನಿಸುತ್ತದೆ.

ಪತ್ರಿಕೋದ್ಯಮದಷ್ಟೇ, ಸಾಹಿತ್ಯದಲ್ಲೂ ಇವರಿಗೆ ಆಸಕ್ತಿ. ನಮ್ಮ ಇಂಗ್ಲಿಷ್ ಎಂ.ಎ. ತರಗತಿಗಳಲ್ಲಿ ಚರ್ಚೆಯಾಗುತ್ತಿದ್ದ ಅನೇಕ ಅಂಶಗಳನ್ನು ರಾತ್ರಿ ಗೆಸ್ಟ್ ಹೌಸ್‌ನಲ್ಲಿ ಮತ್ತೆ ಮತ್ತೆ ಚರ್ಚಿಸಿದ್ದೇವೆ. ಯುರಿಪಿಡೀಸ್‌ನ ಮೀಡಿಯಾ, ಮಾಡಿದ್ದು ತಪ್ಪೇ, ಸರಿಯೇ? ಸಾಫೋಕ್ಲೀಸ್‌ನ ಈಡಿಪಸ್ ಕಣ್ಣಿಗೆ ಸೂಜಿ ಚುಚ್ಚಿಕೊಂಡಿದ್ದೇಕೆ? ಯೋಕಾಸ್ಟ ಆತ್ಮಹತ್ಯೆ ಮಾಡಿಕೊಂಡದ್ದು ಸರಿಯೆ? ಅಗಮೆಮ್ನನ್ ಎಡವಿದ್ದು ಎಲ್ಲಿ? ಇಂಥ ನೂರಾರು ಪ್ರಶ್ನೆಗಳಿಗೆ ಇವರ ಸಮ್ಮುಖದಲ್ಲಿ ಉತ್ತರಕಂಡುಕೊಂಡಿದ್ದೇವೆ ಎನ್ನಬಹುದು.

## ವೈಕುಂಠರಾಜು ಅಂದರೆ...

ಹಠ, ಹಗಲು–ರಾತ್ರಿ ದುಡಿಮೆ, ಹೊಸದರೆಡೆಗೆ ತುಡಿತ, ಅಸಂಖ್ಯ ವಿವಾದಗಳು, ನೇರಮಾತು ಇವೆಲ್ಲವುಗಳ ಜೊತೆಗೆ 'ಸೀಗರೇಟಿನ ಚಟ' ಅಂಟಿಸಿ ಕೂರಿಸಿದರೆ 'ವೈಕುಂಠರಾಜು' ಎಂಬ ಮೂರ್ತಿ ರೆಡಿ!

ಬಹಳ ಕಾಲ ಇವರೊಂದಿಗೆ ಆಪ್ತರಾಗಿರುವವರು ತೀರ ವಿರಳ. ಮುಂಜಾನೆ ಇವರೊಂದಿಗೆ ಸ್ನೇಹ ಬೆಳೆಸಿದವರು ಮಧ್ಯಾಹ್ನದ ಹೊತ್ತಿಗೆ ಮೂರು ಬಾರಿ ಮುನಿಸಿಕೊಂಡಿರುತ್ತಾರೆ. ಅನೇಕ ವೇಳೆ ಕೆಲವು ವ್ಯಕ್ತಿತ್ವಗಳು ಮೊದಲ ನೋಟ ಭೇಟಿಯಲ್ಲೇ ಸರಿ ಕಾಣದಿದ್ದರೆ ಮುಲಾಜಿಲ್ಲದೆ 'ನಾಳೆಯಿಂದ ನೀನು ಇಲ್ಲಿಗೆ ಬರುವ ಅಗತ್ಯವಿಲ್ಲ' ಎಂದ ಉದಾಹರಣೆಗಳಿವೆ. ಅಂತೆಯೇ ಆಪ್ತರಾದವರನ್ನು, ಸರಿ ಎನಿಸಿದವರನ್ನು ಮಾತ್ರ ದೀರ್ಘಕಾಲ ಜೊತೆಯಲ್ಲಿಟ್ಟುಕೊಳ್ಳುವುದು ಇವರ ಸ್ವಭಾವ.

ದಿವಂಗತ ಜೀವರಾಜ್ ಆಳ್ವಾ ಇವರಿಗೆ ಶಿಷ್ಯನಂತೆ. ಏನೇ ಸಮಸ್ಯೆ ಬಂದರೂ 'ಗುರುಗಳೇ ನೀವೆ ಏನಾದ್ರೂ ಪರಿಹಾರ ಕೊಡಿ' ಅಂತ ಆಗಾಗ ಪತ್ರಿಕಾ ಕಚೇರಿಗೆ ಬರುತ್ತಿದ್ದದುಂಟು. ಅದೇ ಆಳ್ವಾ ಒಂದು ದಿನ ಅದೇ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ್ದೂ ಇತಿಹಾಸ. ಹಾಗೆ ಪ್ರತಿಭಟನೆ ನಡೆಸಿದಾಗ ಆಳ್ವಾ ಈ ರಾಜ್ಯದ ಮಂತ್ರಿ! ಅದೇನೇ ಆದರೂ ವೈಕುಂಠರಾಜು ಅವರು ಪ್ರತಿಭಟನೆಗೆ ಜಗ್ಗಲಿಲ್ಲ. ಅದು ಅವರ ಹಠ!

'ಅವರ ದೊಡ್ಡ ಶತ್ರು ಅವರಲ್ಲೇ ಗೂಡುಕಟ್ಟಿದ್ದ ಹಠ'. ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ. 'ವೈಕುಂಠರಾಜು ಹಠ ಬಿಟ್ಟಿದ್ದರೆ ಏನೇನೋ ಆಗಬಹುದಿತ್ತು' ಎಂದು ಅವರ ಆತ್ಮೀಯರೇ ಹೇಳಿದ್ದಾರೆ. ಅವರೆಲ್ಲರ ಪ್ರಕಾರ 'ಏನೇನೋ'ಎಂದರೆ ವಿಧಾನ ಪರಿಷತ್ ಸದಸ್ಯ, ಮತ್ತೆ ಮತ್ತೆ ಅಕಾಡೆಮಿಗಳ ಅಧ್ಯಕ್ಷಗಿರಿ, ಪ್ರಶಸ್ತಿಗಳು... ಹೀಗೆ ಏನೇನೋ...

ಈ ರಾಜ್ಯದ ಮುಖ್ಯಮಂತ್ರಿಯೊಬ್ಬರು ಆಪ್ತರ ಬಳಿ ಮಾತನಾಡುವಾಗ 'ವೈಕುಂಠರಾಜು ಅವರು ಒಂದ್ಸಾರೀನೂ ಬಂದು ಭೇಟಿಯಾಗೋಲ್ಲ. ಏನು ಬೇಕೂಂತ ಕೇಳೋದೇ ಇಲ್ವಲ್ಲ'! ಎಂದರಂತೆ. ಇದರರ್ಥ, ವೈಕುಂಠರಾಜು ಅವರು 'ಇತರ ಅನೇಕರಂತೆ ಓಲೈಸಬೇಕು! ಆದರೆ ವೈಕುಂಠರಾಜು ಹಾಗೆಂದೂ ಮಾಡಲಿಲ್ಲ.

ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ರಾಜು ಅವರಿಗೆ ತೀರಾ ಆಪ್ತರು, ಆ ಕಾರಣ ವೈಕುಂಠರಾಜು ಅವರನ್ನೇ ನಾಟಕ ಅಕಾಡೆಮಿ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಹೀಗೆ ಸರಕಾರದ ಸಂಸ್ಥೆಯ ಅಧಿಕಾರ ಹಿಡಿದ ಮೇಲೆ ಸರಕಾರದ ವಿರುದ್ಧ ಬರೆಯಲಾಗುವುದಿಲ್ಲ ಎಂದು ಅನೇಕರು ಭಾವಿಸಿದ್ದರು. ಆದರೆ ಆ ಹೊತ್ತಿನ ಯಾವುದೇ 'ಸಂಪಾದಕ ಡೈರಿ'ಯನ್ನು ಗಮನಿಸಿದರೂ ಈ ಮಾತಿಗೆ ಪುಷ್ಟಿ ಸಿಗುವುದಿಲ್ಲ. ವೈಕುಂಠರಾಜು ಅವರ ಎರಡನೆಯ ಮಗ ಶರತ್, ಹೆಗಡೆ ಅಭಿಮಾನಿ. ಹೆಗಡೆ ಇವರ ಮನೆಗೆ ಬಂದಾಗ, 'ಹೆಗಡೆಯವರೆ, ಇವನು ನಿಮ್ಮ ಅಭಿಮಾನಿ' ಎಂದು ಪರಿಚಯಿಸಿದಾಗ, ಹೆಗಡೆ ಪ್ರತಿಕ್ರಿಯಿಸುತ್ತಾ 'ಸದ್ಯ ಈ ಒಬ್ಬರಾದರೂ ನನ್ನ ಅಭಿಮಾನಿ ಇದ್ದಾರಲ್ಲ! ಎಂದರಂತೆ. ಕಾರಣ ವೈಕುಂಠರಾಜು, ಹೆಗಡೆ 'ವಿಮರ್ಶಕರೇ' ಹೊರತು ಅಭಿಮಾನಿ ಅಲ್ಲವಲ್ಲ! ಆ ವಿಮರ್ಶಕ ಬುದ್ಧಿ ಇಂದಿಗೂ ಮಾಸಿಲ್ಲ.

ಇವರ ಹಠ ತೀರಾ ನೆಗಟಿವ್ ಆಗಿ ಪ್ರಭಾವಬೀರಿರುವುದು ಅವರ 'ಚಟ'ದ ವಿಚಾರವಾಗಿ. ಚಟದ ಹಠದಿಂದಾಗಿಯೇ ಆರೋಗ್ಯ ಇವರ ಮೇಲೆ ಮುನಿಸಿಕೊಂಡಿದ್ದು. ಹಾಗೆ ನೋಡಿದರೆ 45 ವರ್ಷಗಳಿಂದ ಇವರೊಂದಿಗೆ ಒಮ್ಮೆಯೂ ಜಗಳವಾಡದೆ ಸಖ್ಯ ಕಾಪಾಡಿಕೊಂಡು ಬಂದದ್ದು ಸಿಗರೇಟು ಮಾತ್ರ! ಅವರ ಯುವ ಮಿತ್ರರ ಕೂಟ ಆಗಾಗ ತಮಾಷೆ ಮಡುತ್ತಾ, ಇವರು ಇದುವರೆಗೆ ಸಿಗರೇಟಿಗೆಂದೇ ಖರ್ಚುಮಾಡಿದ ಹಣದಲ್ಲಿ ಇಡೀ ಕರ್ನಾಟಕಕ್ಕೆ ವಾರಪತ್ರಿಕೆಯನ್ನು ಪುಕ್ಕಟೆಯಾಗಿ ಹಂಚಬಹುದಿತ್ತು ಎನ್ನುವುದುಂಟು.

'ಸಿಗರೇಟು ಆರೋಗ್ಯಕ್ಕೆ ಹಾನಿಕರ' ಎಂದು ಗೊತ್ತಿದ್ದೂ ಸೇದುವವರಿಗೆ 'ಬುದ್ಧಿ' ಹೇಳಲು ಸಾಧ್ಯವೇ? ಇವರ ಅಣ್ಣ ಲಿಂಗರಾಜು, ತಮ್ಮನನ್ನು ಭೇಟಿಯಾದಾಗಲೆಲ್ಲ

ತಪ್ಪದೇ ಹೇಳುತ್ತಿದ್ದ ಮಾತೇ ಅದು. ಅಣ್ಣನ ಮಾತನ್ನು ಕೇಳಿದ್ದಲ್ಲಿ? (ಸದ್ಯ ಈಸಾಲುಗಳನ್ನು ಬರೆಯುವಾಗಲೂ ವೈಕುಂಠರಾಜು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಗಾಗುತ್ತಿದ್ದಾರೆ).

ದಿನಕ್ಕೆ ಕನಿಷ್ಠವೆಂದರೂ 30ರಿಂದ 40 ಸಿಗರೇಟು ಸೇದುತ್ತಿದ್ದರೆ ದೇಹ ಸಹಿಸುವುದಾದರೂ ಹೇಗೆ? ಚಿಕಿತ್ಸಾ ಸಂದರ್ಭದಲ್ಲೂ ಅವರು ಸಿಗರೇಟು ಬಿಡಲಿಲ್ಲ. ವೈದ್ಯರು ಹೇಳಿದರೂ ಕೇಳಲಿಲ್ಲ. 'ನನಗೆ ರಿಲೀಫ್ ಕೊಡೋದು ಇದೊಂದೇ. ಹೆಚ್ಚಿಗೆ ಸಿಗರೇಟು ಸೇದಿದರೆ ಸಾವು ಬರುತ್ತಾ... ಬರಲಿ ಬಿಡು. I am ready to welcome it ಇದು ಅವರ ವರಸೆ. ಆ ಮಾತನ್ನು ಕೇಳಿ ಪಕ್ಕದವರು ಸುಧಾರಿಸಿಕೊಳ್ಳುವ ಹೊತ್ತಿಗಾಗಲೇ ಪ್ಯಾಕ್‌ನಲ್ಲಿದ್ದ ಸಿಗರೇಟು 'ಸಿಂಹಾಸನ' ಏರಿ ಹೊಗೆಯ ದರಬಾರು ನಡೆಸುತ್ತಿರುತ್ತೆ!

ರಾಜು ಅವರಿಗೆ, ಸಾವು ಅನೇಕ ಬಾರಿ ಕಾಡಿದೆ. ಸಾವಿನ ಮುನ್ನಿನ ಕ್ಷಣಗಳು, ಸಾವಿನ ನಂತರದ ಅನೂಹ್ಯ ಜಗತ್ತು ಅವರ ಬರಹದಲ್ಲೂ ಮತ್ತೆ ಮತ್ತೆ ಕಾಣಿಸಿಕೊಂಡಿದೆ. ತಮ್ಮ 'ಡೈರಿ'ಯೊಂದರಲ್ಲಿ ಇದೇ ಸಾವಿನ ಬಗ್ಗೆ ಬರೆದಿದ್ದಾರೆ. ಅವರ ಜೀವನದಲ್ಲಿ ಮುಖ್ಯವಾಗಿ ಮೂರು ಮಂದಿಯ ಸಾವು ವಿಪರೀತವಾಗಿ ಕಾಡಿದೆಯಂತೆ. ಮೊದಲನೆಯದು ಅವರ ಗುರುಗಳಾದ ಮಾನ್ಯ ಡಿ ಎಲ್ ನರಸಿಂಹಾಚಾರ್ಯರದು.

ಗುರುಗಳ ಸಾವು ತೀವ್ರ ಆಘಾತವನ್ನೇ ಸೃಷ್ಟಿಸಿತ್ತು. ಸ್ಮಶಾನದಲ್ಲಿ ದು:ಖ ತಡೆಯಲಾಗದೆ ಒಂದೇ ಸಮನೆ ಅಳುತ್ತಿದ್ದರು. ಇದನ್ನು ಕಂಡ ಪು.ತಿ. ನರಸಿಂಹಾಚಾರ್ ಅವರು ಸಮಾಧಾನ ಮಾಡುತ್ತ.. 'ನಿನ್ನ ವಿವೇಕ ಎಲ್ಲಿ ಹೋಗಿದೆ. ದು:ಖವನ್ನು ವಿವೇಕ ನಿಯಂತ್ರಿಯಸಬೇಕು. ಆದರೆ ನಿನ್ನ ದು:ಖ ವಿವೇಕವನ್ನು ನಿಯಂತ್ರಿಸುತ್ತಿದೆಯಲ್ಲ?' ಎಂದು ಪ್ರಶ್ನಿಸಿದರು. ಆ ಮಾತು ತಕ್ಷಣ ಇವರ ಅಳು ನಿಲ್ಲಿಸಿತು.

ಎರಡನೆಯದು ಅಪ್ಪ ವೆಂಕಟರಮಣಪ್ಪನವರ ಸಾವು. ಬಹುತೇಕ ಅಪ್ಪನ ವ್ಯಕ್ತಿತ್ವವೇ 'ಅಂತ್ಯ' ಕಾದಂಬರಿಯಲ್ಲಿ 'ಅಕ್ಷರ' ರೂಪ ಪಡೆದುಕೊಂಡಿದೆ. ಅಪ್ಪನದು ಛಲದ ಬದುಕು. ಚಿಕ್ಕಂದಿನಲ್ಲೇ ಅಪ್ಪ–ಅಮ್ಮಂದಿರನ್ನು ಕಳೆದುಕೊಂಡು, ತಂದೆಯ ಪ್ರೇಯಸಿಯ ಆಶ್ರಯದಲ್ಲಿ ಬೆಳೆದವರು. ಸ್ಥಿತಿವಂತರಾಗುವ ಕನಸು. ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಮತದಾರನಾಗುವ ಅರ್ಹತೆಗೆಂದೇ 25ರೂ. ಗಳ ಕಂದಾಯ ಕಟ್ಟಲು ಶ್ರಮಪಟ್ಟರು. ಅವರ ಹೋರಾಟ, ಛಲ ವೈಕುಂಠರಾಜು ಅವರ ವ್ಯಕ್ತಿತ್ವಕ್ಕೆ ಸ್ಫೂರ್ತಿ.

ಅಂತೆಯೇ ಹೆಚ್ಚು ಕಾಡುವ ಮತ್ತೊಂದು ಸಾವು 'ಮತ್ತೊಬ್ಬರದು'. ಆ ಮೂರನೇ ವ್ಯಕ್ತಿಯ ಹೆಸರು ಬಹಿರಂಗಪಡಿಸಲಿಲ್ಲ. ಆದರೆ ಆ ವ್ಯಕ್ತಿತ್ವ ಇವರ ವ್ಯಕ್ತಿತ್ವದ ಮೇಲೆ ಗಾಢ ಪರಿಣಾಮ ಬೀರಿದೆ ಎಂಬುದನ್ನು ಮಾತ್ರ ಊಹಿಸಬಹುದು.

## ವೈಕುಂಠರಾಜು ಮತ್ತು ಶಿವರಾಮ ಕಾರಂತ

ಹಂಪಿಯ ಉಗ್ರ(ಲಕ್ಷ್ಮಿ) ನರಸಿಂಹ ವಿಗ್ರಹ ವಿಚಾರವಾಗಿ ಕಾರಂತರು ನಡೆದುಕೊಂಡ ರೀತಿಯನ್ನು ವೈಕುಂಠರಾಜು ಅವರು ತರಾಟೆಗೆ ತೆಗೆದುಕೊಂಡಿದ್ದು ಐತಿಹಾಸಿಕವಾಗಿ ಮಹತ್ವದ ಘಟನೆ. ಹೊರಗಿನವರ ದಾಳಿಯಿಂದ ವಿರೂಪಗೊಂಡಿದ್ದ ವಿಗ್ರಹವನ್ನು ಮೂಲರೂಪಕ್ಕೆ ತರುವ ಕಾರ್ಯದ ಸ್ಥಗಿತಕ್ಕೆ ಕಾರಂತರು ಅಂದಿನ ಪ್ರಧಾನಿ ರಾಜೀವ ಗಾಂಧಿಗೆ ಬರೆದ ಪತ್ರವೇ ಕಾರಣವಾಗಿತ್ತು. ಕಾರಂತರಂತಹವರೇ ವಿರೋಧಿಸಿದ ಮೇಲೆ ಮತ್ತಾರನ್ನು ಕೇಳುವುದೆಂದು ರಾಜೀವ್ ಗಾಂಧಿ ಏಕಾಏಕಿ ಕಾರ್ಯಕ್ಕೆ ತಡೆ ಆಜ್ಞೆ ಹೊರಡಿಸಿದ್ದರು.

ಆದರೆ ಕಾರಂತರದು ಆತುರದ ನಿರ್ಧಾರವಾಗಿತ್ತು. ಕಾರಂತರ ಆಲೋಚನೆಯನ್ನು ಅಮೂಲಗ್ರವಾಗಿ ಟೀಕಿಸಿದ್ದು ವೈಕುಂಠರಾಜು ಅವರ 'ಸಂಪಾದಕರ ಡೈರಿ'. ಮೊದಲನೆಯದಾಗಿ ಕಾರಂತರು ಆ ವಿಗ್ರಹವನ್ನು ಉಗ್ರನರಸಿಂಹ ವಿಗ್ರಹವೆಂದು ತಪ್ಪಾಗಿ ಅರ್ಥೈಸಿದ್ದರು. ತೊಡೆಯ ಮೇಲೆ ಲಕ್ಷ್ಮಿಯನ್ನು ಕೂರಿಸಿಕೊಂಡಿರುವ ನರಸಿಂಹ ಲಕ್ಷ್ಮಿ ನರಸಿಂಹನಾಗದೆ, ಉಗ್ರನರಸಿಂಹ, ಹೇಗಾದಾನು?

ಎರಡನೆಯದಾಗಿ, ಕಾರಂತರು ಪುನರುತ್ಥಾನ ಕಾರ್ಯದ ರೂಪರೇಷೆಯ ಕಡೆ ತೀವ್ರ ಗಮನ ಹರಿಸಿರಲಿಲ್ಲ. ಅವರು 'ಪುರಾತತ್ವ ಇಲಾಖೆಯವರಿಗೆ ಸೌಂದರ್ಯ ಪ್ರಜ್ಞೆಯೇ ಇಲ್ಲ. ವಿಗ್ರಹದ ಮೂಲ ಸ್ವರೂಪವನ್ನು ಹಾಳುಮಾಡುವ ಅಧಿಕಾರವಿಲ್ಲ' ಎಂದು ಟೀಕಿಸಿದ್ದರು. ಆದರೆ, ಇಲಾಖೆಯ ಪದ್ಮನಾಭನ್, ಅಂತಾರಾಷ್ಟ್ರೀಯ ಖ್ಯಾತಿಯ ಶಿಲ್ಪ ಶಾಸ್ತ್ರಜ್ಞರು. ಯಾವುದೇ ಬೃಹತ್ ಶಿಲ್ಪ ಕೆತ್ತುವ ಮುನ್ನ ಶಿಲ್ಪಿ ಸಣ್ಣ ಶಿಲೆಯ ಮೇಲೆ ತನ್ನ ಉದ್ದೇಶಿತ ರೂಪದ ಮೂರ್ತಿಯನ್ನು ಕೆತ್ತಿಕೊಂಡು ನಂತರ ಬೃಹತ್ ಬಂಡೆಗೆ ಕೈ ಹಾಕುತ್ತಾನೆ. ಪದ್ಮನಾಭನ್ ತಂಡ ಹಂಪಿಯ ಸುತ್ತಮುತ್ತಲೆಲ್ಲ ತಿಂಗಳು ಗಟ್ಟಲೆ ಅಲೆದು ಮೂಲ ಸ್ವರೂಪದ ಪುಟ್ಟ ಶಿಲ್ಪ ಹುಡುಕಿದ್ದರು. ಅದರ ಆಧಾರದ ಮೇಲೆ ಬೃಹತ್ ಶಿಲ್ಪದ ಕಾರ್ಯ ನಡೆಯುತ್ತಿದೆ. ಕಾರಂತರ ಏಕಾಏಕಿ ನಿರ್ಧಾರದಿಂದ ಶಿಲ್ಪಿಗಳ ಶ್ರಮವೆಲ್ಲ ತುಂಗಭದ್ರೆಯಲ್ಲೇ ವ್ಯರ್ಥವಾಯಿತು.

ಜಗತ್ತಿನ ಬೇರೆಡೆಯೆಲ್ಲ ಯಶಸ್ವಿಯಾಗಿ ಇಂತಹ ಕಾರ್ಯಗಳು ನಡೆದಿವೆ. ಆದರೆ ಹಂಪಿಯಲ್ಲೇ ಆಗಲಿಲ್ಲ.

ರಾಜು ಅವರು ಕಾರಂತರ ಆಲೋಚನೆಯನ್ನು ವಿರೋಧಿಸಿ ಬರೆದಿರುವ ಸರಣಿ ಪತ್ರಗಳು ಪುರಾತತ್ವ ಇಲಾಖೆಯ ಕಾರ್ಯ ಶೈಲಿಯನ್ನೇ ತೆರೆದಿಡುತ್ತವೆ. ಮೂಲ ರೂಪಕ್ಕೆ ರೂಪಾಂತರಿಸುವ ಅನೇಕ ಪ್ರಯೋಗಗಳ ಉದಾಹರಣೆಗಳಿವೆ. ಕಾರಂತರಷ್ಟೇ ಅಲ್ಲದೆ ಎಂಥವರೂ ಇವರ ವಾದ ವೈಖರಿಗೆ ಮೆಚ್ಚಲೇಬೇಕು. ಕಾರಂತರು ಕೊನೆಗೆ ಮಣಿಯದುದಕ್ಕೆ ಅವರು 'ಬಿಗುಮಾನ'ವೇ ಕಾರಣ ಎನ್ನುವುದು ಅನೇಕರ ಊಹೆ.

ರಾಜು ಅವರ ಬರಹದ ಮೊನಚು, ತಲಸ್ಪರ್ಶಿ ಅಧ್ಯಯನ ಇಂತಹ ಪತ್ರಗಳಲ್ಲಿ ಕಂಡು ಬರುತ್ತದೆ.

## ಬಿ.ವಿ.ವಿ. ಅವರ ಕಾದಂಬರಿಗಳು: ಅಂತ್ಯ

ಇದನ್ನು ವೈಕುಂಠರಾಜು ಅವರ ಸ್ವಾನುಭವದ ಕತೆ ಅನ್ನುಬಹುದು. ಕಾಂದಬರಿಯ ನಿರೂಪಣೆಯೂ ಈ ಮಾತಿಗೆ ಪುಷ್ಟಿ ಕೊಡುತ್ತದೆ.

ನಿರೂಪಕ ತನ್ನ ತಂದೆಯ ಕೊನೆ ದಿನಗಳನ್ನು ವಿವರಿಸುತ್ತಾನೆ. ಅದರೊಂದಿಗೆ ಸಾವಿನ ಬಗೆಗಿರುವ ಕಲ್ಪನೆಗಳು ಇಲ್ಲಿ ಅನಾವರಣಗೊಳ್ಳುತ್ತವೆ. ಪುಟ್ಟ ಕಾದಂಬರಿ ನಿರೂಪಣೆಯಲ್ಲಿನ ಲಯ ಎಲ್ಲಿಯೂ ತಪ್ಪಿ ಹೋಗುವುದಿಲ್ಲ. ಇದ್ದಕ್ಕಿದ್ದಂತೆ ಯಾವುದೂ ಘಟಿಸುವುದಿಲ್ಲ. ಅಬ್ಬರಗಳ ಸೊಲ್ಲೇ ಇಲ್ಲ. ಪುಷ್‌ಪುಲ್ ರೈಲ್‌ನಂತೆ ಸರಾಗ ಮತ್ತು ನಿಧಾನ. ಅಂತ್ಯದಲ್ಲಿ ಅವ್ವ ತೀರಿಕೊಂಡಾಗಲೂ, ಅದು ಮೊದಲೇ ಸೂಚಿತವಾಗಿರುವುದರಿಂದ ಅಚ್ಚರಿ ಮೂಡಿಸುವುದಿಲ್ಲ.

ಕಾದಂಬರಿಯ ಹೆಗ್ಗಳಿಕೆ ಅಡಗಿರುವುದೇ ಸಾವಿನ ಸುತ್ತಲ ವಾತಾವರಣದ ಚಿತ್ರಣದಲ್ಲಿ. ಆಸ್ಪತ್ರೆಯಲ್ಲಿ, ಹುಟ್ಟಿದ್ದಕ್ಕೆ ಸಂಭ್ರಮಗಳಿಲ್ಲ. ಸತ್ತದಕ್ಕೆ ರೋದನವಿಲ್ಲ. ಅಲ್ಲಿಯವರಿಗೆಲ್ಲ ಅದು ತೀರಾ ಸಲೀಸು. ಆದರೆ ಕೆಲವೇ ದಿನಗಳಲ್ಲೇ ಒಂದು ವಾರ್ಡ್‌ನಲ್ಲಿ ಪುಟ್ಟದೊಂದು ಜಗತ್ತು ಜನ್ಮತಾಳಿರುತ್ತೆ. ಎಲ್ಲಿಂದಲೋ ಬಂದವರು ಆತ್ಮೀಯರಾಗಿಬಿಡುತ್ತಾರೆ. ಹಲವು ವರ್ಷಗಳ ನಂಟೇನೋ ಎಂಬಂತೆ ಹೊಂದಿಕೊಂಡು ಬಿಡುತ್ತಾರೆ.

ಬೇರೆ ಬೇರೆ ಕಾರಣಗಳಿಂದ ಆಸ್ಪತ್ರೆ ಹಾಸಿಗೆ ಹಿಡಿದಿರುವ ಜಗನ್ನಾಥ, ವಿರೂಪಾಕ್ಷಪ್ಪ, ಗಂಗಜ್ಜ ಎಲ್ಲರೂ ಒಂದೊಂದು ಕತೆ ಹೇಳುತ್ತಾರೆ. ಇವರೆಲ್ಲರ ಮಧ್ಯೆ 'ಲವಲವಿಕೆ'ಯಿಂದ ಓಡಾಡಿಕೊಂಡಿರುವ ರಾಧ ಎಂಬ ನರ್ಸ್. ಕೇವಲ ನರ್ಸ್ ಆಗಿಯೇ ಒಂದು ನರ್ಸಿಂಗ್ ಹೋಂ ನಡೆಸುವ ಕನಸು ಹೊತ್ತವಳು. ರೋಗಿಗಳ ಕಣ್ಣಲ್ಲಿ ಅವಳು 'ಭಾರಿ ಕಿಲಾಡಿ!

ನಿರೂಪಕ ಪಾತ್ರ ಸೇರಿದಂತೆ ಎಲ್ಲರಿಗೂ ಅಪ್ಪ ಬದುಕಲಾರ ಎಂಬ ಸತ್ಯದ

ಅರಿವಿದ್ದರೂ 'ಊಹಿಸಲಾರದ್ದೊಂದು ಸಂಭವಿಸಿ ಅಪ್ಪ ಬದುಕಿಬಿಟ್ಟರೆ! ಎಂದು ಆಲೋಚಿಸತ್ತಲೇ ಇರುತ್ತಾರೆ. ಇದರೊಟ್ಟಿಗೆ ಅಪ್ಪ ಕನಸುಕಾಣುತ್ತಿದ್ದ ತೋಟ, ಗದ್ದೆ ಎಲ್ಲವೂ ನಿರೂಪಕನನ್ನು ಕಾಡುತ್ತವೆ.

ಅಂತ್ಯದಲ್ಲಿ ಅಪ್ಪ ತೀರಿಕೊಳ್ಳುತ್ತಾರೆ. ಅಮ್ಮನನ್ನು ಸಮಾಧಾನಿಸಲಾಗುವುದಿಲ್ಲ. 'ಅಪ್ಪ ಕೂಡ ಸಿಗರೇಟಿನಂತೆಯೇ ಉರಿದು ಬೂದಿಯಾದಾಗ, ಬಾವಿಯಲ್ಲಿ ಮುಳಿಗಿ ಮರಳಿದಾಗ ಮನೆಯಲ್ಲಿ ಅಮ್ಮ ಅತ್ತು ಅತ್ತು ಕುಳಿತಲ್ಲಿಯೇ ನೆಲಕ್ಕೆ ಒರಗಿದ್ದರು.' ನಿರೂಪಕ ಅಪ್ಪನ ಸಾವನ್ನು, ಅಂತ್ಯಕ್ರಿಯೆಯನ್ನು ಸುಟ್ಟುಹೋಗುವ ಸಿಗರೇಟಿಗೆ ಹೋಲಿಸುವ ಮೂಲಕ 'ಬದುಕು-ನಶ್ವರ ಎಂದ ಹೇಳುತ್ತಿದ್ದಾನೆ ಎನ್ನಬಹುದು.

ಅದೇ ಹೊತ್ತಿಗೆ ಮನೆಯಲ್ಲಿ ಸ್ಮಶಾನ ಮೌನ. ನಿರೂಪಕನೇ ಹೇಳುವಂತೆ ಸ್ಮಶಾನದಲ್ಲೂ ಅಷ್ಟು ಭೀಕರ ಮೌನವಿರಲಿಲ್ಲ. 'ಇಲ್ಲಿ ಮೌನ ಹೆಪ್ಪುಗಟ್ಟಿತ್ತು. ಅಮ್ಮನಾದರೂ ಅತ್ತು ಮೌನವನ್ನು ಮುರಿಯಬಾರದೆ ಎನಿಸಿತು' ಎನ್ನುವುದರೊಂದಿಗೆ ಕಾದಂಬರಿ 'ಅಂತ್ಯ' ಕಾಣುತ್ತದೆ.

**ಪರ್ಯಟನ:**

ಈ ಕಾದಂಬರಿಯ ಮುಖ್ಯ ಪಾತ್ರ ಕೃಷ್ಣೋಜಿರಾವ್. ಸಾಲಗಾರರ ಕಾಟ ತಡೆಯಲಾರದೆ ಮನೆ, ಮಡದಿ, ಮಕ್ಕಳನ್ನು ಬಿಟ್ಟು ಅಲೆಯುವುದೇ ಈ ಕಾದಂಬರಿಯ ಮುಖ್ಯ ವಸ್ತು. ಅದಕ್ಕೆ ಶೀರ್ಷಿಕೆ ಸೂಕ್ತವಾಗಿದೆ.

ಹಾಗಂತ ಇದು ಕೇವಲ ಭೌತಿಕ ಪರ್ಯಟನೆಯಾಗೇ ಉಳಿದಿಲ್ಲ. ಕ್ಷತ್ರಿಯನಾಗಿದ್ದ ಕೃಷ್ಣೋಜಿರಾವ್ ಬ್ರಾಹ್ಮಣನಾಗಿ ರೂಪಾಂತರ ಹೊಂದುತ್ತಾನೆ. ರೈಲ್ವೇ ಇಲಾಖೆಯಲ್ಲಿ ಸಾಮಾನ್ಯ ನೌಕರಿಯಲ್ಲಿದ್ದವ, ದೆಹಲಿಯಲ್ಲಿ ತಿಥಿ, ಶ್ರಾದ್ಧದಂತಹ ಕರ್ಮಗಳನ್ನು ಮಾಡಿಸುವ ವಾದ್ಯಾರ್ ಆಗಿ ಪರಿವರ್ತನೆಗೊಳ್ಳುತ್ತಾನೆ, ಸನ್ಯಾಸಿಯಾಗಿ ಅಲೆಯುತ್ತಾನೆ, ಭಿಕ್ಷುಕನಾಗಿ ಬೀದಿಬೀದಿ ಅಲೆದು ಒಂದು ಹಿಡಿ ಅನ್ನಕ್ಕಾಗಿ ಪರಿತಪಿಸುತ್ತಾನೆ. ಈ ಮಧ್ಯೆ ಮಹಿಳೆಯೊಬ್ಬಳ ಮೋಹಕ್ಕೆ ಬಲಿಯಾಗುತ್ತಾನೆ, ಈ ಎಲ್ಲಾ ಕಾರಣಗಳಿಗೆ ಇದು 'ಪರ್ಯಟನ !

ಕೃಷ್ಣೋಜಿರಾವ್ ಎಂಬ ಕ್ಷತ್ರಿಯ, ಕೃಷ್ಣಶಾಸ್ತ್ರಿಯಾಗಿ ರೂಪಾಂತರ ಹೊಂದಿದ್ದು ಕಾದಂಬರಿಯ ಓದಿನಲ್ಲಿ ಯಾವ ಅಚ್ಚರಿಯನ್ನೂ ಮೂಡಿಸುವುದಿಲ್ಲ. ಹಾಗೆ ನೋಡಿದರೆ ಆ ಸಂದರ್ಭದಲ್ಲಿ ಯಾವುದೇ ಬ್ರಾಹ್ಮಣನಿಗಿಂತ ಹೆಚ್ಚಿನ ಆತಂಕಕ್ಕೊಳಗಾಗುವುದು ಕೃಷ್ಣೋಜಿರಾವ್. ಬ್ರಾಹ್ಮಣರೇ ರೂಪಾಂತರಕ್ಕೆ ಹುರಿದುಂಬಿಸುತ್ತಾರೆ. ಹಗಲು-ರಾತ್ರಿ ಶ್ರಮಪಟ್ಟು ವೇದಗಳಲ್ಲಿ ಪಾಂಡಿತ್ಯ ಗಳಿಸುತ್ತಾನೆ. ಜನ್ಮಾರಭ್ಯ ಬ್ರಾಹ್ಮಣನಿಗಿಂತ, ಕಟ್ಟುನಿಟ್ಟಾಗಿ ಬ್ರಾಹ್ಮಣ್ಯ ಪಾಲಿಸುತ್ತಾನೆ. ಮೊದ

ಮೊದಲು ಯಾರೇ ಬಂದು ಅವನ ಕಾಲಿಗೆ ನಮಸ್ಕರಿಸುವಾಗ ಇವನು ಆಶೀರ್ವಾದ ಮಾಡುತ್ತಿರಲಿಲ್ಲ. ಕಾರಣ ಅವನಿಗೆ ಪಾಪಪ್ರಜ್ಞೆ ಕಾಡುತ್ತಿತ್ತು. 'ನಾನು ನಿಜವಾಗಿಯೂ ಮತ್ತೊಬ್ಬರಿಗೆ ಆಶೀರ್ವದಿಸುವಷ್ಟು ಯೋಗ್ಯನೆ?' ಎಂದು ತನ್ನನ್ನೇ ಮತ್ತೆ ಮತ್ತೆ ಪ್ರಶ್ನಿಸಿಕೊಳ್ಳುತ್ತಿದ್ದ.

ಮೂಲತಃ ಕೃಷ್ಣೋಜಿಯಲ್ಲಿ ಅನೇಕ ಪ್ರತಿಭೆಗಳಿದ್ದವು. ಅದರಲ್ಲೂ ಮುಖ್ಯವಾಗಿ ಸಂಘಟಿಸುವ ಮತ್ತು ಮಾತನಾಡುವ ನೈಪುಣ್ಯ. ಇವೆಲ್ಲ ಹೊರಹೊಮ್ಮಿದ್ದು, ಅವನು ಮನೆ ಬಿಟ್ಟು ಹೊರ ಹೊರಟ ಮೇಲೆಯೇ. ಮಹಾರಾಷ್ಟ್ರದಲ್ಲಿ ಮರಾಠಾ ಸಭಾದ ಸಂಘಟನೆಗೆ ಶ್ರಮಿಸುತ್ತಾನೆ. ಅವನ ಕಾರ್ಯದಲ್ಲಿ ಭಾರೀ ಯಶಸ್ಸು ಕಾಣುತ್ತಾನೆ. ಹಾಗೆ ಹಣವನ್ನೂ ಲಪಟಾಯಿಸುತ್ತಾನೆ. ಬ್ರಾಹ್ಮಣನಾಗಿ ಯಶಸ್ವಿಯಾಗುತ್ತಾನೆ. ಅದಕ್ಕೂ ಮುನ್ನ ಲೆಕ್ಕಾಧಿಕಾರಿಯಾಗಿ ಪ್ರತಿಭೆ ತೋರಿಸುತ್ತಾನೆ. ಟೂರಿಸ್ಟ್ ಗೈಡ್ ಆಗಿ ಪ್ರವಾಸಿಗರು ಮಂತ್ರಮುಗ್ಧರಾಗುವಂತೆ ವಿಶ್ಲೇಷಣೆ ನೀಡಬಲ್ಲ. ಮುಂದೆ ಚಪ್ಪಲಿ ಕಾಯುತ್ತಾನೆ. ಭಿಕ್ಷೆ ಬೇಡುತ್ತಾನೆ. ಮನುಷ್ಯನೊಬ್ಬ ಅನುಭವಿಸಬಹುದಾದದ್ದನ್ನೆಲ್ಲ ಅನುಭವಿಸಿಯೇ ತೀರುತ್ತಾನೆ. ಅವನ ಹಾದಿಯಲ್ಲಿ ಅನುಭವಿಸಿದ ಅವಮಾನಗಳೇ ನೂರಾರು. ಈ ಮಧ್ಯೆ ಮಹಿಳೆಯೊಬ್ಬಳ ಆಕರ್ಷಣೆ. ಅವಳನ್ನು ಮೋಹಿಸಲು ಬಯಸದ ಕಾರಣಕ್ಕೆ ಮುಂದೆ ಅವಳಿಂದ ಮೂದಲಿಕೆಯನ್ನೂ ಸಹಿಸಿಕೊಳ್ಳುತ್ತಾನೆ.

ಇಷ್ಟೆಲ್ಲಾ ಆದನಂತರ ಮನೆಯ ನೆನಪು. ಮನೆ ಹುಡುಕಿ ಮಗನನ್ನು ಸೇರುತ್ತಾನೆ. ಜಂಗಮನಾಗಿದ್ದವನಿಗೆ ಒಮ್ಮೆಲೇ ಜಡವಾದಂತೆನಿಸಿ ಅಲ್ಲಿಂದಲೂ ಕಾಲ್ಕೀಳುವುದೇ ಕತೆಯ ಅಂತ್ಯ.

## ಸನ್ನಿವೇಶ :

ಇದೊಂದು ಪತ್ರಕರ್ತನ ಕತೆ. ಸಮಾಜದಲ್ಲಿ ಬೇರು ಬಿಟ್ಟಿರುವ ವೇಶ್ಯಾವಾಟಿಕೆಯಂಥ ಪಿಡುಗನ್ನು ಅಂತ್ಯಗೊಳಿಸಬೇಕೆಂದು ಹೊರಟವನು. ವೇಶ್ಯೆಯೊಬ್ಬಳನ್ನು ಮದುವೆಯಾಗಿ ಸಮಾಜದಲ್ಲೇನೋ ಒಂದು ಕ್ರಾಂತಿ ಮಾಡಿದೆ ಎಂಬಂತೆ ಬೀಗುತ್ತಾನೆ. ಕೆಲವೇ ದಿನಗಳಲ್ಲಿ ಅವನಿಗೆ ಸಂಶಯದ ಭೂತ ಕಾಡುತ್ತದೆ. ಅವನ ಪತ್ನಿ ಮತ್ತೆ ವೇಶ್ಯಾವಾಟಿಕೆಗೆ ಮರಳುತ್ತಾಳೆ. ಅವಳಿಗೆ ಅಲ್ಲಿಯೇ ನೆಮ್ಮದಿ ಇದೆ!

ಜಯಂತ್ ಎಂಬ ಪತ್ರಕರ್ತ ತನ್ನ ವಕೀಲ ಮಿತ್ರ ಕೇಶವ್ ಮೂಲಕ ರಂಗಮ್ಮನ ವೇಶ್ಯಾಗೃಹವನ್ನು ಪ್ರವೇಶಿಸುತ್ತಾನೆ. ವೇಶ್ಯೆಯರ ಕಷ್ಟ ನಷ್ಟಗಳ ಬಗ್ಗೆ ಲೇಖನ ಬರೆಯಬೇಕೆಂಬ ಉದ್ದೇಶದಿಂದ ಅಲ್ಲಿ ಎಲ್ಲರನ್ನೂ ಮಾತನಾಡಿಸುತ್ತಾನೆ. ಆ ಸಂದರ್ಭದಲ್ಲಿ ಬೇಬಿ 'ಇಂತಹ ಪಾಪ ಕೂಪದಿಂದ ನಮ್ಮನ್ನು

ಪಾರುಮಾಡಬೇಕೆಂದರೆ, ನಮ್ಮಲ್ಲೇ ಯಾರನ್ನಾದರೂ ಮದುವೆಯಾಗಬಹುದಲ್ಲಾ?' ಎಂಬ ಪ್ರಶ್ನೆ ಹಾಕುತ್ತಾಳೆ. ಅದೇ ಪ್ರಶ್ನೆಯನ್ನು ತನ್ನ ಲೇಖನದಲ್ಲೂ ಸೇರಿಸಿ ಪ್ರಕಟಿಸುತ್ತಾನೆ. ಮಾರನೇ ದಿನ ಅವನ ವೃತ್ತಿ ಬಾಂಧವರೆಲ್ಲಾ, ಜಯಂತನೇ ಯಾಕೆ ಮದುವೆಯಾಗಬಾರದು? ಎಂದು ಪ್ರಶ್ನಿಸುತ್ತಾರೆ. ಈ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡ ಜಯಂತ್, ಬೇಬಿಯನ್ನೇ ಮದುವೆಯಾಗಲು ನಿರ್ಧರಿಸುತ್ತಾನೆ. ಬೇಬಿ, ಮದುವೆಗೆ ಒಪ್ಪುವ ಮುನ್ನ 'ಕೇವಲ ಸವಾಲಿಗಾಗಿ ಮದುವೆಯಾಗುವುದು ಬೇಡ' ಎನ್ನುತ್ತಾಳೆ. ಆದರೂ ತಾನು ಪ್ರಗತಿಶೀಲ, ರ್‍ಯಾಡಿಕಲ್ ಎಂದೆಲ್ಲಾ ಮುಖವಾಡ ಹೊತ್ತಿದ್ದ ಜಯಂತ್ ಮದುವೆಯಾಗುತ್ತಾನೆ.

ಮದುವೆಯ ಕೆಲವೇ ದಿನಗಳ ನಂತರ, ಜಯಂತ್‌ನಲ್ಲಿ ಸಂಶಯದ ಬೀಜ ಮೊಳಕೆಯೊಡೆಯುತ್ತದೆ. ಅವಳನ್ನು ಆಗಾಗ ಬಂದು ಭೇಟಿಯಾಗುತ್ತಿದ್ದ, ವೇಶ್ಯಾಗೃಹದ ನಾರಾಯಣ, ಶಕುಂತಲರ ಮೇಲೂ ಇವನಿಗೆ ಅನುಮಾನ ಆರಂಭವಾಗುತ್ತದೆ. ಈ ಮಧ್ಯೆ, ಇವನ ವೃತ್ತಿ ಬಾಂಧವರೂ, ಇವನನ್ನು ಗೇಲಿಮಾಡುತ್ತಾರೆ. ಜಯಂತ್ ಅವಳನ್ನು ಮತ್ತದೇ ಕಾಯಕಕ್ಕೆ ದೂಡಿ ಸಾಕಷ್ಟು ಹಣ ಸಂಪಾದಿಸುತ್ತಿದ್ದಾನೆ ಎಂಬ ಟೀಕೆಯೂ ಇವನ ಮೇಲೆ ಬರುತ್ತದೆ. ಬೀದಿಯ ಜನ, ಬೇಬಿಯ ಬಗ್ಗೆ ನಾನಾರೀತಿಯಲ್ಲಿ ಮಾತನಾಡಿಕೊಳ್ಳುತ್ತಾರೆ. ಇದನ್ನೆಲ್ಲಾ ಸಹಿಸಲಾರದೆ, ಜಯಂತ್ ಹೆಚ್ಚೆಚ್ಚು ಕಾಲ ಬಾರ್‌ನಲ್ಲಿ ಕಳೆಯಲಾರಂಭಿಸುತ್ತಾನೆ. ಕ್ರಮೇಣ ಬೆಲೆವೆಣ್ಣುಗಳ ಸಹವಾಸಕ್ಕೂ ಗಂಟು ಬೀಳುತ್ತಾನೆ! ಇದೆಲ್ಲದರಿಂದ ಬೇಸತ್ತ 'ಬೇಬಿ', ಜಯಂತನ ಪೊಳ್ಳು ವಿಚಾರವಾದಿತನವನ್ನು ಟೀಕಿಸಿ, ಮತ್ತೆ ರಂಗಮ್ಮನ ಮನೆಗೆ ಮರಳುತ್ತಾಳೆ. ಇದೇ ಸನ್ನಿವೇಶದ ಕತೆ.

ಈ ನಾಟಕ, ಅನೇಕ ಯಶಸ್ವೀ ಪ್ರದರ್ಶನಗಳನ್ನು ಕಂಡಿದೆ. ಪತ್ರಕರ್ತ ಯಾವುದೇ ಕೆಲಸ ನಿರ್ವಹಿಸಿದರೂ ಅಲ್ಲಿ ಆತನ 'ಪತ್ರಕರ್ತ ಮನಸ್ಸು' ತನ್ನ ಛಾಪನ್ನು ಮೂಡಿಸದೆ ಬಿಡುವುದಿಲ್ಲ. ವೈಕುಂಠರಾಜು ಅವರು ತಮ್ಮ ನಾಟಕದಲ್ಲಿ ಪತ್ರಕರ್ತನೊಬ್ಬನನ್ನು ಮುಖ್ಯ ಪಾತ್ರವನ್ನಾಗಿಸಿ, ಹಲವು ವಿಚಾರವಾದಿಗಳ ಪೊಳ್ಳುತನವನ್ನು, ಒಬ್ಬ ಅಪ್ಪಟ ಪತ್ರಕರ್ತನಂತೆ ಬಯಲು ಮಾಡಿದ್ದಾರೆ.

ಇಲ್ಲಿ ಜಯಂತ, ಬೇಬಿಯನ್ನು ಮದುವೆಯಾಗಿದ್ದು, ಅವನಿಗೆ ಅವಳ ಮೇಲಿದ್ದ ಪ್ರೀತಿಯಿಂದಲ್ಲ. ಬದಲಿಗೆ ಸಮಾಜದಲ್ಲಿನ ಮನ್ನಣೆಗಾಗಿ. ತಾನು ರ್‍ಯಾಡಿಕಲ್, ಪ್ರೋಗ್ರೆಸಿವ್ ಅಂತೆಲ್ಲಾ ಜನ ತಿಳಿಯಲಿ ಎಂಬ ಗುರಿಗಳನ್ನಿಟ್ಟುಕೊಂಡು ಅವನು ಮದುವೆಯಾಗುತ್ತಾನೆ. ಮದುವೆಯಾದ ನಂತರ, ಸಮಾಜದಿಂದ ಬರುವ ಪ್ರತಿಕ್ರಿಯೆಗಳನ್ನು ಎದುರಿಸುವ ಸ್ಥೈರ್ಯವಾಗಲಿ, ಆರೋಪಗಳನ್ನು ಪರಿಶೀಲಿಸುವ ತಾಳ್ಮೆಯಾಗಲೀ ಅವನಲ್ಲಿ ಇರುವುದಿಲ್ಲ. ಮುಖ್ಯವಾಗಿ ಅವನ ವ್ಯಕ್ತಿತ್ವವೇ ಢೋಂಗಿ.

ಒಮ್ಮೆ ಮೂಢನಂಬಿಕೆಗಳನ್ನು ಟೀಕಿಸಿ ಮಾತನಾಡುವವನು, ಮತ್ತೊಮ್ಮೆ, ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕವನ್ನು ರಸವತ್ತಾಗಿ ಪತ್ರಿಕೆಗೆ ವರದಿ ಮಾಡುತ್ತಾನೆ.

ನಾಟಕದಲ್ಲಿ, ಬೇಬಿಯದು ಗಟ್ಟಿ ಪಾತ್ರ. ರಂಗಮ್ಮನ ಮನೆಯಲ್ಲಿ ಸಾಕಷ್ಟು ಆದಾಯ ತರುವ ಹುಡುಗಿಯೇ ಆಗಿದ್ದರೂ, ಜಯಂತನ ಕೋರಿಕೆ ಮನ್ನಿಸಿ ಮದುವೆಯಾಗುತ್ತಾಳೆ. ಮದುವೆಯ ಮೂಲಕವಾದರೂ ಉತ್ತಮ ಜೀವನ ನಡೆಸಬೇಕೆಂಬ ಕನಸು ಅವಳದು. ಅದೇ ಕಾರಣಕ್ಕೆ ಕೇವಲ ಸವಾಲಿಗೆ ಮದುವೆಯಾಗುವುದಾದರೆ ಬೇಡ ಎಂದು ಮೊದಲೇ ಹೇಳಿರುತ್ತಾಳೆ.

ಮದುವೆಯಾದ ಮೇಲೆ, ಸಹಜವಾಗಿ ಅವಳಿಗೆ ತನ್ನ ಗೆಳತಿ ಶಕುಂತಲೆಯನ್ನಾಗಲಿ, ಹಿತೈಷಿ ನಾರಾಯಣಪ್ಪನನ್ನಾಗಲಿ ಮರೆಯಲಾಗುವುದಿಲ್ಲ. ಅವರು ಮನೆಗೆ ಬಂದಾಗೆಲ್ಲ ಚೆನ್ನಾಗೇ ಉಪಚರಿಸುತ್ತಾಳೆ. ಇದೇ ನಂತರ ನಾಟಕದ ತಿರುವಿಗೆ ಕಾರಣವಾಗುತ್ತದೆ. ಅವಳು ಮತ್ತೆ ವೇಶ್ಯಾಗೃಹಕ್ಕೆ ಮರಳುವ ಮುನ್ನ ಜಯಂತನನ್ನು, ಅವನ ಢೋಂಗಿ ಪ್ರಗತಿಶೀಲತೆಯನ್ನು ಟೀಕಿಸುತ್ತಾಳೆ.

ವಿಶಿಷ್ಟವೆಂದರೆ, ಬೇಬಿಯ ಮೇಲೆ ಅನುಮಾನ ಪಡುವ ಜಯಂತ, ತಾನೂ ವೇಶ್ಯೆಯರ ಸಹವಾಸ ಮಾಡುವುದು! ಬೇಬಿ ಮಾಡಿದರೆ ಮಾತ್ರ ಅದು ವೇಶ್ಯಾವಾಟಿಕೆ, ಅದನ್ನೇ ಜಯಂತ ಮಾಡಿದರೆ? ಹಾಗೆಯೇ ಜಯಂತ ಈ ನಡಾವಳಿಗಳನ್ನು ಮೂದಲಿಸುವವರು ಸಮಾಜದಲ್ಲಿ ಯಾರೂ ಇಲ್ಲ. ಎಲ್ಲರೂ ಬೇಬಿಯನ್ನು ಟೀಕಿಸುವವರೇ. ಈ ತಾರತಮ್ಯ ಏಕೆ? ಇಂತಹ ಅನೇಕ ಪ್ರಶ್ನೆಗಳನ್ನು ಈ ನಾಟಕ ಎತ್ತುತ್ತದೆ.

ನಾಟಕಕಾರ, ಇಲ್ಲಿಯ ಮಾತುಗಳಿಗೆ ಚುರುಕು ಮೂಡಿಸಿದ್ದಾರೆ. ಕೆಲವು ಮಾತುಗಳಲ್ಲಿ ವ್ಯಂಗ್ಯವನ್ನೂ ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ. ಗಾಂಧಿಯನ್ನು ಉದ್ಧರಿಸುವ ಪತ್ರಕರ್ತ, ಮಧ್ಯೆ ಸಣ್ಣದೊಂದು ಬ್ರೇಕ್ ತಗೊಂಡು, ಒಂದು ಸಿಪ್ ಹೆಂಡಸೇವಿಸಿ, ಗಾಂಧಿಯ ಮಾತು ಮುಂದುವರಿಸುತ್ತಾನೆ. ಇಂತಹ ವ್ಯಂಗ್ಯಗಳನ್ನು ಅಲ್ಲಲ್ಲಿ ಕಾಣಬಹುದು.

ನಾಟಕದ ಆರಂಭದಲ್ಲಿಯೇ, ವೇಶ್ಯಾವಾಟಿಕೆ, ರಾಜಕಾರಣಿಗಳು ಹಾಗೂ ಪೋಲೀಸರ ನಡುವೆ ಇರುವ ಅಲಿಖಿತ ಒಪ್ಪಂದಗಳನ್ನೂ ಬಯಲು ಮಾಡುತ್ತಾರೆ. ಮುಖ್ಯವಾಗಿ ನಾಟಕದ ಪ್ರತೀ ದೃಶ್ಯದಲ್ಲೂ ಪತ್ರಕರ್ತನ ದರ್ಶನವಾಗುವುದಂತೂ ಸತ್ಯ.

## ಆಕ್ರಮಣ:

ಆಕ್ರಮಣ ಇದು ವ್ಯಕ್ತಿಯೊಬ್ಬನ ಮೇಲೆ, ಪ್ರೀತಿಯ ಆಕ್ರಮಣ, ಕಾಮದ ಆಕ್ರಮಣ. ಅಚ್ಚುಕಟ್ಟಾಗಿ ಓದಿ ಪಾಸು ಮಾಡಬೇಕಿದ್ದ ವಿದ್ಯಾರ್ಥಿ, ಪ್ರೇಮದ ಪರೀಕ್ಷೆ ಕಟ್ಟುತ್ತಾನೆ. ಮೊದಲ ಅಧ್ಯಾಯದ ಪ್ರಕರಣದಲ್ಲಿ, ಆರಂಭದಲ್ಲಿ ಕಾಮ ವಿಜೃಂಭಿಸುತ್ತಲೇ, ಅದು ಪ್ರೇಮದಲ್ಲಿ ಪರ್ಯವಸಾನಗೊಳ್ಳುತ್ತದೆ. ಅಲ್ಲಿ ನಾಯಕ ಅಗಲಿಕೆಯ ಪರೀಕ್ಷೆ ಎದುರಿಸುತ್ತಾನೆ. ಆ ಹೊತ್ತಿಗಾಗಲೆ ಲಕ್ಷ್ಮಿ ಮತ್ತು ರವಿಯರ ಮಧ್ಯೆ ಕೇವಲ ದೈಹಿಕ ಸಂಬಂಧದ ಕುರುಹುಗಳು ಮಾತ್ರ ಉಳಿದಿರುವುದಿಲ್ಲ. ಬದಲಿಗೆ ಹೃದಯದ ಮೇಲೆ ಗಾಢ ಪರಿಣಾಮವನ್ನೇ ಉಂಟುಮಾಡಿರುತ್ತದೆ.

ವಿಮರ್ಶಕ ಎಲ್.ಎಸ್. ಶೇಷಗಿರಿರಾಯರು ಅಭಿಪ್ರಾಯ ಪಡುವಂತೆ, ಆಕ್ರಮಣದ ಲಕ್ಷ್ಮಿ ಕನ್ನಡ ಕಾದಂಬರಿ ಲೋಕದಲ್ಲಿ ಒಂದು ವಿಶಿಷ್ಟ ಪಾತ್ರ. ರವಿಯೊಂದಿಗೆ ಸಂಪರ್ಕ ಬೆಳೆಸುವ ಹೊತ್ತಿನಲ್ಲೇ ಆಕೆಗೆ ಗಂಡನ ಮೇಲೆ ಪ್ರೀತಿ ಕಡಿಮೆಯಾಗುವುದಿಲ್ಲ! ಅವಳೇ ಹೇಳುವಂತೆ, ಗಂಡನೆಡೆಗಿನ ಅವಳ ಪ್ರೀತಿ ದಿನೇ ದಿನೇ ಹೆಚ್ಚುತ್ತಿದೆಯಂತೆ! ಗೃಹಿಣಿಯಾಗಿ ತನ್ನ ಕರ್ತವ್ಯಗಳಿಂದ ಆಕೆ ಎಂದು ವಿಮುಖಳಾಗುವುದಿಲ್ಲ. ಲಕ್ಷ್ಮಿ ಪಾತ್ರದ ವೈಶಿಷ್ಟ್ಯ ಅಡಗಿರುವುದೇ ಇಲ್ಲಿ.

ಮೇಲ್ನೋಟಕ್ಕೆ ಕಾದಂಬರಿಯಲ್ಲಿ ರವಿಗೆ ಸಂವೇದಿಯಾಗಿ ನಿಲ್ಲುವ ಪಾತ್ರ ಚಾಮಯ್ಯನದು. ಆತನು ಎರಡು ಮಕ್ಕಳ ತಾಯಿಯೊಂದಿಗೆ ಸಂಬಂಧ ಹೊಂದಿರುತ್ತಾನೆ. ಮೇಲಾಗಿ ಆ ಹೆಣ್ಣು ಯಾವುದೋ ಕಾರಣಕ್ಕೆ ಗಂಡನನ್ನು ಬಿಟ್ಟು ಬಂದಿರುವವಳು. ಅವಳಿಗೆ ಕಾಮದ ಸಹಜ ಅಗತ್ಯ ಇತ್ತು ಎನ್ನಬಹುದು. ಆ ಕಾರಣ ಚಾಮಯ್ಯನ ಸಂಬಂಧ ವಿಶೇಷವೇನಿಲ್ಲ. ಆದರೆ ಲಕ್ಷ್ಮಿ ಗಂಡನಿದ್ದೂ ರವಿಯನ್ನು ಬಯಸಿದ್ದು ವಿಶೇಷ. ಲಕ್ಷ್ಮಿ ಇನ್ನೂ ಮುಂದೆ ಹೋಗಿ, ಆಕೆ ಕೇವಲ ದೈಹಿಕ ಸುಖ ನೀಡುವ ಹೆಣ್ಣಾಗದೆ, ರವಿಯನ್ನು ಹಲವು ವಿಧದಲ್ಲಿ ನಿರ್ದೇಶಿಸುವ ಮಟ್ಟಕ್ಕೆ ಬೆಳೆಯುತ್ತಾಳೆ. ಕಾದಂಬರಿಯಲ್ಲಿ ರವಿ ಕಾಣುವ ಮೊದಲ ಕನಸಿನಲ್ಲಿ ಲಕ್ಷ್ಮಿ ಅವನನ್ನು ಮಗುವಿನಂತೆ ಮುದ್ದಿಸುತ್ತಾಳೆ. ಅಷ್ಟೇ ಅಲ್ಲದೆ, ಅವಳು ಎತ್ತಿಕೊಂಡು ಮುತ್ತು ಕೊಡುತ್ತಾಳೆ. ಈ ಸಂದರ್ಭಗಳಲ್ಲಿ ಲಕ್ಷ್ಮಿ ನಿಶ್ಚಿತವಾಗಿ, ಚಾಮಯ್ಯನ ಪ್ರೇಯಸಿಯನ್ನು ಮೀರಿ ನಿಲ್ಲುತ್ತಾಳೆ.

## ತೀರಾ ಭಿನ್ನ

'ನಿಮ್ಮನ್ನು ನೋಡಿದಾಗ ನಿಮ್ಮ ಮೇಲೆ ಮನಸಾಯ್ತು. ಅದೂ ಯಾಕೋ ಗೊತ್ತಿಲ್ಲ' ಎನ್ನುವ ಲಕ್ಷ್ಮಿ ಈ ಸೋಲಿನಲ್ಲೂ ಗೆಲುವನ್ನು ಕಾಣುತ್ತಾಳೆ. ಕಾಮವನ್ನೂ ಸಂಪೂರ್ಣವಾಗಿ ಅನುಭವಿಸುತ್ತಾಳೆ. ಯಾರಿಗೂ ಹೆದರಿದಂತೆ ಕಾಣುವುದಿಲ್ಲ.

ಗಂಡನಿಗೆ ಗೊತ್ತಾದರೂ ನೇರವಾಗಿ ಹೇಳಿಬಿಡುತ್ತೇನೆ ಎನ್ನುವ ಧಾರ್ಷ್ಟ್ಯ ಅವಳದು. ಅವಳಿಗೆ ಪಾಪ ಪ್ರಜ್ಞೆ ಕಾಡುವುದಿಲ್ಲ; ಏಕೆಂದರೆ ಅವಳು ತಾನು ಮಾಡುತ್ತಿರುವುದನ್ನು ತಪ್ಪು ಎಂದು ಭಾವಿಸುವುದೇ ಇಲ್ಲ! 'ರವಿ, ನಿಮ್ಮಿಂದ ಒಂದು ಮಗುವಾಗಿದ್ದರೆ, ಚೆನ್ನಾಗಿರೋದು' ಎನ್ನುವಾಗ ಆಕೆ ಕೇವಲ ಸುಖಕ್ಕಾಗಿ ಬಂದವಳಲ್ಲ ಎನಿಸುತ್ತದೆ. ಇವೆಲ್ಲದರ ಜೊತೆಗೆ ಸಮಾಜದಲ್ಲಿ ವ್ಯವಸ್ಥಿತವಾಗಿ ಬೇರೂರಿರುವ ಅಸಮಾನತೆಯನ್ನೇ ಅವಳು ತೀರ ಸುಲಭ ಭಾಷೆಯಲ್ಲಿ ಪ್ರಶ್ನಿಸುತ್ತಾಳೆ.

'ಗಂಡಸು ಇಬ್ಬರು ಹೆಂಡಂದಿರನ್ನು ಕಟ್ಟಿಕೊಂಡ್ರೂ ಅವನು ಗಂಡಸು ಅಂತ ಹೇಳ್ತಾರೆ. ಆದರೆ ಒಂದು ಹೆಣ್ಣು ಇಬ್ಬರು ಗಂಡಂದಿರನ್ನು ಕಟ್ಟಿಕೊಂಡರೆ, ಅವಳು ಹೆಂಗಸು ಅಂತ ಹೇಳೋಲ್ಲ. ಅಷ್ಟೇ ನೋಡಿ ವ್ಯತ್ಯಾಸ!

ಇಷ್ಟೆಲ್ಲಾ ಹೇಳಿದ ಲಕ್ಷ್ಮಿ, ವರ್ಗಗೊಂಡಿರುವ ಗಂಡನ ಜೊತೆ ಹೊರಡುತ್ತಾಳೆ. ಆಗ ರವಿಯನ್ನುದ್ದೇಶಿಸಿ ಲೇಖಕ 'ಪರೀಕ್ಷೆಯ ಒತ್ತಡ ಬಲವಾಯ್ತು' ಎನ್ನುತ್ತಾರೆ. ಇದು ಮುಂಬರಲಿರುವ ಕಾಲೇಜಿನ ಪರೀಕ್ಷೆಯೂ ಹೌದು, ಜೊತೆಗೆ ಅಗಲಿಕೆಯ ಪರೀಕ್ಷೆಯೂ ಹೌದು.

ಕಾದಂಬರಿಯ ನಿರೂಪಣೆ ಎಲ್ಲಿಯೂ ವಿವರವಾದ ವಿಶ್ಲೇಷಣೆಗಳಿಗೆ ತೊಡಗುವುದಿಲ್ಲ. ಏನೇ ಇದ್ದರೂ ಅದು ಪಾತ್ರಗಳ ಮುಖೇನ ಹೇಳಿಸಬೇಕೇ ಹೊರತು ಅದು ಸ್ಟೇಟ್‌ಮೆಂಟ್ ಆಗಬಾರದು ಎಂದು ರಾಜು ಅವರು ನಂಬಿದ್ದಾರೆ ಎನಿಸುತ್ತದೆ. ಅದೇ ಹೊತ್ತಿನಲ್ಲಿ ನಿರೂಪಕ ಹಲವಾರು ಸೂಕ್ಷ್ಮವಿಚಾರಗಳಿಗೆ ಆಳವಾದ ಸ್ಪರ್ಶನೀಡಿಲ್ಲ. ಲಕ್ಷ್ಮಿಯ ಆ ವಿಶಿಷ್ಟ ವರ್ತನೆಗೆ ಯಾವುದೇ ಸೂಕ್ತ ಕಾರಣ ದೊರಕುವುದಿಲ್ಲ.

ಕಾದಂಬರಿಯ ಎರಡನೇ ಅಧ್ಯಾಯದಲ್ಲಿ ಮುಖ್ಯ ಪಾತ್ರ 'ರವಿ' ತನ್ನ ವಿದ್ಯಾರ್ಥಿನಿಯೊಬ್ಬಳ ಮೋಹಕ್ಕೆ ಬಲಿಯಾಗುತ್ತಾನೆ. ನಂದಿನಿಯನ್ನು ತಾನು ಪ್ರೀತಿಸುತ್ತಿದ್ದೇನೆಂದು ಕೊಂಡೇ ಅವಳನ್ನು ಕಾಮಕ್ಕೆ ಆಹ್ವಾನಿಸುತ್ತಾನೆ. ಈ ಸಂದರ್ಭದಲ್ಲಿ ಪ್ರೀತಿಯ ನೆಪದಲ್ಲಿ ಕಾಮ ರಾರಾಜಿಸುತ್ತದೆ. ಆದರೆ ಈ ಹಿಂದಿನ ಅಧ್ಯಾಯದಲ್ಲಿ ಕಾಮದೊಂದಿಗೆ ಪ್ರೀತಿ ಆಟವಾಡುತ್ತದೆ.

ರವಿಯ ಕತೆಯನ್ನೇ ಪ್ರಮುಖವಾಗಿಟ್ಟುಕೊಂಡು, 'ಆಕ್ರಮಣ', ಪ್ರೇಮ ಕಾಮದ ಅನೇಕ ಸಾಧ್ಯತೆಗಳನ್ನು ಚರ್ಚಿಸುತ್ತದೆ. ರವಿಗೆ, ಲಕ್ಷ್ಮಿಯ ಸಾಂಗತ್ಯ ದೊರೆಯುತ್ತಿದ್ದಂತೆಯೇ, ತರಗತಿಯ ಶಕುಂತಲೆ ಬೇಡವೆನಿಸುತ್ತಾಳೆ. ಅದೇ ಹೊತ್ತಿನಲ್ಲಿ ಸೋಮು, ಬೀದಿಯ ವೈದ್ಯರ ಮಗಳು ರಮಾಳ ಹಿಂದೆ ಅಲೆದಾಡುತ್ತಾನೆ. ವೀಣಾಳೊಂದಿಗೆ ಸುಖ ಪಡೆಯುವ ಪರಮೇಶಿಗೆ, ಮದುವೆಯಾಗು ಅಂದರೆ

ಮೂಗು ಮುರಿಯುತ್ತಾನೆ. ವೀಣಾ, ಪಾರ್ವತಿಯರು ದೇವದಾಸಿಯೊಬ್ಬಳ ಮಕ್ಕಳು. ಅದೇ ಕಾರಣಕ್ಕೆ ಈ ಹುಡುಗರೂ ಅವರನ್ನು ನಿರಾಕರಿಸುತ್ತಾರೆ. ಹಾಗಂತ ವೀಣಾ ಪರಮೇಶಿಯನ್ನು ಕಾಡುವುದು ಕಡಿಮೆಯಾಗುವುದಿಲ್ಲ.

ಇವರೆಲ್ಲರನ್ನೂ ಮೀರಿಸುವಂತೆ ಜಗದೀಶನ ಪ್ರಸಂಗ! ಜಗದೀಶ ತನ್ನ ಮದುವೆಯಾಗದ ಚಿಕ್ಕಮ್ಮನ ಪೋಲಿ ಜೋಕ್‌ಗಳಿಗೆ ಮಾರುಹೋಗಿ ಆಕೆಯೊಂದಿಗೇ ಲೈಂಗಿಕ ಕ್ರಿಯೆಗೆ ಉತ್ಸಾಹ ತೋರಿಸಿ ಅವಮಾನಕ್ಕೊಳಗಾಗುತ್ತಾನೆ. ಕೃಷ್ಣಮೂರ್ತಿ, ತನ್ನ ಪ್ರೇಯಸಿ ನಳಿನಿ, ಯಾರದೋ ಜೊತೆಗೆ ಅಡ್ಡಾಡುವುದನ್ನು ಕಂಡು ಕಸಿವಿಸಿಕೊಳಗಾಗುತ್ತಾನೆ. ಅದೇ ಹೊತ್ತಿನಲ್ಲಿ ಲಕ್ಷ್ಮಿಯೂ ನಳಿನಿಯಂತೆಯೇ ಎಂದು 'ರವಿ' ಆತಂಕಪಡುತ್ತಾನೆ. ಹೀಗೆ ಪ್ರೇಮ-ಕಾಮಗಳ ನಡುವೆ ಉದ್ಭವಿಸಬಹುದಾದ ಎಲ್ಲಾ ಪ್ರಶ್ನೆಗಳನ್ನೂ ಇಲ್ಲಿ ನಿರೂಪಿಸಲಾಗಿದೆಯೇ ಹೊರತು, ಯಾವುದರ ಆಳಕ್ಕೂ ಇಳಿದು ಚರ್ಚಿಸಲಾಗಿಲ್ಲ.

ಇದೆಲ್ಲದರ ಜೊತೆಗೆ, ಕಾಲೇಜಿನ ಪ್ರಾಧ್ಯಾಪಕರುಗಳು ಪಾಠ ಮಾಡುವ ಪರಿ, ಶಿಕ್ಷಣ ವ್ಯವಸ್ಥೆ, ಇವೆಲ್ಲ ಇಲ್ಲಿ ಚಿತ್ರಿತವಾಗಿವೆ.

## ಉದ್ಭವ:

ಕಾದಂಬರಿಯಾಗಿ ನಾಟಕವಾಗಿ ಹಾಗೂ ಚಲನಚಿತ್ರವಾಗಿ ರೂಪುಗೊಂಡ ಕನ್ನಡದ ಮೊದಲ ಕೃತಿ 'ಉದ್ಭವ'. 1976ರಲ್ಲಿ ವೈಕುಂಠರಾಜುರವರು ಉದ್ಭವ ಕಾದಂಬರಿ ಬರೆದರು. ರಂಗಕರ್ಮಿ ಶ್ರೀನಿವಾಸ ಪ್ರಭು ಇದೇ ಕತೆಯನ್ನು ರಂಗಕ್ಕೆ ಅಳವಡಿಸಿ ಪ್ರಯೋಗಿಸಿದರು. ನಾಟ್ಯದರ್ಪಣ ತಂಡ ಹಾಗೂ ರಾಜ್ಯಾದ್ಯಂತ ಅನೇಕ ತಂಡಗಳು ಈ ನಾಟಕವನ್ನು ಪ್ರಯೋಗಿಸಿದವು. ಮೂಲ ಕಾದಂಬರಿ ತೆಲುಗು, ಹಿಂದಿ ಮತ್ತು ಮಲಯಾಳಂ ಭಾಷೆಗಳಿಗೆ ಅನುವಾದವಾಗಿದೆ. ಖ್ಯಾತ ಚಲನಚಿತ್ರ ನಿರ್ದೇಶಕ ಮೃಣಾಲ್‌ಸೇನ್ ಇದೇ ಕತೆ ಆಧರಿಸಿ ಸಿನಿಮಾ ನಿರ್ಮಿಸಲು ಉದ್ದೇಶಿಸಿದ್ದರು. ಅದೇ ತಾನೆ ಈ ಕೃತಿ ಇಂಗ್ಲಿಷ್‌ಗೂ ಅನುವಾದವಾಗಿತ್ತು. ಮೃಣಾಲ್‌ಸೇನ್ ಇಂಗ್ಲಿಷ್ ಪ್ರತಿಯನ್ನು ಕಳೆದುಕೊಂಡು ಚಿತ್ರ ನಿರ್ಮಿಸುವ ಯೋಜನೆ ಕೈಬಿಟ್ಟರು. ಸದ್ಯ ಇಂಗ್ಲಿಷ್ ಪ್ರತಿ ಲಭ್ಯವಿಲ್ಲ. ಇತ್ತೀಚೆಗೆ ವೈಕುಂಠರಾಜು ಅವರೇ ಸ್ವತಃ 'ಉದ್ಭವ'ವನ್ನು ನಾಟಕಕ್ಕೆ ರೂಪಾಂತರಿಸಿದ್ದಾರೆ.

1989ರಲ್ಲಿ ಕನ್ನಡದ ಚಲನಚಿತ್ರ ನಿರ್ದೇಶಕ ಕೂಡ್ಲು ರಾಮಕೃಷ್ಣ 'ಉದ್ಭವ' ಕತೆ ಆಧರಿಸಿ ಸಿನಿಮಾ ನಿರ್ಮಿಸಿದರು. ಅನಂತನಾಗ್, ರಾಗಣ್ಣನಾಗಿ ಅಭಿನಯಿಸಿದರು. ಬಾಲಕೃಷ್ಣ, ಕೆ.ಎಸ್. ಅಶ್ವತ್, ಸುಂದರರಾಜ್ ಮತ್ತಿತರರು ಮುಖ್ಯ ಪಾತ್ರದಲ್ಲಿದ್ದರು. ಚಿತ್ರ ಯಶಸ್ವಿಯಾಯಿತು.

ಉದ್ಭವದ ಕತೆ ಒಂದು ರಸ್ತೆಯ ಅಗಲೀಕರಣದ ಸುತ್ತ ಹೆಣೆದುಕೊಂಡಿದೆ. ಜನರ ದಡ್ಡತನವನ್ನೇ ಬಂಡವಾಳವನ್ನಾಗಿಸಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವ ರಾಗಣ್ಣ, ಗಣೇಶನ ಉದ್ಭವದೊಂದಿಗೆ ರಾಘವೇಂದ್ರರಾಯನಾಗಿ ರೂಪುಗೊಳ್ಳುತ್ತಾನೆ. ಮೊದಮೊದಲು ಬಾಡಿಗೆ ಮನೆ ಕೊಡಿಸುವುದು, ಆಸ್ತಿ ರಿಜಿಸ್ಟರ್ ಮಾಡಿಸುವ ಕಾರ್ಯದಲ್ಲೇ ಹಣ ಮಾಡುತ್ತಿದ್ದ ರಾಗಣ್ಣ ಟಾರು ರಸ್ತೆಯ ಮೇಲೇ ಚಾಣಾಕ್ಷತನದ ಬೀಜ ಬಿತ್ತಿ ಭರ್ಜರಿ ಫಸಲುಗಳಿಸುವುದೇ ಇಲ್ಲಿಯ ಕತೆ.

'ರಸ್ತೆ ಅಗಲವಾಗುತ್ತದಂತೆ' ಎಂದು ಇಲ್ಲದ ಸುದ್ದಿಯನ್ನು ರಾಗಣ್ಣನೇ ತನ್ನ ಶಿಷ್ಯರ ಮೂಲಕ ಹಬ್ಬಿಸುತ್ತಾನೆ. ರಸ್ತೆ ಅಗಲವಾದರೆ ತಮಗೆ ಲಾಭವೋ, ನಷ್ಟವೋ ಎಂದು ಬೀದಿಯ ವ್ಯಾಪಾರಿಗಳು, ಶ್ರೀಮಂತರು ಚಿಂತಿಸಲಾರಂಭಿಸುತ್ತಾರೆ. ಹೀಗೆ ಅಗಲೀಕರಣಕ್ಕೆ ಪರ ಮತ್ತು ವಿರೋಧದ ಎರಡು ಗುಂಪುಗಳು ನಿರ್ಮಾಣವಾಗುತ್ತವೆ. ರಾಗಣ್ಣ ಎರಡು ಗುಂಪಿನೊಂದಿಗೆ ಆಟವಾಡುತ್ತ, ಅವರಿಬ್ಬರಿಗೂ ಸಹಾಯ ಮಾಡುತ್ತೇನೆಂಬ ಸೋಗಿನಲ್ಲಿ ಶ್ರೀಮಂತನಾಗುತ್ತಾನೆ. ಕೊನೆಗೆ ಶ್ರೀಮಂತನೊಬ್ಬನ ಬೃಹತ್ ಮೊತ್ತದ ಆಸೆಗಾಗಿ ರಸ್ತೆಯ ಮಧ್ಯೆಯೇ ಗಣೇಶನನ್ನು ಉದ್ಭವ ಮಾಡಿ, ರಸ್ತೆಯ ಅಗಲೀಕರಣ ನಿಲ್ಲುವಂತೆ ನೋಡಿಕೊಳ್ಳುತ್ತಾನೆ.

ಕಾದಂಬರಿಕಾರರೇ ಹೇಳುವಂತೆ ಇದು ನೈಜ ಘಟನೆಯೊಂದರ ಪ್ರೇರಣೆಯಿಂದ ಬರೆಯಲಾದದ್ದು. ಹದಿನಾಲ್ಕು ವರ್ಷಗಳಿಂದ ಅವರು ನೋಡಿದ್ದ ರಸ್ತೆಯೊಂದು ಇಲ್ಲಿಯ ಕಥಾವಸ್ತು. 1962ರಲ್ಲಿಯೇ ಬೆಂಗಳೂರಿಗೆ ಬಂದ ಇವರಿಗೆ ಮಲ್ಲೇಶ್ವರಂ ಸರ್ಕಲ್‌ನಿಂದ ದೇವಯ್ಯ ಪಾರ್ಕ್‌ವರೆಗಿನ ರಸ್ತೆಯ ಇಂಚಿಂಚೂ ಚೆನ್ನಾಗಿ ಪರಿಚಯವಿದೆ. ಮಲ್ಲೇಶ್ವರಂ ಸರ್ಕಲ್‌ನಿಂದ ರಾಜಾಜಿನಗರಕ್ಕೆ ಹೋಗುವ ರಸ್ತೆಯಲ್ಲಿ ರೈಲು ಮಾರ್ಗಕ್ಕೆ ಅಡ್ಡವಾಗಿ ಒಂದು ಸೇತುವೆ ನಿರ್ಮಿಸಲಾಗಿದೆ. ಆ ಸೇತುವೆಯ ಪಕ್ಕದಲ್ಲೇ ಮತ್ತೊಂದು ಪುಟ್ಟ ಸೇತುವೆ ಇತ್ತು. ಅದು ತೀರಾ ಚಿಕ್ಕದು. ಬೃಹತ್ ವಾಹನಗಳು ಅಲ್ಲಿ ಸಂಚರಿಸುವಾಗ ಪಾದಚಾರಿಗಳು ಆತಂಕ ಪಡುವ ಸ್ಥಿತಿಯಿತ್ತು. 1965ರ ಸುಮಾರಿನಲ್ಲೇ ಈ ಸೇತುವೆ ಇರುವ ರಸ್ತೆಯನ್ನು ಅಗಲಗೊಳಿಸುವ ಪ್ರಕ್ರಿಯೆ ಆರಂಭವಾಯಿತು. ರಸ್ತೆಯ ಇಕ್ಕೆಲಗಳಲ್ಲಿರುವ ಅಂಗಡಿಗಳನ್ನು ಒಡೆದು ಹಾಕುವುದು ನಗರಸಭೆಯ ಉದ್ದೇಶ. ಆದರೆ ರಸ್ತೆಯ ಅಗಲೀಕರಣ ಬಯಸದ ಅಂಗಡಿಗಳವರು ಮತ್ತಿತರರ ತಂತ್ರದಿಂದಲೋ ಏನೋ ರಾತ್ರೋರಾತ್ರಿ ಗಣಪತಿ ಉದ್ಭವವಾಯಿತು. ರಸ್ತೆ ಅಗಲ ಮಾಡುವ ಚಿಂತನೆ ನಿಂತೇ ಹೋಯಿತು. ಆ ಕಾರಣವಾಗಿಯೇ ದೊಡ್ಡ ಸೇತುವೆಯನ್ನು ನಿರ್ಮಾಣ ಮಾಡಿ ಅದರಡಿಯಲ್ಲಿ ಜೋಡಿ ರಸ್ತೆಗಳು ಸಿದ್ಧಗೊಂಡದ್ದು. ಈ ನೈಜ ಘಟನೆಯೇ ಕಾದಂಬರಿಯಾಯಿತು. ಅಲ್ಲಿ ರಾಗಣ್ಣ ಎಂಬ ಪಾತ್ರ ಸೃಷ್ಟಿಯಾಯಿತು.

### 'ನಾನೇ ರಾಗಣ್ಣನಾ ಸಾರ್?'

ಈ ಕಾದಂಬರಿ ಪ್ರಕಟವಾಗಿ ಪ್ರಸಿದ್ಧಿಪಡೆಯಿತು. ಅದೇ ರಸ್ತೆಯ ಅನೇಕ ಜನ ಅದನ್ನು ಓದಿ 'ರಾಗಣ್ಣ ಯಾರಿರಬಹುದು' ಎಂಬ ಲೆಕ್ಕ ಹಾಕುತ್ತಿದ್ದರು. ಹಾಗೂ ಕಾದಂಬರಿಯ ಪಾತ್ರಗಳ ಜೊತೆ ಅನೇಕರು ತಮ್ಮನ್ನೇ ಗುರುತಿಸಿಕೊಳ್ಳುತ್ತಿದ್ದರು.

ಕಾದಂಬರಿಯ ಕೆಲವು ಪಾತ್ರಗಳು ನೈಜವಾದರೂ ರಾಗಣ್ಣ ಮಾತ್ರ ಇವರ ಕಲ್ಪನೆಯ ಫಲ. ಆದರೂ ಅನೇಕರು, ಕಾದಂಬರಿಕಾರರನ್ನು 'ಸಾರ್, ನಾನೇನಾ ಆ ರಾಗಣ್ಣ?' ಎಂದು ಪ್ರಶ್ನಿಸಿದ್ದೂ ಉಂಟು. ಯಾವುದೇ ಸೃಜನಶೀಲ ಲೇಖಕನನ್ನು ಪೇಚಿಗೆ ಸಿಲುಕಿಸುವ ಸಂಗತಿ ಇದು.

### ಕಾದಂಬರಿಯ ನಂತರ...

ಯು.ಆರ್. ಅನಂತಮೂರ್ತಿಯವರು ಈ ಕಾದಂಬರಿಯನ್ನು ವಿಮಾನದಲ್ಲೇ ಓದಿ ದೆಹಲಿ ವಿಮಾನ ನಿಲ್ದಾಣದಿಂದಲೇ ಪತ್ರ ಬರೆದಿದ್ದರು. 'ನಗರ ಜೀವನವನ್ನು ನೀವು ಸಮರ್ಥವಾಗಿ ಚಿತ್ರಿಸುತ್ತಿದ್ದೀರಿ.' ಎಂದು ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಅನಂತಮೂರ್ತಿಯ ಪತ್ರಕ್ಕಿಂತ ಸ್ವಾರಸ್ಯಕರವಾದ ಘಟನೆಯೊಂದು ಕಾದಂಬರಿಯ ಪರಿಣಾಮವಾಗಿ ನಡೆಯಿತು. ಬೆಂಗಳೂರಿನ ಇಂದಿರಾನಗರದ ಧೂಪನಹಳ್ಳಿಯಲ್ಲಿ ಒಂದು ಪಾರ್ಕ್. ಅದರ ಪಕ್ಕದಲ್ಲೇ ಒಂದು ನಿವೇಶನವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಾರ್ವಜನಿಕ ಉಪಯೋಗಕ್ಕೆಂದು ಮೀಸಲಿಟ್ಟಿತ್ತು. ತುಂಬಾ ದಿನಗಳ ಕಾಲ ನಿವೇಶನದ ಬಳಕೆಯ ಪ್ರಸ್ತಾಪವೇ ಬರಲಿಲ್ಲ. ಅದೇ ಸಂದರ್ಭದಲ್ಲಿ ಬಡಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಅಧಿಕಾರಿಗಳು ನಿವೇಶನದಲ್ಲಿ ದೇವಸ್ಥಾನವೊಂದರ ನಿರ್ಮಾಣ ಮಾಡಲು ಅನುಮತಿ ಕೋರಿದರು. ಎಷ್ಟೇ ದಿನಗಳು ಕಾದರೂ ಪ್ರಾಧಿಕಾರದಿಂದ ಯಾವ ಉತ್ತರವೂ ಬರಲಿಲ್ಲ.

ಕೆಲವೇ ತಿಂಗಳುಗಳಲ್ಲಿ ಪ್ರಾಧಿಕಾರ, ಸಾರ್ವಜನಿಕ ಉಪಯೋಗಕ್ಕೆಂದು ಮೀಸಲಿಟ್ಟಿದ್ದನ್ನು ರದ್ದುಪಡಿಸಿತು. ಹೀಗಾದಾಗ ಆ ನಿವೇಶನ ಖಾಸಗಿಯವರ ಪಾಲಾಗುವುದೆಂದು ಅರ್ಥ. ಇದನ್ನರಿತ ಸ್ಥಳೀಯ ನಿವಾಸಿವರ್ಗ ಪ್ರಾಧಿಕಾರದ ತೀರ್ಮಾನದ ವಿರುದ್ಧ ಕೋಪಗೊಂಡಿತು. ಮುಂದಿನ ಕ್ರಮ ಏನು ಎನ್ನುವಂತೆ ಸಭೆ ಕರೆದಾಗ, ಅಲ್ಲಿಯೇ ಒಬ್ಬರು 'ಉದ್ಭವ' ಕಾದಂಬರಿಯ ಉಪಾಯವನ್ನೇ ಹೇಳಿದರು. ನೆರೆದಿದ್ದವರೆಲ್ಲಾ ಮೆಚ್ಚುಗೆಯಿಂದ ಸಮ್ಮತಿಸಿದರು. ಆ ಸ್ಥಳದಲ್ಲೇ ಇಂತಿಷ್ಟು ಹಣ ಸಂಗ್ರಹವಾಯಿತು. ರಾತ್ರೋರಾತ್ರಿ ಗಣಪತಿ 'ಉದ್ಭವ'ವಾದ. ಉದ್ಭವವಾದ ದಿನದ ಸಂಜೆಯಿಂದಲೇ ದೇವಾಲಯದ ನಿರ್ಮಾಣ ಕಾರ್ಯ ಆರಂಭವಾಯಿತು.

ಕಾನೂನಿನ ದೃಷ್ಟಿಯಿಂದ ಅದು ಅಕ್ರಮ. ಆದರೂ ಪ್ರಾಧಿಕಾರಕ್ಕೆ ಅದನ್ನು ಕೆಡವಿ ಹಾಕುವ ಧೈರ್ಯ ಎಲ್ಲಿಂದ ಬರಬೇಕು?

ಈ ಘಟನೆಗೆ ವೈಕುಂಠರಾಜು ಪ್ರತಿಕ್ರಿಯಿಸುತ್ತ... 'ನನ್ನ ಕಾದಂಬರಿಯ ಆಶಯ ಅದಲ್ಲ. ನನ್ನ ಕಾದಂಬರಿಯಲ್ಲಿ ಗಣಪತಿಯ ವಿಗ್ರಹ ಉದ್ಭವವಾಗುವುದು ಮುಖ್ಯವಲ್ಲ. ಸ್ವಾರ್ಥಿಗಳು ಉದ್ಭವವಾಗುವುದು ಮುಖ್ಯ. ಆದರೆ ಒಂದು ಸಾಹಿತ್ಯ ಕೃತಿಯಿಂದ ಜನ ತಮಗೆ ಬೇಕಾದ ರೀತಿಯಲ್ಲಿ ಪ್ರೇರಣೆ ಪಡೆಯುತ್ತಾರೆ. ಇದು ಕಾದಂಬರಿಕಾರನ ತಪ್ಪೇ? ಎಂದು ಪ್ರಶ್ನಿಸುತ್ತಾರೆ.

## ಕತೆಗಳು

ಇವರು ಆಧುನಿಕ ನೀತಿಗಳನ್ನು ಹೊರತು ಪಡಿಸಿ ಬರೆದ ಕತೆಗಳು ಮೂರು ಮಾತ್ರ. ಅದರಲ್ಲೂ ಒಂದು ಅರ್ಧದಲ್ಲೇ ನಿಂತಿದೆ! ಉಳಿದ ಎರಡು ಕತೆಗಳೆಂದರೆ 'ಲಿಪ್ತ' ಮತ್ತು 'ಪ್ರತಿಷ್ಠೆ'. ಲಿಪ್ತ, ಇವರ ದೊಡ್ಡಪ್ಪನ ವ್ಯಕ್ತಿತ್ವವನ್ನು ಆಧಿರಿಸಿದ ಕತೆಯಾದರೆ, ಪ್ರತಿಷ್ಠೆ, ಕೌಟುಂಬಿಕ ಚೌಕಟ್ಟಿನಲ್ಲಿಯೇ ರೂಪುಗೊಂಡ ವಿಭಿನ್ನ ನೆಲೆಯ ಕತೆ.

ಉಳಿದ ಆಧುನಿಕ ಕತೆಗಳು ದಿನನಿತ್ಯದ ನೈಜ ಘಟನೆಗಳನ್ನು ಆಧರಿಸಿ ಪತ್ರಿಕೆಗೆ ಬರೆದ ಕತೆಗಳು. ಆಧುನಿಕ ಯುಗದಲ್ಲಿ 'ಬದುಕಲು' ಅಗತ್ಯವಾದ 'ನೈಮಣ್ಯ', ಮೋಸ, ಸುಳ್ಳು ಇವು ಈ ಕತೆಗಳ ಪ್ರಮುಖ ವಸ್ತು. ಪತ್ರಿಕೆಯ ಓದುಗರನ್ನು ಸೆಳೆದ ಈ ಕತೆಗಳು ಮೂರು ಸಂಪುಟಗಳಾಗಿ ಹೊರಬಂದಿವೆ.




ಶಿವರಾಮ ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ
ಹರಿಹರದಲ್ಲಿ ಸನ್ಮಾನ ಸಮಾರಂಭ ನಡೆಯಿತು.
ವೈಕುಂಠರಾಜು ಅಭಿನಂದನಾ ಭಾಷಣ ಮಾಡಿದರು.



ಒಂದು ಕಾಲಕ್ಕೆ ಕಾಂಗ್ರೆಸ್ಸಿನಲ್ಲಿ ಯಂಗ್‌ಟರ್ಕ್ ಎನಿಸಿಕೊಂಡಿದ್ದ ಚಂದ್ರಶೇಖರ್ ಅವರ
ಪತ್ರಿಕಾ ಸಂದರ್ಶನ ಕಾರ್ಯಕ್ರಮ
ಆಗ ವೈಕುಂಠರಾಜು ಪತ್ರಕರ್ತರ ಸಂಘದ ಅಧ್ಯಕ್ಷರಾಗಿದ್ದರು.



ಮಾಸ್ಟರ್ ಹಿರಣ್ಣಯ್ಯನವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನವಾದಾಗಿನ ಸಂದರ್ಭ
ಆಗಿನ ರಾಜ್ಯಪಾಲ ಶ್ರೀ ವೆಂಕಟಸುಬ್ಬಯ್ಯನವರು ಪ್ರಶಸ್ತಿ ಪ್ರದಾನ ಮಾಡಿದರು.



'ಆಕ್ರಮಣ' ಶೂಟಿಂಗ್ ಸಂದರ್ಭ
'ಆಕ್ರಮಣ' ವೈಕುಂಠರಾಜು ಅವರ ಕಾದಂಬರಿ
ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ ಚಿತ್ರ ತಯಾರಾಯಿತು.



ಕರ್ನಾಟಕ ಪತ್ರಿಕಾ ಅಕಾಡೆಮಿಯ
ಪ್ರಶಸ್ತಿಯನ್ನು ಆಗ
ಮುಖ್ಯಮಂತ್ರಿಯಾಗಿದ್ದ
ಜೆ. ಎಚ್. ಪಟೇಲರು ಪ್ರದಾನ
ಮಾಡಿದಾಗಿನ ಚಿತ್ರ



ಪ್ರಜಾವಾಣಿ ಲಲಿತಕಲಾ ಸಂಘದ
ಉದ್ಘಾಟನೆ
ವೈಕುಂಠರಾಜು ಸಂಘದ ಅಧ್ಯಕ್ಷರು



ಗಿರೀಶ್ ಕಾರ್ನಾಡ್ ಜೊತೆ



'ಆಕ್ರಮಣ' ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಮತ್ತು
ಛಾಯಾಗ್ರಾಹಕ ಎಸ್. ರಾಮಚಂದ್ರ ಅವರ ಜೊತೆ ಚರ್ಚೆ.



ಪತ್ರಿಕಾ ಸಂದರ್ಶನಕ್ಕೆ ಆಗಮಿಸಿದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರನ್ನು ಸ್ವಾಗತಿಸಿದಾಗ



ಎಮ್. ಗೋಪಾಲಕೃಷ್ಣ ಅಡಿಗರಿಗೆ ನಿಧಿ ಸಮರ್ಪಣೆ ಮತ್ತು ಸನ್ಮಾನ ಕಾರ್ಯಕ್ರಮವನ್ನು ರೂಪಿಸಿದವರು ವೈಕುಂಠರಾಜು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.



ಎಸ್. ನಿಜಲಿಂಗಪ್ಪ ಅವರ ಪತ್ರಿಕಾ ಸಂದರ್ಶನ ಕಾರ್ಯಕ್ರಮ.



# ಬಿ.ವಿ. ವೈಕುಂಠರಾಜುರವರ ಕೃತಿಗಳು

**ಕಾದಂಬರಿ :**
ಅಂತ್ಯ
ಆಕ್ರಮಣ
ಉದ್ಭವ
ಪರ್ಯಟನ
**ಕಥೆಗಳು :**
ಸನ್ಯಾಸಿಯ ಕುಂಕುಮ ಮತ್ತು ಇತರ ನೂರು ಆಧುನಿಕ ನೀತಿ ಕಥೆಗಳು
ನಿರ್ಲಿಪ್ತ
ಅದಲು ಬದಲು
**ರಂಗಭೂಮಿ :**
ಕನ್ನಡ ರಂಗಭೂಮಿ
**ನಾಟಕಗಳು :**
ಸಂದರ್ಭ
ಸನ್ನಿವೇಶ
ಕಾನನ್ ದೇವಿ
**ಜೀವನ ಚರಿತ್ರೆ**
ಪ್ರೊ.ಡಿ.ಎಲ್. ನರಸಿಂಹಾಚಾರ್
ನಾಟಕರತ್ನ ಗುಬ್ಬಿ ವೀರಣ್ಣ
ಟಿಪಿಕೈಲಾಸಂ
**ಸಂಪಾದನೆ :**
ಸಂಸ ನಾಟಕಗಳು (ಕರ್ನಾಟಕ ನಾಟಕ ಅಕಾಡೆಮಿಗಾಗಿ)
1979ರ ಕತೆಗಳು (ಕರ್ನಾಟಕ ಅಕಾಡೆಮಿಗಾಗಿ)
ಹದಿನೈದು ಕತೆಗಳು (ಮಾಸ್ತಿಯವರಿಗಾಗಿ)
**ಸಂಪಾದಕರ ಡೈರಿ :**
1984, 1985, 1986 ಸಂಪುಟಗಳು
ಸಂಪಾದಕರ ಡೈರಿ ಸಮಗ್ರ (1987, 1988, 1989)
**ಸಂಕೀರ್ಣ :**
ಸಪ್ತಶೃಂಗ
ಸ್ಪಂದನ
**ವಿಶ್ಲೇಷಣೆ :**
ಸಾಹಿತ್ಯ ಸಂವಾದ
ಸಿನಿಮಾತು (50 ವರ್ಷಗಳ ಕನ್ನಡ ಚಿತ್ರರಂಗ)